ಸಭಾ ಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. JULY 1870. ಅಂಕೆ ೧.

ಅಪ್ರತಿನಾಮವು.

ಹಿಂದು ಜನರಾಗಲಿ, ಮುಸಲ್ಮಾನರಾಗಲಿ, ಚೀನ ದೇಶದವರಾಗಲಿ, ಹಬಿಷಿಯವರಾಗಲಿ, ದ್ವೀಪಾಂತರಗಳ ಕಿರಾತಕರಾದರೂ ಸಹ, ಸಮಸ್ತವುಗಳ ಸೃಷ್ಟಿಕರ್ತನೂ ಒಡೆಯನೂ ಆಗಿರುವ ದೇವರ, ಆತನ ತ್ರಾಣ ಮಹತ್ವ ದಯ ಪ್ರೀತಿ ಇತ್ಯಾದಿ ಗುಣಲಕ್ಷಣಗಳ ವಿಷಯವಾದ ಪ್ರಸಂಗಗಳನ್ನು ಅಡ್ಡಿ ಮಾಡದೆ, ಮನೋರಾಜಿ ಕಳ ಕೊಳ್ಳದೆ, ಸಂತೋಷವಾಗಿ ಸಹ ಲಾಲಿಸಿದರೂ, ಯೇಸುವಿನ ಹೆಸರು ಉಚ್ಚಾರಣೆಯಾಗಿ ಕೇಳಿಸುತ್ತಲೇ, ಅವರಲ್ಲಿ ವೈಮನಸ್ಯವೂ ವಿರೋಧವೂ ಹಗೆಯೂ ಹುಟ್ಟುವದುಂಟಲ್ಲಾ? ಇದೇ ಪ್ರಕಾರ ಕ್ರೈಸ್ತಮತಸ್ಥರಾಗಿ ಹುಟ್ಟಿ, ಆದರೆ ಸಹಜವಾದ ಸ್ವಭಾವ ಗುಣ ಮನಸ್ಸುಗಳನ್ನು ಇನ್ನು ನವೀಕರಿಸಿ ಕೊಳ್ಳದೆ, ಸದ್ಭಕ್ತಿ ಸದ್ವಿಶ್ವಾಸದಲ್ಲಿ ಶೇರಿ ಸತ್ಕ್ರೈಸ್ತರಾಗದೆ ಇರುವಂಥವರಲ್ಲಿಯೂ ನಡೆಯುತ್ತಿರುತ್ತದೆ. ಪರಮ ತಂದೆಯಾದ ದೇವರನ್ನೂ ಧರ್ಮನೀತಿಗಳನ್ನೂ ಕುರಿತು ಪ್ರಸ್ತಾಪಿಸಿ ಮಾತಾಡುವದಕ್ಕೆ ಅಡ್ಡಿ ಮಾಡದೆ, ಒಂದು ವೇಳೆ ಸಮ್ಮತಿಸಿ, ಸಂತೋಷ ಪಡುವವರಾಗಿ ಹೋದಾರು. ಆದರೆ ಯೇಸುನಾಥನ ಸುದ್ದಿಯನ್ನು ತೆಗದರೆ, ಜನರ ಹಾಲಿನಲ್ಲಿ ಮಣ್ಣು ಹಾಕಿದ ಹಾಗೆ ಆಗುತ್ತದೆ. ಸದ್ವೇಶದ ಸಾರಾಂಶವೂ ಮಧ್ಯಮಣಿಯೂ ಆಗಿರುವಂಥಾ ದೇವವಾಕ್ಯವೆಂಬ ಜೋತಿರ್ಮಂಡಲದಲ್ಲಿ ಸೂರ್ಯನಂತೆ ಪ್ರಕಾಶಮಯವಾಗಿ ಹೊಳೆಯುವಂಥಾ, ರಕ್ಷಾತ್ರಾಣಭರಿತವಾಗಿಯೂ, ನಿತ್ಯ ರಕ್ಷಣೆಯನ್ನು ಹೊಂದುವವರೆಲ್ಲರಿಗೆ ಹಾಲು ಜೇನು ಸಕಲ ಮಧುರ ರಸಾದಿಗಳಿಗಿಂತ ಇಷ್ಟವಾಗಿಯೂ ಇರುವಂಥಾ ಈ ನಾಮವು ಗುಣ ಪಡದಂಥಾ ಮನುಷ್ಯನ ಹೃದಯಕ್ಕೆ, ಕಣ್ಣಿಗೆ ಮೆಣಸಿನ ಪುಡಿಯು, ಅಂಗಾಲಿಗೆ ಮುಳ್ಳು ಹ್ಯಾಗೋ, ಹಾಗೆಯೇ; ಮನುಷ್ಯನ ಸ್ವಾಭಾವಿಕ ಬುದ್ಧಿಗೆ ಈ ಹೆಸರು ಯಾವಾಗಲೂ ಹುಚ್ಚುತನವಾಗಿಯೂ ಶಂಕಾಟಂಕವಾಗಿಯೂ ಕಾಣುವದು. ಸತ್ಕ್ರೈಸ್ತ ಭಕ್ತಿಯಲ್ಲಿ ಶೇರದ ಮನುಷ್ಯನಿಗೆ ಈ ಹೆಸರಿಗಿಂತ ಅರೋಚಿಕೆಯಾ

ದದ್ದೂ ಅಸಹ್ಯವಾದದ್ದೂ ಏನೊಂದೂ ಇಲ್ಲ. ಈ ಸಂಗತಿಯು ಅತ್ಯಾಶ್ಚರ್ಯದ ಮಾತಾಗಿರುವದಲ್ಲದೆ, ಉಪಯುಕ್ತವಾದ ಬುದ್ಧಿಸೂಚನಾಪ್ರಯುಕ್ತವಾಗಿದೆ. ಸರ್ವಸಾಧಾರಣ ಈ ಸಂಗತಿಯಿಂದಲೂ ಯೇಸುವಿನ ಹೆಸರಿನಲ್ಲಿ ಗೋಪ್ಯಾರ್ಥಕವಾದ ದಿವ್ಯ ತ್ರಾಣ ಬಲಗಳುಂಟೆಂಬುವದಕ್ಕೆ ಒಂದು ಬಗೆಯ ಅನುಭವಸಿದ್ಧಾಂತವಾಗುತ್ತದೆ.

ಹೀಗಿರುವದರಿಂದ ಯೇಸುವಿನ ಹೆಸರಿನ ವಿಷಯದಲ್ಲಿಯೂ ಯಾವನಾದರೊಬ್ಬನ ಭಾವ ಅನುಭವ ಮನೋಗತಗಳು ಯಾವ ಪ್ರಕಾರವಾಗಿ ಹೋಗುತ್ತವೋ, ಆ ಪ್ರಕಾರವಾಗಿ ಅವನ ಗತಿಯು ಸುಗತಿಯಾಗಿಯಾಗಲಿ ದುರ್ಗತಿಯಾಗಿಯಾಗಲಿ ಹೋಗುವದೆಂಬದು ನಿಶ್ಚಯ. ಈ ಹೆಸರು ಯಾರಿಗೆ ಬೇಡವಾಗಿರುತ್ತದೋ, ಅಂಥವರಿಗೆ ಸದ್ವೇದವೆಂಬ ಭಂಡಾರದ ಬಾಗಲನ್ನು ತೆರೆಯುವ ಬೀಗದ ಕೈಯೂ ಹೃತ್‌ಸಮಾಧಾನದ ಸೌಕರ್ಯವೂ ಮೋಕ್ಷಮಾರ್ಗವೂ ಶಿಕ್ಕವು. ಯಾಕಂದರೆ: ನಾನು ಅವನೇ ಅಂದರೆ ಸತ್‌ಗುರುವೂ ಜಗದ್ರಕ್ಷಕನೂ ಎಂದು ನೀವು ನಂಬದೆ ಹೋದರೆ, ನಿಮ್ಮ ಪಾಪಗಳಲ್ಲಿ ಸಾಯುವಿರಿ ಎಂತಲೂ ನನ್ನ ಮುಖಾಂತರವಲ್ಲದೆ ಯಾವನೂ ತಂದೆಯ ಬಳಿಗೆ ಬರುವದಿಲ್ಲವೆಂತಲೂ ಕರ್ತನು ಅರುಹಿ ಹೇಳಿದ್ದಾನೆ. ಮತ್ತ್ಯಾವನಲ್ಲಿಯೂ ರಕ್ಷಣೆ ಇಲ್ಲ; ಹ್ಯಾಗಂದರೆ ಅದರಿಂದ ನಾವು ರಕ್ಷಿಸಲ್ಪಡ ಬೇಕೆಂದು ಆಕಾಶದ ಕೆಳಗೆ ಮನುಷ್ಯರಲ್ಲಿ ಕೊಡಲ್ಪಟ್ಟ ಬೇರೆ ಹೆಸರು ಇಲ್ಲವೇ ಇಲ್ಲವೆಂಬ ಮಾತು ರುಜುವಾಗಿದೆ.

ಹಿಂದಿನ ವಿವರದ ನಿಜತ್ವವನ್ನು ಈಗ ನಡೆಯುವ ಶತಮಾನದ ಪ್ರಾರಂಭದಲ್ಲಿ ಸಂಭವಿಸಿದ ಒಂದು ಸಂಗತಿಯು ನಿದರ್ಶನವಾಗಿ ಹೆಚ್ಚು ವರ್ಣನೆ ಮಾಡಿ ತೋರಿಸುವ.

ಸಕ್ಸೆನ್ ದೇಶದ ಹೆಸರ್ಗೊಂಡ ರಾಜ್ಯಭಾರಜ್ಞನಾದ ಒಬ್ಬ ಪ್ರಭುವು, ಅವಸಾನ ಕಾಲ ಬಂದಾಗ, ಅಸಾಧ್ಯ ರೋಗದಲ್ಲಿ ಬಿದ್ದಿರಲಾಗಿ, ಪರಿಚಿತನಾದ ಒಬ್ಬ ಬೋಧಕನನ್ನು ತನ್ನ ಹತ್ತರ ಕರಿಸಿ, ಇವನಿಗೆ—ಐಯಾ ನಾನು ಬಹಳ ಅಸ್ವಸ್ಥವಾಗಿ ಬಿದ್ದಿದ್ದೇನೆ. ನಾನು ಗುಣವಾಗದೆ ತೀರಿ ಹೋಗುವ ಹಾಗೆ ಕಾಣುತ್ತದೆ. ನೀವು ಧರ್ಮಸಂಬಂಧವಾದ ಸಂಭಾಷಣೆಗಳನ್ನು ನನ್ನ ಸಂಗಡ ಮಾಡ ಬೇಕೆಂದು ಅಪೇಕ್ಷಿಸುತ್ತೇನೆ. ಆದರೆ ನಿಮಗೆ ನಿಷ್ಪ್ರಯೋಜನವಾದ ಕಷ್ಟ ಬೀಳದ ಹಾಗೆ, ಈಗಲೇ ಮಟ್ಟಮೊದಲಾಗಿ ಯೇಸು ಕ್ರಿಸ್ತನ ಯಾವ ವೃತ್ತಾಂತವನ್ನಾದರೂ ಕೇಳಲಿಕ್ಕೆ ನನಗೆ ಖುಷಿ ಇಲ್ಲವೆಂದು ಅರಿಕೆ ಮಾಡುತ್ತೇನೆ, ಅಂದನು.

ಆ ಬೋಧಕನು—ಇದನ್ನು ನೀವು ನನಗೆ ಮೊದಲಿನಲ್ಲಿ ಹೇಳಿದ್ದು ಬಹು ಒಳ್ಳೇದಾಯಿತು; ಯಾಕಂದರೆ ನೀವು ಇದನ್ನು ನನಗೆ ತಿಳಿಸದಿದ್ದರೆ, ಆತನೇ ನನ್ನ ಸಂಭಾಷಣೆಗಳ ಪ್ರಾಮುಖ್ಯ ಪ್ರಸ್ತಾಪವಾಗಿರುತ್ತಿದ್ದನು. ಆದರೆ ಚಿಂತಿಲ್ಲ, ಇರಲಿ; ಮಾತಾಡಲಿಕ್ಕೆ ಯೋಗ್ಯವಾದ ಬೇರೆ ಸಂಗತಿಗಳು ಅನೇಕವುಗಳುಂಟಲ್ಲ? ಇಂಥಾದ್ದೊಂದನ್ನು ಈಗಲೇ ಹಿಡಿದು, ತೊಡಗಿ ನಿಮ್ಮ ಹತ್ತರ ಒಂದು ಮಾತನ್ನು ಕೇಳುತ್ತೇನೆ; ಏನಂದರೆ: ದೇವರ ವಿಷಯದಲ್ಲಿ ನಿಮ್ಮ ಸಂಗಡ ಮಾತಾಡಲಿಕ್ಕೆ ಅಪ್ಪಣೆಯೋ? ಎಂದದಕ್ಕೆ ಆ ಧೊರೆ—ಹೌದು, ದೇವರನ್ನು ಕುರಿತು ನೀವು ಹೇಳುವಂಥಾದ್ದೆಲ್ಲವನ್ನು ನಾನು ನಿಶ್ಚಯವಾಗಿ ಸಂತೋಷದಿಂದ

ಕೇಳುವೆನು; ಯಾಕಂದರೆ ಭಗವಂತನನ್ನು ನಾನು ಸರ್ವದಾ ಪೂಜ್ಯವೆಂದೆಣಿಸುತ್ತಾ ಬಂದಿದ್ದೇನೆಂದು ಬದಲುತ್ತರ ಕೊಟ್ಟನು. ಆಗ ಬೋಧಕನು—ಈ ವಿಷಯದಲ್ಲಿ ನೀವು ನನಗೆ ಒಪ್ಪಿಕೆಯಾಗಿರುವದರಿಂದ, ಸಂತೋಷ ಪಡುತ್ತೇನೆಂಥೇಳಿ, ಮನುಷ್ಯರ ಮೇಲಣ ದೇವರ ಪ್ರೀತಿಯನ್ನು ಕುರಿತು ಬಹು ಸ್ವಾರಸ್ಯವಾಗಿಯೂ ಮನೋಹರವಾಗಿಯೂ ಮಾತಾಡಲಾರಂಭಿಸಿದನು. ಮಾತಾಡಿ ತೀರಿಸಿದ ಬಳಿಕ ಆ ರೋಗಿಷ್ಠನು ಬೋಧಕನ ಕೈಯನ್ನು ಹಿಡಿದು, ವಿನಯವಾಗಿಯೂ ಕಾಂಕ್ಷಿತನಾಗಿಯೂ, ಬೇಗ ತಿರುಗಿ ತನ್ನಲ್ಲಿಗೆ ದಯ ಮಾಡಬೇಕೆಂದು ಬೆಸಗೊಂಡನು.

ಆ ಬೋಧಕನು ಎರಡನೇ ಸರ್ತಿ ಬಂದಾಗ, ಆ ಪ್ರಭುಧೊರೆಯು ವಂದನೆ ಮಾಡಿ, ಆಸನ ಕೊಡಿಸಿ, ಬಹು ಮಮಕಾರದೊಂದಿಗೆ ಅವನಿಗೆ ಹೇಳಿದ್ದು—ಐಯಾ! ಬಹು ಸಂತೋಷ ಆಶೆಯುಳ್ಳವನಾಗಿ, ನೀವು ತಿರುಗಿ ನನ್ನನ್ನು ದರ್ಶಿಸ ಬರುವದನ್ನು ದಾರಿ ನೋಡುತ್ತಿದ್ದೆ. ಈ ಹೊತ್ತು ಏನು ಮಾತಾಡಿ ದಯ ಪಾಲಿಸುತ್ತೀರಿ? ಅನ್ನಲು, ಬೋಧಕನು, ದೇವರ ಸರ್ವತ್ರಾಣ ಸರ್ವಜ್ಞಾನ ಇಂಗಿತಜ್ಞತೆಗಳ ವಿಷಯವಾಗಿ ಧಾರಾಳವಾಗಿ ನುಡಿಯಲುಪಕ್ರಮಿಸಿದನು. ಆದರೆ ಬೋಧಕನ ಈ ಪರಿಯ ಪ್ರಸಂಗವು ಅವನಿಗೆ ಚೆಲುವಾಗಿಯೂ ವಾಚಿಮಿಯಾಗಿಯೂ ಮಹತ್ತಾಗಿಯೂ ತೋಚಿದ್ದಲ್ಲದೆ, ಭಯಂಕರವಾಗಿ ತೋರದೆ, ನಿದ್ರಾವಸ್ಥೆಯಲ್ಲಿದ್ದ ಅವನ ಮನೋಸಾಕ್ಷಿಯನ್ನು ಎಬ್ಬಿಸದೆ ಹೋಯಿತು.

ಮತ್ತೊಂದು ದಿನದಲ್ಲಿ ಬೋಧಕನು ಪೂರ್ಣ ನಿಷ್ಕಳಂಕವಾದಂಥಾ, ದೋಷ ಲವಷ್ಟಾದರೂ ಇಲ್ಲದಂಥಾ ದೇವರ ಪರಿಶುದ್ಧತ್ವವನ್ನು ವಿವರಿಸುವಾಗ, ಪಾಪರಹಿತ, ಪರಿಶುದ್ಧ ಪರಮಾತ್ಮನು ಪಾಪಮಯವಾದದ್ದನ್ನೂ ಅಪವಿತ್ರವಾದದ್ದನ್ನೂ ಯಾವತ್ತು ಸಹಿಸಲಾರದೆ, ತನಗೆ ದೂರ ಮಾಡ ಅವಶ್ಯವೆಂದು ಪರಿಷ್ಕಾರವಾಗಿಯೂ ವಾಗ್ಢೋರಣೆಯಾಗಿಯೂ ಸಾಧಿಸಿದನು. ನಾಲ್ಕನೇ ಸಂಭಾಷಣೆಯ ಪ್ರಸ್ತಾಪವು ಎಂದಿಗಾದರೂ ಭಂಗ ಪಡ ಕೂಡದಂಥಾ, ನ್ಯಾಯವನ್ನು ವಾರೆಯಾಗಿ ಬಿಡದಂಥಾ, ಸತ್ಯವನ್ನು ಅನೀತಿಯಿಂದ ಹಿಡಿದು ಕೊಳ್ಳುವ ಸಕಲ ಮನುಷ್ಯರ ಭಕ್ತಿಹೀನತ್ವದ ಮೇಲೆಯೂ ಅನೀತಿಯ ಮೇಲೆಯೂ ತನ್ನ ಕೋಪವನ್ನು ಪರಲೋಕದಿಂದ ಪ್ರಕಟಿಸ ಹೋಗಲಿಕ್ಕಿರುವಂಥಾ ದೇವರ ನೀತಿಸ್ವರೂಪದ ವಿಷಯದ್ದಾಗಿತ್ತು.

ಆದರೆ ಈ ವಾಕ್ಯದ ಕೊಂಡಿಗೆ ತಪ್ಪಿಸಿ ಕೊಳ್ಳಲಾರದೆ ಆ ವ್ಯಾಧಿಷ್ಟನು ಕೋಪವೂ ಭಯವೂ ಆವೇಶವಾಗಿ—ನಿಲ್ಲಿ! ದಯ ಮಾಡಿ, ನಿಲ್ಲಿ! ಈ ಮಾತು ನನಗೆ ದಕ್ಕದು; ಪರಾತ್ಪರ ದೇವರು ನೀವು ವರ್ಣಿಸಿದಷ್ಟು ನೀತಿವಂತನೂ ಪರಿಶುದ್ಧನೂ ಆಗಿರುವ ಪಕ್ಷದಲ್ಲಿ ನಾನು ರಕ್ಷಾಹೀನನಾಗಿ ಸಾಯ ಬೇಕು ಎಂಬದಾಗಿ ಹೇಳಿದ್ದಕ್ಕೆ, ಬೋಧಕನು ಏನೂ ಪ್ರತ್ಯುತ್ತರ ಕೊಡದೆ, ಎದ್ದು, ಮೋರೆ ಗಂಭೀರವಾಗಿ ಬಗ್ಗಿಸಿ, ಬೆತ್ತದ ಕೋಲನ್ನು ಹಿಡಿದು, ಹೊರಟು ಹೋದನು. ತದನಂತರದಲ್ಲಿ ಅವನು ರೋಗಿಷ್ಠನಾದ ಆ ಧೊರೆಯ ಹತ್ತರ ಮತ್ತು ಹೋಗಲಿಲ್ಲ. ಅವನು ಭೇಟಿಗೆ ಬಾರದ ದಿವಸಗಳೊಂದರ ಮೇಲೊಂದು ಸಂದು ಹೋದದರಿಂದ, ಆ ಧೊರೆ ಕಡೆಯಲ್ಲಿ ತನ್ನ ಜವಾನರಲ್ಲೊಬ್ಬನನ್ನು ಕಳುಹಿಸಿ, ಅವನು

ತಿರುಗಿ ದಯ ಮಾಡಿ ಬರ ಬೇಕೆಂದು ಬೇಡಿ ಕೊಂಡನು. ಬೋಧಕನು ಬಂದು, ಆ ರೋಗಿಷ್ಠನ ಕೊಠಡಿಯಲ್ಲಿ ಪ್ರವೇಶಿಸಿದ ಕೂಡಲೇ ಇವನು ಭಯಾನ್ವಿತವಾದ ಸ್ವರದಿಂದ—ಐಯಾ! ನೀವು ಇಷ್ಟು ದಿವಸ ಬಾರದೆ ಹೋದದ್ದು ಇದೇನಕಟಾ? ಸಂದೇಹ ಭಯಾದಿಗಳು ಅವಾಂತರವಾಗಿ ನನ್ನ ಮನಸ್ಸಿಗೆ ಹತ್ತಿದ್ಧಾವೆ; ನಾನು ನರಕದ ವೇದನೆಯಲ್ಲಿಯೋ? ನರಕದ ವೇದನೆ ನನ್ನಲ್ಲಿಯೋ? ನಾನರಿಯೆ. ನನ್ನ ಭಯವು ಪರಿಹಾರವಾಗಿ, ನಿಮ್ಮ ಸಂಭಾಷಣೆಗಳು ನನಗೆ ಹರಣ ಮಾಡಿದ ಮನೋರಾಜಿ ತಿರುಗಿ ಬರುವ ಹಾಗೆ, ನನ್ನನ್ನು ಕನಿಕರಿಸಿ, ಏನಾದರೂ ಉಪಶಮನ ಮಾಡಿರಿ. ಕ್ರೂರವಾಗಿ ಪೀಡಿಸುವಂಥಾ ನಿಮ್ಮ ಉಕ್ತಿಗಳನ್ನು ಸ್ವಲ್ಪ ತಂಪು ಮಾಡ ಬೇಕು. ಹ್ಯಾಗಾದರೂ ನನ್ನನ್ನಾದರಿಸಿ ಸಮಾಧಾನ ಪಡಿಸ ಬೇಕು ಎಂದು ಹೇಳಿದನು. ಇದಕ್ಕೆ ಬೋಧಕನು ಅಂದದ್ದು—ರಾಯರು ಇಂಥಾ ಮನೋವ್ಯಥೆಯಲ್ಲಿರೋಣದಕ್ಕೆ ನಾನು ದುಃಖ ಪಡುತ್ತೇನೆ. ಆದರೆ ನಾನು ಆ ಸಾರಿ ಹೇಳಿದ ವಾಕ್ಯಗಳಲ್ಲಿ ಒಂದನ್ನಾದರೂ ತೆಗದು ಹಾಕಲಾರೆ. ಯಾರ ಸಂಗಡ ನಮಗೆ ಕಾರ್ಯ ಉಂಟೋ, ಆ ಕರ್ತನಾದ ದೇವರು ದಯಾಗುಣಾಬ್ಧಿಯಾಗಿದ್ದಾಗ್ಯೂ ಸರ್ವಜ್ಞನೂ ಪರಿಶುದ್ಧನೂ ನೀತಿವಂತನೂ ಸಹಾ ಆಗಿದ್ದು, ಅನ್ಯಾಯ ಭಕ್ತಿಹೀನತ್ವ ಇತ್ಯಾದಿ ಪಾಪಗಳಿಗೆ ತಕ್ಕ ಪ್ರತಿಫಲವನ್ನು ಕೊಡದೆ ಹೋಗಲಾರನು. ನಾನು ನಿಮಗೆ ಆದರ ಕೊಡುವ ಸತ್ಯದ ಬೇರೆ ವಾಕ್ಯಗಳನ್ನು ಹೇಳಿ, ನಿಮ್ಮ ಹೃದಯಕ್ಕೆ ಬಿದ್ದಿರುವ ಘಾಯಗಳನ್ನು ಎಣ್ಣೆ ಹಾಕಿ, ಕಟ್ಟಿ ಉಪಶಮನ ಪಡಿಸುವ ಒಂದು ಉಪಾಯ ನನಗೆ ಕಂಡರೂ, ಅದನ್ನು ಪ್ರಯೋಗ ಮಾಡಲಿಕ್ಕೆ ಅಪ್ಪಣೆ ಇಲ್ಲವಲ್ಲಾ. ಹೀಗಿರುವಾಗ್ಯೆ ನಿಮಗೆ ಸಹಾಯ ಮಾಡ ಬೇಕೆಂಬ ಮನಸ್ಸು ನನಗೆ ಎಷ್ಟಾಗಿದ್ದಾಗ್ಯೂ ಸಹಾಯ ಮಾಡಲಾರದೆ, ಭೀತಿಕರವಾದ ಈ ದೌರ್ಭಾಗ್ಯದ ಮನಸ್ಥಿತಿಯಲ್ಲಿಯೇ ನೀವು ಮರಣ ಹೊಂದಿ, ನಿತ್ಯ ದುರ್ಗತಿಯಲ್ಲಿ ಬೀಳಗೊಡಿಸ ಬೇಕು.

ಹಾಗಲ್ಲಪ್ಪಾ! ನನ್ನನ್ನು ರಕ್ಷಿಸುವಂಥಾದ್ದೇನಾದರೂ ನನಗೆ ತಿಳಿಸ ಬೇಕು. ನಾನು ಬಿದ್ದ ಶೆರೆಯೊಳಗಿಂದ ತಪ್ಪಿಸಿ ಕೊಳ್ಳುವ ಮಾರ್ಗ ಕಂಡರೆ, ನನಗೆ ಹೇಳಿ ತೋರಿಸ ಬೇಕು ಎಂದು ಮನೋವ್ಯಾಕುಲದ ಅತಿಶಯದಿಂದ ಆ ಧೊರೆ ಕೂಗಿ ಹೇಳಿದ್ದಕ್ಕೆ, ಬೋಧಕನು—ಇಂಥಾ ಮಾರ್ಗ ನಾನು ಬಲ್ಲೆ; ಆದರೆ ಹೇಳಿ ತೋರಿಸ ಬೇಕಾದರೆ, ನಾನು ಯೇಸು ಕ್ರಿಸ್ತನ ವಿಷಯದಲ್ಲಿ ಮಾತಾಡ ಬಾರದೆಂಬ ಅಪ್ಪಣೆ ರದ್ದಾಗ ಬೇಕು, ಅಂದದ್ದಕ್ಕೆ ಪ್ರಭುವು—ಆಗಲಿ! ಆಗಲಿ! ನಿಮ್ಮ ಮನಸ್ಸಿಗೆ ಸರಿ ತೋಚುವಂಥಾದ್ದನ್ನು ಮಾತಾಡಿರಿ; ನಾನು ಬಿದ್ದಿರುವ ನರಕಾವಸ್ಥೆಯ ವೇದನೆಯೊಳಗಿಂದ ತಪ್ಪಿಸುವ ಉಪಾಯವನ್ನು ಮಾತ್ರ ತಿಳಿಸಿದರೆ, ಸೈ ಎಂತ ಅವಸರವಾಗಿ ಕೂಗಿ ಹೇಳಿದನು. ಆಗ ಬೋಧಕನು ಜೇಬಿನಿಂದ ಹೊಸ ಒಡಂಬಡಿಕೆಯ ಪುಸ್ತಕವನ್ನು ತೆಗದು, ಓದಲಾರಂಭಿಸಿದನು. ಯೇಸು ಕ್ರಿಸ್ತನು ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಅವತರಿಸಿ ಬಂದನೆಂದೂ, ಆತನ ರಕ್ತವು ಎಲ್ಲಾ ಪಾಪಗಳಿಂದ ಶುದ್ಧ ಮಾಡುವಂಥಾದ್ದಾಗಿರುತ್ತದೆಂದೂ, ಸಂಪೂರ್ಣ ಪಾಪಪ್ರಾಯಶ್ಚಿತ್ತವನ್ನು ಮಾಡಿದ ಆತನಲ್ಲಿ ವಿಶ್ವಾಸಿಸುವ ಭಕ್ತಿಹೀನನಿಗೆ ದೇವರು ನೀತಿನಿರ್ಣೈಸುತ್ತಾನೆಂದೂ ಈ

ಮೊದಲಾದ ಶುಭ ಸಮಾಚಾರದ ವಾಕ್ಯಗಳನ್ನು, ಆ ಥೊರೆಯು ನಡುಗಿ ಅಭಿಲಾಷೆಯೊಡನೆ ಲಾಲಿಸುತ್ತಿದ್ದಾಗ್ಯೆ, ಬೋಧಕನು ಇನ್ನು ವಿವರಿಸಿ, ಅಂದಿನ ಪರಿಯಂತರಕ್ಕೆ ಯೇಸುವನ್ನು ಉಪೇಕ್ಷೆ ಮಾಡಿ ನಿರಾಕರಿಸುತ್ತಿದ್ದ ಥೊರೆಗೆ—ನಿಮ್ಮಂಥಾ ಪಾಪಿಷ್ಠರಿಗೋಸ್ಕರವಾಗಿ ಯೇಸು ತನ್ನ ಮಾಹಿಮಾವಸ್ಥೆಯನ್ನು ಬಿಟ್ಟು, ಮನುಷ್ಯಾವತಾರವನ್ನೆತ್ತಿ, ಕ್ರೂಜೆಯಲ್ಲಿ ತನ್ನ ಅಮೂಲ್ಯವಾದ ರಕ್ತವನ್ನು ಚಲ್ಲಿ, ಪಾಪಿಗಳಿಗೋಸ್ಕರ ಶಾಂತಕರ ಬಲಿಯಾದನು. ಶರಣಾರ್ಥಿಗಳಾಗಿ ಈಗ ಆತನ ಬಳಿಗೆ ಓಡಿ ಬಂದು, ನಿಮ್ಮ ಪಾಪ ದ್ರೋಹಗಳನ್ನೆಲ್ಲಾ ಆತನ ಮುಂದೆ ಅರಿಕೆ ಮಾಡಿ, ಆತನಿಗೆ ನನ್ನ ದೇವರೂ ನನ್ನ ಯಜಮಾನನೂ ನನ್ನ ರಕ್ಷಕನೂ ನೀನೇ ಎಂದ್ಹೇಳಿ, ಆತನಲ್ಲಿ ವಿಶ್ವಾಸವನ್ನಿಟ್ಟು, ಪಾಪಪರಿಹಾರ ಸಮಾಧಾನಗಳನ್ನು ದೊರಕಿಸಿ ಕೊಳ್ಳಿರೆಂದು ಬುದ್ಧಿ ಹೇಳಿದನು.

ಈ ವಾಕ್ಯಗಳು ದಿವ್ಯವಾದ ಬೀಜಗಳಾಗಿ ಚಂದಾಗಿ ಹೂಡಿ ಹಸನ ಮಾಡಿದ್ದ ಭೂಮಿಯ ಮೇಲೆ ಬಿದ್ದವು. ರಾತ್ರಿಯ ಕತ್ತಲೆ ಹೋಗಿ ಸೂರ್ಯನು ಮೂಡಿ ಬರಲು, ಕಮಲ ಹೂವುಗಳು ಅರಳಿ ವಿಕಸಿಸುವಪ್ಪಂದ, ಆ ರೋಗಿಷ್ಠನ ಹೃತ್ಕಮಲವು ತೆರದ್ದಾಗಿ ಉಜ್ಜೀವಿಸಿ ಬಂತು. ಮಹಾರಣ್ಯದಲ್ಲಿ ತೊಳಲಿ ಬಳಲಿ ದಾಹಾಗ್ನಿಯಿಂದ ವೇದನೆ ಪಡುವ ಯಾತ್ರಸ್ಥನಿಗೆ ತಣ್ಣೀರು ಹ್ಯಾಗೋ, ಹಾಗೆಯೇ ಅವನಿಗೆ ಯೇಸುವಿನ ಹೆಸರಿನಲ್ಲಿ ಉಚಿತವಾದ ಕೃಪೆಯ ಸಾರೋಣವು ಅತೀಷ್ಟವಾಗಿ ಹೋಯಿತು. ಯೇಸು ಪಾಪಿಷ್ಠರನ್ನು ಅಂಗೀಕರಿಸಿ ರಕ್ಷಿಸುತ್ತಾನೆಂಬ ಸುವಾರ್ತಾವಾಕ್ಯವು ಅವನಿಗೆ ಆವಶ್ಯಕವಾಗಿ ಬೇಕಾಗುವಂಥಾದ್ದಾಗಿ ಹೋಯಿತು. ಅವನು ಹುಡುಕುತ್ತಿದ್ದ ಸಮಾಧಾನವು ನೀತಿವಂತರನ್ನಲ್ಲ, ಪಾಪಿಗಳನ್ನು ಮಾನಸಾಂತರಕ್ಕೆ ಕರೆಯಲಿಕ್ಕೆ ಬಂದವನಲ್ಲಿಡುವ ವಿಶ್ವಾಸದಿಂದ ಈಗ ಅವನಿಗೆ ಪ್ರಾಪ್ತವಾಯಿತು. ಯೇಸು ಕ್ರಿಸ್ತನು ಮಾರ್ಗವೂ ಸತ್ಯವೂ ಜೀವವೂ ಆಗಿರುತ್ತಾನೆಂಬುವದನ್ನು ಸಂತೋಷವಾಗಿ ತಿಳಕೊಂಡು, ಅರಿಕೆ ಮಾಡುವವನಾದನು.

ಇದು ಸಂಭವಿಸಿದ ಮೇಲೆ ಬಹಳ ದಿವಸಗಳು ಗತಿಸಿ ಹೋಗುವದಕ್ಕಿಂತ ಮುಂಚೆ ಕಾಲವನ್ನು ಕಂಡು, ನಮ್ರತೆಯೂ ಸೌಭಾಗ್ಯವೂ ಉಳ್ಳವನಾಗಿ ಕ್ರಿಸ್ತ ಯೇಸುವಿನಲ್ಲಿರುವ ದೇವರ ಉಚಿತವಾದ ಕೃಪೆಯನ್ನು ಕೊಂಡಾಡಿ ಮೃತನಾದನು.

ಹಿಂದೆ ವಿವರಿಸಿರುವಂಥಾದ್ದನ್ನು ಓದುವವರೆಲ್ಲರು ಹೃದಯದ ನೆಲದಿಂದಲೇ ನಮ್ಮ ಗೀತಪುಸ್ತಕದ ಇಪ್ಪತ್ತನೇ ಗೀತವನ್ನು ಹಾಡಲಿಕ್ಕೆ ಶಕ್ತರೂ ಪ್ರಾಪ್ತರೂ ಆಗುವ ಹಾಗೆ ದೇವರು ದಯ ಮಾಡಿ, ತನ್ನ ಮಗನ ಹೆಸರನ್ನು ಪ್ರಕಟಿಸಿ, ಮಹಿಮೆ ಪಡಿಸಲಿ.

ಮೋಕ್ಷದ ಆಶೆಯು.

Lass mich gehn, lass mich gehn.

೧. ಹೋಗುವೆ, ಹೋಗುವೆ,
ಯೇಸುವನ್ನು ನೋಡುವೆ!
ಆತನಡಿಗೆರಗೋಣ,
ಪೀಠದೆದುರಾಗಿರೋಣ
ನನ್ನ ಪ್ರಾಣದಾಶೆಯೆ.

೨. ಕಾಂತಿಯೆ, ಕಾಂತಿಯೆ,
ಮೋಘಹರ ಸೂರ್ಯನೆ,
ಸರ್ವ ಭಕ್ತರೋಘದಲ್ಲಿ
ನಿನ್ನ ಮುಖ ನೋಡುವಲ್ಲಿ
ನಾನು ಎಂದು ಶೇರುವೆ?

೩. ಮಧುರ, ಮಧುರ,
ದೂತರಾಡೊ ಗಾಯನ;
ನಂಗೆ ರೆಕ್ಕೆ ಇದ್ದದ್ದಿರೆ,
ಹಾರಿ, ಬಿಟ್ಟು ಬಿಟ್ಟೇತಿರೆ,
ಏರುತ್ತಿದ್ದೆ ಚೀಯೊನ!

೪. ಹ್ಯಾಗದು? ಹ್ಯಾಗದು?
ಶಾಲೆಯನ್ನು ಶೇರಲು,
ಹೇಮಮಯ ಪಟ್ಣವಾಸ
ಮಾಡಿ ಕೊಂಬದೆಂಥುಲ್ಲಾಸ!
ಗ್ರಹಿಸಲ್ಕೆ ಕೂಡದು.

೫. ಸ್ವರ್ಗವೆ, ಸ್ವರ್ಗವೆ,
ನಿನ್ನ ಫಲ ಶೀಯದೆ!
ಕಂಡು ನಿನ್ನ ವೃಕ್ಷದಾಳಿ,
ಸ್ವಪ್ನದವನಂತೆ ಬಾಳಿ,
ನಿತ್ಯ ಸುಖ ಪಡುವೆ!

J. M.

ರಾಗ ದೇಶಿ, ತಾಳ ರೂಪಕ.

ರೋಮ. ೮, ೩೧.

ದೇವರು ನನ್ನ ಕಡೆಯವನು,
ಯಾವನು ನನಗೆದುರಾಗುವನು? ||
ಪಾವನ ಮಾಡಿದ ಕಡು ಪಾಪಿಯನು
ದೇವ ಕಳುಹಿ ತನ್ನೇಕಜನನ್ನು. || ಪಲ್ಲ ||

ಆತನು ನನ್ನ ನೋಡಿದನು,
ಪಾತಕನೆಂದು ಮರುಗಿದನು; ||
ಈತನು ಪಾಪದ ಬಲೆಯೊಳು ಬಿದ್ದು,
ಘಾತ ಪಡೋದು ನಾ ನೋಡೆನೆಂದು || ೧ ||

ದಾಸನ ಮೇಗಣ ಮಮತೆಯಲೆ,
ಖಾಸ ಮಗನ ಕನಿಕರಿಸದಲೆ ||

ಯೇಸು ಕ್ರಿಸ್ತನ ಭೂಸ್ಥಾನಕೆ ಕಳುಹಿ,
ನಾಶತನುವಿನಲಿ ವಾಸಿಸೆಂದನು. || ೨ ||

ಇಷ್ಟದಿಂದ ದೇವರ ಮಗನು
ನಷ್ಟಭೂಮಿಗವತರಿಸಿದನು; ||
ದುಷ್ಟ ಮನುಜರಿಂ ಕಷ್ಟವ ಪಟ್ಟು,
ಭ್ರಷ್ಟರ ದೆಶೆಯಿಂ ಜೀವ ಕೊಟ್ಟನು. || ೩ ||

ಈ ಪರಿ ನನ್ನನು ಪ್ರೀತಿಸಿ,
ಪಾಪ್ಪರಿಹಾರವ ದೊರಕಿಸಿ ||
ತಾಪ ಪಡಿಸುವ ಮನಸ್ಸಾಕ್ಷಿಯ ಸ್ವ-
ರೂಪ ಬದಲಿಸುವ ದಾರಿ ತೋರಿದ. || ೪ ||

ದೇವರು ನನ್ನಯ ಪಿತನು,
ನಾನಾತನ ನಿಜ ಸುತನು, ||
ಸಕಲ ಲೋಕ ನ್ಯಾಯಾಧಿಪ ಕರ್ತನು,
ಕ್ರಿಸ್ತ ಯೇಸು ನನ್ನ ರಕ್ಷಕನು. || ೫ ||

ಯಾವದು ನನಗಿನ್ನು ಕೇಡೂ
ಮಾಡ ಕೂಡದಿಗೊ ನೋಡು; ||
ಪೂರಣ ನರಕ ಸೈತಾನ ಮೊದಲುಗೊಂಡು,
ಯಾವದು ಇಲ್ಲೆಲೊ ನನಗೀಡೂ. || ೬ ||

ನೀನೀ ಭಾಗ್ಯವ ಬಯಸುವದು
ಖರೆಯಾದರೆ, ನಿನಗೂ ಶಿಕ್ಕುವದು. ||
ನಿನ್ನಪರಾಧವ ನಿಜವಾಗಿ ತಿಳಿದು,
ಯೇಸುವೆ ಅನ್ನು, ನಿನ್ನಲ್ಲಗಳಿದು. || ೭ ||

ಯೋ. ಗು.

ರಾಗದ ರೀತಿ.

F. ರಿ : ರಿ | ಪ : ಗ. ರಿ | ರಿ : ಗ | ಸ.- ನಿ : ಸ. ನಿ | ಧ : ಧ | ಸ : ರಿ
ದೇವರು ನ ನ್ನ ಕಡೆ ಯವ ನು ಯಾ ವನು ನನ ಗೆದು
ರಿ. ಸ : ಸ. ನಿ, | ಸ : || ಪ : ಮೈ | ಪ : ಪ | ಪ : ಮೈ | ಪ : ಪ
ರಾ ಗುವ ನು? (ಅ*) ಪಾ ವನ ಮಾ ಡಿದ ಕಡು ಪಾಪಿ ಯ ನ್ನು
ಮೈ : ಮೈ | ಪ : ಪ | ಮ. ಗ : ಮ. ಗ | ರಿ : ಸ ||
ದೇ ವಕ ಳುಹಿ ತಂ ನೇ ಕ ಜ ನ ನ್ನು.

* ಅ ಅಂದರೆ ಅಂತ್ಯ. ಈ ಒಂದೊಂದು ಶ್ಲೋಕವನ್ನು ತೀರಿಸಿದ ಮೇಲೆ ತಿರಿಗಿ ಆರಂಭ ಹಿಡಿದು ಅಂತ್ಯದ ವರೆಗೆ ಹಾಡ ಬೇಕು.

ಇಬ್ರಿಯ. ೯, ೧೧–೧೪.

"ಆದರೆ ಕ್ರಿಸ್ತನು ಆಗುವ ಒಳ್ಳೆಯವುಗಳ ಪ್ರಧಾನ ಯಾಜಕನಾಗಿ ಬಂದು, ಕೈ ಕೆಲಸದ್ದು—ಅಂದರೆ, ಈ ಸೃಷ್ಟಿಯದ್ದು—ಆಗಿರದೆ, ಅಧಿಕವಾದಂಥ ಸಂಪೂರ್ಣ ತರವಾದಂಥ ಗುಡಾರದಿಂದ ಹೋತ ಹೋರಿಗಳ ರಕ್ತದಿಂದ ಅಲ್ಲ, ಸ್ವಂತ ರಕ್ತದಿಂದಲೇ ನಿತ್ಯ ವಿಮೋಚನೆಯನ್ನು ಸಂಪಾದಿಸಿ ಕೊಂಡು, ಒಂದೇ ಸಾರಿ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸಿದನು. ಯಾಕಂದರೆ ಗೂಳಿ ಹೋತಗಳ ರಕ್ತವೂ, ಹೊಲೆಯಾದವರ ಮೇಲೆ ಚಿಮಿಕಿಸಲ್ಪಟ್ಟ ಕಡಸಿನ ಬೂದಿಯೂ, ಮಾಂಸವನ್ನು ಶುಚಿ ಮಾಡುವ ಹಾಗೆ ಪರಿಶುದ್ಧ ಮಾಡಿದರೆ, ಎಷ್ಟು ಅಧಿಕವಾಗಿ ನಿತ್ಯ ಆತ್ಮದಿಂದ ತನ್ನನ್ನು ದೇವರಿಗೆ ಕಳಂಕವಿಲ್ಲದವನಾಗಿ ಅರ್ಪಿಸಿದ ಕ್ರಿಸ್ತನ ರಕ್ತವು, ಜೀವವುಳ್ಳ ದೇವರನ್ನು ಆರಾಧಿಸುವದಕ್ಕಾಗಿ, ನಿಮ್ಮ ಮನಸ್ಸಾಕ್ಷಿಯನ್ನು ಸತ್ತ ಕ್ರಿಯೆಗಳಿಂದ ಶುಚಿ ಮಾಡುವದು?"

ಪತ್ರಿಕಾಕರ್ತನು ಈ ಪತ್ರಿಕೆಯನ್ನು ಕ್ರೈಸ್ತರಾದ ಇಬ್ರಿಯರಿಗೆ ಬರೆದನು. ಇದನ್ನು ಬರೆಯಲಿಕ್ಕೆ ಕಾರಣವೇನಂದರೆ: ದೇವರ ಮಗನಾದ ಯೇಸು ಕ್ರಿಸ್ತನು ಮನುಷ್ಯಾವತಾರ ಧರಿಸಿ, ಈ ಲೋಕಕ್ಕೆ ಬಂದು, ಹಳೆ ಒಡಂಬಡಿಕೆಯ ಎಲ್ಲಾ ಅಭಿಪ್ರಾಯಗಳನ್ನು ತನ್ನ ನುಡಿನಡೆಗಳಿಂದ ಈಡೇರಿಸಿ, ಸರ್ವ ಲೋಕದ ರಕ್ಷಣೆಯನ್ನು ಸಂಪಾದಿಸಿದ ಮೇಲೆಯಾದರೂ, ಅವರು ಕ್ರಿಸ್ತನನ್ನು ಬಹಳವಾಗಿ ಮಾನಿಸದೆ, ಹಳೆ ಒಡಂಬಡಿಕೆಯಲ್ಲಿ ಬಹು ಆಸಕ್ತರಾಗಿ, ಅದರ ಆಶ್ರಯದ ಕೆಳಗೆ ಮರೆ ಹೊಕ್ಕರು. ಆದದರಿಂದ ಈ ಪತ್ರಿಕಾಕರ್ತನಿಗೆ ಇಂಥವರ ಬೋಧನಾರ್ಥವಾಗಿ ಒಂದು ಪತ್ರಿಕೆಯನ್ನು ಬರೆಯುವದು ಬಹಳ ಯುಕ್ತವೆಂದು ತೋರಿತು. ಈ ಪತ್ರಿಕೆಯಲ್ಲಿ ಆತನು ಸಾರಾಂಶವಾಗಿ ತೋರಿಸುವದೇನಂದರೆ: ಹಳೆ ಒಡಂಬಡಿಕೆಯ ಪ್ರವಾದನೆಯೂ ನಿಯಮವೂ ಬಲಿಗಳೂ ಆಚಾರಗಳೂ ಯಾಜಕತ್ವವೂ ಸಂಪೂರ್ಣವಾದವುಗಳಲ್ಲದ್ದರಿಂದ ಇನ್ನು ಮುಂದೆ ನಡಿಯ ಬಾರದು; ಯಾಕಂದರೆ ಇವೆಲ್ಲವು ಯೇಸು ಕ್ರಿಸ್ತನಲ್ಲಿ ಅತ್ಯಂತ ಮಹಿಮೆಯೊಡನೆ ಈಡೇರಿ ಸಂಪೂರ್ಣವಾದವು. ಯೇಸು ಕ್ರಿಸ್ತನು ಹಳೆ ಒಡಂಬಡಿಕೆಯ ಎಲ್ಲಾ ಪ್ರವಾದಿಗಳಲ್ಲಿ ಶ್ರೇಷ್ಠನಾಗಿರುವ ಮೋಶೆಗಿಂತಲೂ, ಪ್ರಧಾನ ಯಾಜಕರಿಗಿಂತಲೂ, ಹಾಂಗು ಎಲ್ಲಾ ದೂತರಿಗಿಂತಲೂ ಶ್ರೇಷ್ಠನು, ಹಾಗಾದರೆ ಈತನಲ್ಲಿ ವಿಶ್ವಾಸವಿಡ ತಕ್ಕದ್ದು ಎಂಬದೇ. ಪತ್ರಿಕಾಕರ್ತನು ಈ ಪತ್ರಿಕೆಯಲ್ಲಿ ಪ್ರಧಾನ ಯಾಜಕತ್ವದ ವಿಷಯ ಮುಖ್ಯವಾಗಿ ಬರೆಯುತ್ತಾನೆ. ಹಾಗೆಯೇ ಆತನು ನಮ್ಮ ಮುಂದೆ ಇರುವ ಈ ಇಡೀ ಸಂಧಿಯಲ್ಲಿ ಯೇಸುವು ನಿಜ ಪಾಪವಿಮೋಚನೆಗಾಗಿ ತನ್ನನ್ನು ತಾನೇ ಬಲಿಯಾಗಿ ಅರ್ಪಿಸಿ, ಭಕ್ತರಿಗೆ ಉತ್ತಮ ಪ್ರಸಾದವನ್ನು ಕೊಡಲಧಿಕಾರಿಯಾಗಿದ್ದಾನೆ ಎಂಬದನ್ನು ಸ್ಥಾಪಿಸುತ್ತಾನೆ. ಈ ಸಂಧಿಯಲ್ಲಿ ಮೊದಲಾಗಿ ಆತನು ಹಳೆ ಒಡಂಬಡಿಕೆಯ ಗುಡಾರದ ಮಹಿಮೆಯನ್ನು ವರ್ಣಿಸಿ, ಎರಡನೆಗೆ ಹಳೆ ಒಡಂಬಡಿಕೆಯ ಸಾಕ್ಷಿಗುಡಾರವೂ ಅಲ್ಲಿಯ ಪ್ರಧಾನ ಯಾಜಕನೂ ಬಲಿ ಅರ್ಪಣೆಯೂ ಸಂಪೂರ್ಣವಾದವುಗಳಲ್ಲ ಎಂದು ತೋರಿಸಿ, ಈ ನಮ್ಮ ಆಧಾರವಚನಗಳಲ್ಲಿ, ಆದರೆ ಕ್ರಿಸ್ತನೆಂಬ ಪ್ರಧಾನ ಯಾಜಕನೂ ಅವನು ಅರ್ಪಿಸಿದ ಬಲಿಯೂ ಬಲಿ ಅರ್ಪಿಸಿದ ಸಾಕ್ಷಿಗು

ಡಾರವೂ ಹಳೆ ಒಡಂಬಡಿಕೆಯಲ್ಲಿ ಇರುವವುಗಳಿಗಿಂತ ಎಷ್ಟೋ ಮಹಿಮೆಯುಳ್ಳವುಗಳೆಂದು ತಿಳಿಯ ಪಡಿಸುತ್ತಾನೆ. ಒಟ್ಟಾರೆ ಹೇಳಿದರೆ, ಯೇಸುವಿನ ಪ್ರಧಾನ ಯಾಜಕತ್ವವು ಹಳೆ ಒಡಂಬಡಿಕೆಯ ಪ್ರಧಾನ ಯಾಜಕತ್ವಕ್ಕಿಂತ ಅತ್ಯಂತ ಮಹಿಮೆಯುಳ್ಳದ್ದು. ಇದನ್ನು ಕ್ರೈಸ್ತರಾದ ನಾವು ಸಹ ನಂಬಲವಶ್ಯವೇ; ಯಾಕಂದರೆ ನಮ್ಮ ರಕ್ಷಣೆಯ ಆಧಾರವು ಯೇಸು ಕ್ರಿಸ್ತನ ಪ್ರಧಾನ ಯಾಜಕತ್ವವೇ. ಯೇಸು ಕ್ರಿಸ್ತನು ನಮಗಾಗಿ ಸಹಾ ದಿವ್ಯ ಪ್ರಧಾನ ಯಾಜಕನಾಗಿ ತನ್ನ ಸ್ವಂತ ರಕ್ತವನ್ನೇ ಬಲಿಯಾಗಿ ಅರ್ಪಿಸಿದನು. ಹಾಗಾದರೆ ನಾವು ಈಗ ಈ ಆಧಾರವಚನಗಳ ಮೇರೆಗೆ ಕ್ರಿಸ್ತನ ಪ್ರಧಾನ ಯಾಜಕತ್ವವು ಹಳೆ ಒಡಂಬಡಿಕೆಯ ಪ್ರಧಾನ ಯಾಜಕತ್ವಕ್ಕಿಂತ ಅತ್ಯಂತ ಮಹಿಮೆಯುಳ್ಳದ್ದು ಎಂಬದನ್ನು ಕುರಿತು ವಿಚಾರಿಸೋಣ.

I. *ಪ್ರಧಾನ ಯಾಜಕ ಉದ್ಯೋಗವನ್ನು ನೋಡಿದರೆ, ಕ್ರಿಸ್ತನ ಪ್ರಧಾನ ಯಾಜಕತ್ವವು ಹಳೆ ಒಡಂಬಡಿಕೆಯ ಪ್ರಧಾನ ಯಾಜಕತ್ವಕ್ಕಿಂತ ಅತ್ಯಂತ ಮಹಿಮೆಯುಳ್ಳದ್ದು.*

II. *ಪ್ರಧಾನ ಯಾಜಕ ಉದ್ಯೋಗದಿಂದ ಬಂದ ಫಲವನ್ನು ನೋಡಿದರೆ, ಕ್ರಿಸ್ತನ ಪ್ರಧಾನ ಯಾಜಕತ್ವವು ಹಳೆ ಒಡಂಬಡಿಕೆಯ ಪ್ರಧಾನ ಯಾಜಕತ್ವಕ್ಕಿಂತ ಅತ್ಯಂತ ಮಹಿಮೆಯುಳ್ಳದ್ದು.*

I. ಪ್ರಧಾನ ಯಾಜಕನ ಉದ್ಯೋಗವನ್ನು ನೋಡಿದರೆ, ಹಳೆ ಒಡಂಬಡಿಕೆಯಲ್ಲಿ ಪ್ರಧಾನ ಯಾಜಕರಲ್ಲದೆ ಬೇರೆ ಯಾಜಕರು ಸಹಾ ಇದ್ದರು. ಅವರು ದಿನಗಟ್ಲೆ ತಮ್ಮ ತಮ್ಮ ಒಂತಿನ ಮೇರೆಗೆ ಸಾಕ್ಷಿಗುಡಾರದ ಪರಿಶುದ್ಧ ಸ್ಥಳದಲ್ಲಿ ಧೂಪವನ್ನು ಸುಡುತ್ತಾ ಬಲಿಗಳನ್ನೂ ಕಾಣಿಕೆಗಳನ್ನೂ ಅರ್ಪಿಸುತ್ತಾ ಇದ್ದರು. ಹಳೆ ಒಡಂಬಡಿಕೆಯಲ್ಲಿ ಈ ಯಾಜಕ ಉದ್ಯೋಗವಲ್ಲ ಪ್ರಧಾನ ಯಾಜಕನ ಉದ್ಯೋಗವೇ ಅತಿ ವಿಶೇಷವಾದ ಉದ್ಯೋಗವಾಗಿತ್ತು. ಅವರ ಕೆಲಸವೇನಂದರೆ: ಇಸ್ರಯೇಲ್ ಸಭೆಯ ಮಧ್ಯಸ್ಥರಾಗಿ ವರುಷಕ್ಕೊಮ್ಮೆ ಮಹಾ ವಿಮೋಚನೆಯ ಹಬ್ಬದ ದಿವಸದಲ್ಲಿ ಬಲಿಯನ್ನರ್ಪಿಸಿ, ಅತಿ ಪರಿಶುದ್ಧ ಸ್ಥಳಕ್ಕೆ ಹೋಗಿ, ಅಲ್ಲಿ ದೇವರ ಕೃಪಾಸನದ ಮುಂದೆ ಧೂಪವನ್ನು ಸುಡುವದು. ಅದೇ ಪ್ರಕಾರ ಯೇಸು ಕ್ರಿಸ್ತನಿಗೆ ಸಹಾ ಇದೇ ತರದ ಉದ್ಯೋಗವು ಅತಿ ಮಹಿಮಾರೀತಿಯಿಂದಿತ್ತು. ಆತನು ಎಲ್ಲಾ ಯಾಜಕರಿಗಿಂತಲೂ ಎಲ್ಲಾ ಪ್ರಧಾನ ಯಾಜಕರಿಗಿಂತಲೂ ಶ್ರೇಷ್ಠನಾಗಿ, ಒಂದು ವಿಶೇಷವಾದ ಬಲಿಯನ್ನರ್ಪಿಸಿ, ಅತಿ ಪರಿಶುದ್ಧವಾದಂಥಾ, ಸಂಪೂರ್ಣವಾದಂಥಾ ಗುಡಾರವನ್ನು ಪ್ರವೇಶಿಸಿ, ಅಲ್ಲಿ ಅತ್ಯುತ್ತಮ ಧೂಪವನ್ನು ಸುಡುತ್ತಾನೆ. ಆದದರಿಂದ

A.) ಬಲಿ ಅರ್ಪಿಸುವದರಲ್ಲಿ ಯೇಸು ಕ್ರಿಸ್ತನ ಪ್ರಧಾನ ಯಾಜಕತ್ವವು ಶ್ರೇಷ್ಠವಾದದ್ದು.

1.) ಹಳೆ ಒಡಂಬಡಿಕೆಯಲ್ಲಿ ವಿವಿಧವಾದ ಬಲಿಗಳು ಇದ್ದವು. ಅವುಗಳು ಸ್ತೋತ್ರಬಲಿ, ಹೋಮಬಲಿ, ಅಪರಾಧಬಲಿ, ಪಾಪಬಲಿ ಎಂಬವುಗಳೇ. ಈ ಬಲಿಗಳಲ್ಲಿ ಹೆಚ್ಚಾ

ದವುಗಳಿಗೆ ಬೇರೆ ಬೇರೆ ತರದ ಸಾಧನಗಳನ್ನು ತಂದು ಅರ್ಪಿಸಿದರು. ಪಶುಮಾಂಸದೊಟ್ಟಿಗೆ ರೊಟ್ಟಿ, ದ್ರಾಕ್ಷಾರಸ, ಎಣ್ಣೆ, ಧೂಪ, ಉಪ್ಪು ಸಹಿತವಾಗಿ ಅರ್ಪಿಸಿದರು. ಆದರೆ ಕಡೇದಾದ ಮುಖ್ಯವಾಗಿ ವರುಷಕ್ಕೊಮ್ಮೆ ಪ್ರಧಾನ ಯಾಜಕನು ಅರ್ಪಿಸುವಂಥಾ ಪಾಪಬಲಿಯಲ್ಲಿ ಪ್ರಯೋಗವಾಗುವಂಥಾ ಸಾಧನವು ರಕ್ತವೇ. ಯಾಕಂದರೆ ನ್ಯಾಯಪ್ರಮಾಣದ ಪ್ರಕಾರ ಹಳೆ ಒಡಂಬಡಿಕೆಯಲ್ಲಿ ಸ್ವಲ್ಪ ಕಡಿಮೆಯಾಗಿ ಸಮಸ್ತವು ರಕ್ತದಿಂದ ಶುಚಿಯಾಯಿತು. ಆದರೆ ಹಳೆ ಒಡಂಬಡಿಕೆಯ ಪ್ರಧಾನ ಯಾಜಕನು ಎಂಥಾ ರಕ್ತವನ್ನು ಚೆಲ್ಲಿದನು? ಗೂಳಿ ಹೋತಗಳ ರಕ್ತವನ್ನು ಚೆಲ್ಲಿದನು. ಪ್ರಧಾನ ಯಾಜಕನು ಯಾವ ರಕ್ತವನ್ನು ಚೆಲ್ಲ ಬೇಕಾಗಿತ್ತು? ತನ್ನ ಸ್ವಂತ ರಕ್ತವನ್ನೆ ಚೆಲ್ಲ ಬೇಕಾಗಿತ್ತು. ಆತನು ಮಾತ್ರವಲ್ಲಾ, ಒಬ್ಬೊಬ್ಬ ಇಸ್ರಯೇಲ್ಯನು ತಾನು ತನ್ನ ಅಕ್ರಮಗಳಿಗಾಗಿ ಮರಣಯೋಗ್ಯನಾಗಿ ಸಾಯ ಬೇಕಾಗಿತ್ತು. ತಪ್ಪು ಮಾಡಿದವನೇ ತಪ್ಪಿಗೆ ತಕ್ಕ ಶಿಕ್ಷೆಯನ್ನು ಹೊಂದ ಬೇಕು. ಹಾಗಾದರೆ ತನ್ನ ಮೇಲೆ ಬರ ಬೇಕಾದ ಶಿಕ್ಷೆಯ ಅಪರಾಧವನ್ನು ಒಂದು ಬಡ ಪಶುವಿನ ಮೇಲೆ ಹೊರಿಸಿ, ತನಗೆ ಬದಲಾಗಿ ಅದರ ಜೀವ ಹತ ಮಾಡಿದರೆ, ಸ್ವಲ್ಪಾದರೂ ನೀತಿ ಆದೀತೋ? ಆಗದು. ಯಾಕಂದರೆ ಪಶುವಿಗೂ ಮನುಷ್ಯನಿಗೂ ಏನೇನೂ ಸಂಬಂಧವಿಲ್ಲ; ಜೀವಸಂಬಂಧವಾದರೂ ಭಾವಸಂಬಂಧವಾದರೂ ಇಲ್ಲ. ಮನುಷ್ಯನು ದೇವರ ಹೋಲ್ವಿಕೆಯಲ್ಲಿ ನಿರ್ಮಿತನಾಗಿಯೂ ದೇವರ ಸ್ವಂತ ಉಸುರಿನಿಂದ ಶ್ವಸಿತನಾಗಿಯೂ ಜೀವಾತ್ಮನಾದನು. ದೇವರು ಮನುಷ್ಯನನ್ನು ಸರ್ವ ಸೃಷ್ಟಿಗಳಿಗೆ ಶ್ರೇಷ್ಠನಾಗಿ ನಿರ್ಮಿಸಿ, ಇಡೀ ಜಗತ್ತಿನ ರಾಜನಾಗಿ ನೇಮಿಸಿಟ್ಟನು. ಆದರೆ ಪಶುಗಳ ಜೀವವು ದೇವರಿಂದಲೇ ಬಂದಿದ್ದರೂ, ಅದು ದೇವರು ಪ್ರಕೃತಿಯಲ್ಲಿ ಇಟ್ಟಂಥಾ ಸಾಧಾರಣ ಜೀವವೇ. ಹಾಗಾದರೆ ಮನುಷ್ಯನ ಜೀವಕ್ಕೂ ಪಶುವಿನ ಜೀವಕ್ಕೂ ಗೊಡವೆ ಏನು? ಅಥವಾ ಮಾನುಷ ಭಾವಕ್ಕೂ ಪಶುಭಾವಕ್ಕೂ ಸಮ್ಮಂಧವೇನು? ಮನುಷ್ಯನು ಕೆಟ್ಟದರ ಒಳ್ಳೇದರ ವ್ಯತ್ಯಾಸವನ್ನು ತಿಳಕೊಂಡು ವ್ಯವಹರಿಸುತ್ತಾನೆ. ಆದರೆ ಪಶುವಿಗೆ ಬುದ್ಧಿಯೂ ಇಲ್ಲ, ಒಳ್ಳೇದು ಏನು? ಕೆಟ್ಟದು ಏನು? ಎಂಬದನ್ನು ಎಷ್ಟು ಮಾತ್ರವೂ ಗ್ರಹಿಸಿ ಕೊಳ್ಳುವದಿಲ್ಲ. ಪಶುಗಳು ದೇವರು ಅವುಗಳಲ್ಲಿ ಇಟ್ಟ ಸ್ವಭಾವಿಕ ಬುದ್ಧಿಭಾವಗಳ ಪ್ರಕಾರ ವ್ಯವಹರಿಸಿ ಬದುಕುತ್ತವೆ. ಅದಲ್ಲದೆ ಮನುಷ್ಯರ ಸುಖವಾದರೂ ದುಃಖವಾದರೂ ಅವುಗಳಿಗೆ ಒಂದಿಷ್ಟೂ ಗೊತ್ತಿಲ್ಲ. ಒಟ್ಟಾರೆ ಹೇಳಿದರೆ, ಅವುಗಳಲ್ಲಿ ಮನುಷ್ಯತ್ವದ ಛಾಯೆಯೇ ಇಲ್ಲ. ಅದು ಮಾತ್ರವಲ್ಲ, ಪಶುಬಲಿಯು ಸ್ವಯಿಚ್ಛೆಯಿಂದ ಆಗಲಿಲ್ಲ. ಬಲಾತ್ಕಾರದಿಂದ ಎಳ ಕೊಂಡು ಹೋಗಿ ಅವುಗಳನ್ನು ಕೊಲ್ಲ ಬೇಕಾಯಿತು. ಈಗ ನನ್ನನ್ನು ಕೊಲ್ಲುತ್ತಾರೆಂದು ಅವುಗಳು ತಿಳಿಯುವದೇ ಇಲ್ಲ. ಈ ಮನುಷ್ಯರು ತಮ್ಮ ಪಾಪದ ಕರ್ಮ ಹೋಗಲಾಡಿಸಲಿಕ್ಕೆ ತಮಗೆ ಬದಲಾಗಿ ನನ್ನನ್ನು ಬಲಿಯಾಗಿ ಅರ್ಪಿಸುತ್ತಾರೆ; ಹಾಗಾದರೆ ನಾನು ಅವರಿಗೋಸ್ಕರ ಅವರ ಮಧ್ಯಸ್ಥನಾಗಿ ಸಾಯುತ್ತೇನೆ ಎಂಬ ಗೋಚರವೇ ಅವುಗಳಿಗಿಲ್ಲ. ಇಂಥಾ ಕೊರತೆಯುಳ್ಳ ಗೂಳಿ ಹೋತಗಳ ರಕ್ತವನ್ನು ಹಳೆ ಒಡಂಬಡಿಕೆಯ ಪ್ರಧಾನ ಯಾಜಕನು ಅರ್ಪಿಸಿದನು.

ಹಾಗಾದರೆ ಈ ಪಶುಬಲಿಯನ್ನು ಇಸ್ರಯೇಲ್ಯರು ಯಾಕೆ ಆಚರಿಸಿದರು? ದೇವರು

ಯಾಕೆ ಇದನ್ನು ನೇಮಿಸಿ ಅವರಿಗೆ ಕೊಟ್ಟನು? ಬರೇ ಆಟಕ್ಕಾಗಿ ಇದು ನೇಮಿಸಲ್ಪಟ್ಟಿ
ತೋ? ಇಲ್ಲವೇ ಇಲ್ಲ. ಈ ಪಶುಬಲಿಯಲ್ಲಿ ಕೊರತೆಗಳು ಇದ್ದರೂ ಅದರಲ್ಲಿ ಮಹಾ ಅ
ರ್ಥವು ಅಡಕವಾಗಿತ್ತು. ಈ ಬಲಿಗಳು ಬರಲಿಕ್ಕಿರುವಂಥಾ ನಿಜಬಲಿಯ ಸೂಚಿಸುವಂ
ಥಾ ಮುಂಗುರುತುಗಳೆಂದು ಒಬ್ಬೊಬ್ಬ ಇಸ್ರಯೇಲ್ಯನು ತಿಳಿಯ ಬೇಕಾಯಿತು. ನಾವೆ
ಲ್ಲರು ಪಾಪ ಮಾಡಿದದರಿಂದ ನಾವೆಲ್ಲರು ದಂಡಕ್ಕೂ ಮರಣಕ್ಕೂ ಯೋಗ್ಯರು; ಆದರೆ
ನಮ್ಮ ಬದಲಾಗಿ ಈ ಪಶುಗಳನ್ನರ್ಪಿಸುತ್ತೇವೆ. ಎಷ್ಟು ಅರ್ಪಿಸಿದರೂ ವಿಶೇಷವಾದ ಪ್ರ
ಯೋಜನವು ನಮಗೆ ಇನ್ನೂ ಕಾಣುವದಿಲ್ಲ. ಆದರೂ ಇನ್ನು ಮುಂದಕ್ಕೆ ಒಂದು ಸಂ
ಪೂರ್ಣ ನಿಜಬಲಿಯು, ಒಂದು ನರಬಲಿಯೇ ಆದೀತು ಎಂದು ಹಳೆ ಒಡಂಬಡಿಕೆಯ ಒ
ಬ್ಬೊಬ್ಬ ಭಕ್ತನು ಅತ್ಯಾಶೆಯಿಂದ ಪ್ರತೀಕ್ಷಿಸುತ್ತಿದ್ದನು. ಹಾಗಾದರೆ ದೇವರು ಈ ಬಲಿಗ
ಳನ್ನು ಬರಲಿಕ್ಕಿರುವಂಥಾ ಮೆಸ್ಸೀಯನ ಮುಂಗುರ್ತಾಗಿ ಸ್ಥಾಪಿಸಿದನು. ಆದದರಿಂದ ಇ
ನ್ನು ಮುಂಗುರ್ತೇ ಇರುವದು ಸರಿಯಲ್ಲ, ಪ್ರತಿಗುರ್ತು ಪ್ರತ್ಯಕ್ಷವಾಗ ಬೇಕಾಯಿತು. ಇ
ದಕ್ಕೋಸ್ಕರ ಕಾಲದ ಸಂಪೂರ್ಣತೆಯಲ್ಲಿ ಎಲ್ಲಾ ಬಲಿಗಳ, ಎಲ್ಲಾ ಗೂಳಿ ಹೋತಗಳ
ಮುಂಗುರ್ತಾಗಿರುವ ದೇವರ ಕುರಿಮರಿಯಾಗಿರುವ ಯೇಸು ಕ್ರಿಸ್ತನು ದಿವ್ಯ ಪ್ರಧಾನ
ಯಾಜಕೋದ್ಯೋಗವನ್ನು ನಡಿಸ ಈ ಲೋಕಕ್ಕೆ ಬಂದನು. ನಮ್ಮ ಹಾಗೆಯೇ ಮನುಷ್ಯನಾ
ಗಿ ಹುಟ್ಟಿದನು, ಪಾಪದ ಹೊರ್ತು ಎಲ್ಲಾ ವಿಷಯಗಳಲ್ಲಿ ನಮ್ಮ ಹಾಗೆಯೇ ಇದ್ದನು. ನಮ್ಮ
ಹಾಗೆಯೇ ಶರೀರದ ಸುಖ ದುಃಖಗಳನ್ನು ಆತನು ಕೂಡಾ ಅನುಭವಿಸ ಬೇಕಾಯಿತು. ಅ
ವನ ಜೀವಾವಸ್ಥೆಯೂ ಭಾವಾವಸ್ಥೆಯೂ, ಪಾಪವನ್ನು ವಿನಾಯಿಸಿ, ಎಲ್ಲಾದರಲ್ಲಿ ನಮ್ಮದ
ರ ಹಾಗೆಯೇ ಇತ್ತು. ನೋಡಿರಿ! ನಮಗೆ ಎಂಥಾ ಪ್ರಧಾನ ಯಾಜಕನು ಶಿಕ್ಕಿದನು! ನಮ್ಮ
ಕಷ್ಟಗಳನ್ನೂ ನಮ್ಮ ನೋವುಗಳನ್ನೂ ನಮ್ಮ ಸುಖ ದುಃಖಗಳನ್ನೂ ಅನುಭವಿಸಿದವನು!
ಹಾಗಾದರೆ ಆತನು ನಮ್ಮ ವಿಷಯ ಚನ್ನಾಗಿ ಬಲ್ಲನು. ಆತನ ಸ್ಥಿತಿಯು ನಮ್ಮದರ ಹಾ
ಗೆ ಇರುತ್ತಿದ್ದಿಲ್ಲವಾದರೆ, ನಮಗೆ ಆತನಿಂದ ಏನೇನೂ ಪ್ರಯೋಜನ ಬರುತ್ತಿದ್ದಿಲ್ಲ. ಆತನು
ನಮ್ಮ ಹಾಗೆಯೇ ಇದ್ದದ್ದು ಸಾಕಾಯಿತೋ? ಇಲ್ಲ. ಯಾಕಂದರೆ ನಮ್ಮಿಂದ ಸಹಿಸಲಶ
ಕ್ಯವಾದದ್ದನ್ನು ಸಹಾ ಆತನು ಸಹಿಸ ಬೇಕಾಯಿತು. ಪ್ರಿಯ ಸಹೋದರರೇ, ನಾವೆಲ್ಲರು ನ
ಮ್ಮಲ್ಲಿ ಒಬ್ಬೊಬ್ಬನು ತನ್ನ ತನ್ನ ಅಕ್ರಮಗಳಿಗಾಗಿಯೂ ಅಪರಾಧಗಳಿಗಾಗಿಯೂ ಸ್ವಜೀವ
ವನ್ನು ಕೊಟ್ಟು ಸ್ವರಕ್ತವನ್ನು ಚೆಲ್ಲ ಬೇಕಾಗಿತ್ತು. ನಮ್ಮಲ್ಲಿ ಒಬ್ಬೊಬ್ಬನಿಗೆ ತನ್ನ ತನ್ನ ಪಾ
ಪಗಳ ನಿವಾರಣೆಗಾಗಿ ಈ ಏಕ ಉಪಾಯದ ಹೊರ್ತು ಬೇರೆ ಉಪಾಯವಿರಲಿಲ್ಲ. ಈ
ಎಲ್ಲಾ ಮನುಷ್ಯರಿಗೆ ಬಿದ್ದ ಈ ಅರಿಷ್ಟ ಪಾಲನ್ನು ಆತನು ತನ್ನ ತಂದೆಯ ಬಳಿಯಲ್ಲಿರುವಾ
ಗಲೇ ದೃಷ್ಟಿಸಿ, ಕನಿಕರ ಪಟ್ಟು, ಇಗೋ ದೇವರೇ, ನಿನ್ನ ಚಿತ್ತವನ್ನು ಮಾಡ ಬರುತ್ತೇನೆಂ
ದು ತಂದೆಯಿಂದ ಅಪ್ಪಣೆ ಕೇಳಿ ಕೊಂಡು ಈ ಲೋಕಕ್ಕೆ ಬಂದು ಮನುಷ್ಯರಿಗಾಗಿ ಚಿಕ್ಕಂ
ದಿನಿಂದಲೇ ಕಷ್ಟ ಉಪದ್ರಗಳನ್ನು ಅನುಭವಿಸಿದನು. ನಮಗಾಗಿ ಆತನು ಅರಣ್ಯದಲ್ಲಿಯೂ
ಗೆತ್ಸೇಮನೆಯಲ್ಲಿಯೂ ಕ್ರೂಜಿಕಂಭದಲ್ಲಿಯೂ ಅತಿ ಕಠಿಣವಾದ ಹೋರಾಟವನ್ನು ಹೋ
ರಾಡ ಬೇಕಾಯಿತಲ್ಲ! ಗೆತ್ಸೇಮನೆಯಲ್ಲಿ ಆತನ ದೇಹದ ಬೆವರು ರಕ್ತದ ಬಿಂದುಗಳ ಹಾ

ಗೆ ಹರಿಯ ಬೇಕಾಯಿತಲ್ಲ! ಅವನು ಈ ತನ್ನ ಕಷ್ಟ ಉಪದ್ರಗಳಲ್ಲಿ ಏನಾದರೂ ಅಭ್ಯಂತರ ಮಾಡಿದನೋ? ಇಲ್ಲವೇ ಇಲ್ಲ. ಆ ದುಷ್ಟ ಶತ್ರುಗಳ ಸಮೂಹವು ಆತನ ದುಷ್ಟ ಶಿಷ್ಯನೊಂದಿಗೆ ಆತನನ್ನು ಹಿಡಿಯ ಬರುವಾಗ್ಯೆ, ನೀವು ಯಾರನ್ನು ಹುಡುಕುತ್ತೀರಿ? ಎಂಬ ಪ್ರಶ್ನೆಯನ್ನು ಎರಡಾವರ್ತಿ ಅವರಿಗೆ ಹಾಕಿ, ನೀವು ಯಾರನ್ನು ಹುಡುಕುತ್ತೀರೋ ಅವನು ನಾನೇ! ಎಂದು ಎರಡು ಸಾರಿ ಉತ್ತರ ಕೊಟ್ಟು, ತನ್ನನ್ನು ತೋರಿಸಿ ಕೊಡುತ್ತಾನೆ. (ಯೋಹಾ. ೧೮, ೪—೯.) ಅವನನ್ನು ಅಧಿಪತಿಗಳ ಬಳಿಗೆ ವ್ಯೆಯುವಾಗಲೂ, ಸಂಕಷ್ಟಮರಣಗಳುಳ್ಳ ಪೆಟ್ಟು ನಿಂದೆ ಹಾಸ್ಯ ಬಾಸುಂಡೆಗಳನ್ನು ತಿನ್ನುವಾಗಲೂ, ಹಾಂಗು ತನ್ನ ಕೈಕಾಲುಗಳನ್ನು ಕ್ರೂಜೆಗೆ ಜಡಿಸಿ ಕೊಳ್ಳುವಾಗಲೂ ಸ್ವಲ್ಪಾದರೂ ಅಭ್ಯಂತರ ಮಾಡಿದನೋ? ಇಲ್ಲ. ಯೆಶಾಯನ ೫೩ನೇ ಸಂಧಿಯಲ್ಲಿಯೂ ೧ನೇ ಪೇತ್ರನ ೨ನೇ ಸಂಧಿಯಲ್ಲಿಯೂ ಬರೆದ ಪ್ರಕಾರ ಕೊಲೆಗೆ ತರಲ್ಪಡುವ ಕುರಿಮರಿಯ ಹಾಗೆಯೂ ಉಣ್ಣೆ ಕತ್ತರಿಸುವವನ ಮುಂದೆ ಮೌನವಾಗಿರುವ ಕುರಿಯ ಹಾಗೆಯೂ ತನ್ನ ಬಾಯಿಯನ್ನು ತೆರೆಯದೆ, ಅಷ್ಟು ಶಾಂತವಾಗಿ ಎಲ್ಲವನ್ನು ತಾಳಿ ಕೊಂಡನು. ಅವನು ಬೈಯಲ್ಪಟ್ಟಾಗ ಬೈಯಲಿಲ್ಲ, ಶ್ರಮೆಪಟ್ಟಾಗ ಬೆದರಿಸಲಿಲ್ಲ; ಆದರೆ ನೀತಿಯಾಗಿ ನ್ಯಾಯ ತೀರಿಸುವವನಿಗೆ ಕಾರ್ಯವನ್ನು ಒಪ್ಪಿಸಿದನು. ಅಷ್ಟು ಮಾತ್ರವಲ್ಲಾ, ಮನುಷ್ಯರಿಗೋಸ್ಕರ ತನ್ನನ್ನು ತಾನೇ ಸಂತೋಷದಿಂದ ಒಪ್ಪಿಸಿ ಕೊಟ್ಟನು. ಯಾಕೆ ಸ್ವಮನಸ್ಸಿನಿಂದ ತನ್ನನ್ನು ಒಪ್ಪಿಸಿ ಕೊಟ್ಟನು? ಇಂಥಾ ವಿಪತ್ತುಗಳು ತನ್ನ ಮೇಲೆ ಕವಿಯುವಾಗ ಆತನು ಅದರಿಂದ ತನ್ನನ್ನು ತಪ್ಪಿಸಿ ಕೊಳ್ಳ ಬಹುದಿತ್ತಲ್ಲ! ಹೌದು, ತಪ್ಪಿಸಿ ಕೊಳ್ಳ ಬಹುದಿತ್ತು. ಆದರೆ ಮನುಷ್ಯರ ಪಾಪರಾಶಿಯ ಭಾರವು ಬೆಟ್ಟದಂತೆ ಅತಿ ದೊಡ್ಡದಾಗಿದ್ದರೂ, ಕ್ರೂಜೆಯಲ್ಲಿ, ದೇವರೇ! ದೇವರೇ! ನನ್ನನ್ನು ಯಾಕೆ ಬಿಟ್ಟೆದ್ಧೀ? ಎಂದು ನಿಟ್ಟುಸುರಿಟ್ಟು ಕೂಗುವಷ್ಟು ಆಪತ್ತು ಬಂದರೂ, ಈ ದುಷ್ಟ ಮನುಷ್ಯರ ಕೈಯಿಂದ ಸತ್ತರೂ ಚಿಂತಿಲ್ಲ, ತನ್ನ ಕೆಲಸವನ್ನು ತಾನು ಪೂರೈಸ ಬೇಕೆಂಬದೇ ಆತನ ಮುಖ್ಯ ಗುರಿಯು. ಈ ತನ್ನ ಕೆಲಸವನ್ನು ಹ್ಯಾಗೆ ಪೂರೈಸಿದನು? ಗೂಳಿ ಹೋತಗಳ ರಕ್ತವನ್ನರ್ಪಿಸುವದರಿಂದಲ್ಲ, ತನ್ನ ಸ್ವಂತ ರಕ್ತವನ್ನರ್ಪಿಸುವದರಿಂದಲೇ. ಕ್ರೂಜೆ ಎಂಬ ಬಲಿಪೀಠದಲ್ಲಿ ಅರ್ಪಿತವಾದ ಕುರಿಮರಿಯ ಈ ರಕ್ತವು ಎಂಥಾ ರಕ್ತವಾಗಿತ್ತು? ಅದು ಕಳಂಕವಿಲ್ಲದ ರಕ್ತವಾಗಿತ್ತು. ಒಬ್ಬ ಸಾಧಾರಣ ಮನುಷ್ಯನ ರಕ್ತವನ್ನು ನೋಡಿದರೆ, ಅದು ಎಷ್ಟೋ ಅಪರಾಧ ತುಂಬಿದ್ದು ಕಳಂಕವುಳ್ಳದ್ದು ಎಂದು ಕ್ಷಣದಲ್ಲಿ ಕಂಡು ಬರುವದಲ್ಲ; ಆದರೆ ಈ ಕುರಿಮರಿಯ ನಿಜರಕ್ತದಲ್ಲಿ ಒಬ್ಬನಾದರೂ ಯಾವ ಕೊರತೆಯನ್ನಾದರೂ ಅಪರಾಧವನ್ನಾದರೂ ಕಾಣನು. ಪಿಲಾತನು ಸಹಾ ಆತನನ್ನು ವಿಚಾರಿಸಿ, ಈ ಮನುಷ್ಯನಲ್ಲಿ ತಪ್ಪನ್ನು ಕಾಣೆನೆಂದು ಬಹಿರಂಗವಾಗಿ ಹೇಳಿದನಲ್ಲ. ಆತನಲ್ಲಿಯಾದರೂ ಆತನ ಸ್ವಭಾವದಲ್ಲಿಯಾದರೂ ಯಾವನಾದರೂ ಯಾವ ತಪ್ಪನ್ನೂ ಕಳಂಕವನ್ನೂ ಅಶುದ್ಧತ್ವವನ್ನೂ ಪಾಪವನ್ನೂ ತೋರಿಸ ಕೂಡದಷ್ಟು ನಿಷ್ಕಳಂಕನೂ ನಿರ್ದೋಷಿಯೂ ಪಾಪರಹಿತನೂ ಆಗಿದ್ದನು. ಆತನ ಜೀವ ಭಾವಗಳ ಸ್ಥಿತಿಯು ಇಷ್ಟು ನಿಷ್ಕಳಂಕವಾದದ್ದಾಗಿದ್ದರೆ, ಆತನ ರಕ್ತವು ಎಂಥಾ ಪರಿಶುದ್ಧ ರಕ್ತವಾಗಿರ ಬೇಕು! ಹೀಗೆ ಆತನು ತನ್ನನ್ನು ಕಳಂಕವಿಲ್ಲದವನಾಗಿ

ಅರ್ಪಿಸಲಿಕ್ಕೆ ಆತನಲ್ಲಿ ನೆಲೆಯಾಗಿರುವ ನಿತ್ಯ ಆತ್ಮವು ಅಂದರೆ ಆತನಲ್ಲಿ ಪರಿಪೂರ್ಣವಾಗಿ ವಾಸಿಸುವ ಪರಿಶುದ್ಧಾತ್ಮವೂ ಆತನ ದಿವ್ಯತ್ವವೂ ಸಹಾಯ ಕೊಡುತ್ತಾ, ಈ ಉದ್ಯೋಗಕ್ಕಾಗಿ ಆತನನ್ನು ಶುದ್ಧೀಕರಿಸುತ್ತಾ ತಯಾರು ಮಾಡುತ್ತಾ ಇತ್ತು. ಆತನು ದೇವರ ಮಗನಲ್ಲದೆ ಬರೇ ಮನುಷ್ಯನಾಗಿರುತ್ತಿದ್ದರೆ, ತನ್ನ ಮೇಲೆ ಬಂದಂಥಾ ಈ ಘೋರ ತರದ ಕಷ್ಟಗಳನ್ನು ಹ್ಯಾಗೂ ಸಹಿಸಲಸಾಧ್ಯವಾಗಿತ್ತು; ಅಷ್ಟು ಮಾತ್ರವಲ್ಲಾ, ತನ್ನನ್ನು ಮುತ್ತಿಕೊಂಡು ಇರಿಕಿಸುವಂಥಾ ಮಹಾ ಕಠಿಣ ಶೋಧನೆಗಳಿಗೆ ಒಳ ಬೀಳುತ್ತಿದ್ದನು. ಆದರೆ ಆತನಲ್ಲಿ ದಿವ್ಯತ್ವದ ಸಂಪೂರ್ಣತೆಯು ಇದ್ದದರಿಂದ ಎಲ್ಲಾ ಸಂಕಟ ಮರಣಗಳನ್ನು ಅನುಭವಿಸಲಿಕ್ಕೆ ಶಕ್ತನಾದನು. ಈ ಪರಿಯಾಗಿ ಹಳೆ ಒಡಂಬಡಿಕೆಯ ಸಮಸ್ತ ಬಲಿ ಆಚಾರಗಳು ಈಡೇರಿದವು. ಸಮಸ್ತರು ಸಾಯ ಬೇಕಾದ ಸ್ಥಳದಲ್ಲಿ ಎಲ್ಲರಿಗೋಸ್ಕರ ಒಬ್ಬನು, ದೇವರ ಮಗನು ತಾನೇ, ತನ್ನ ಜೀವವನ್ನೂ ರಕ್ತವನ್ನೂ ಉಚಿತವಾಗಿ ಕೊಟ್ಟು ಬಿಟ್ಟನು. ಈ ಬಲಿಯು ಮಹಾ ಬಲವುಳ್ಳ ಬಲಿಯು. ಈ ರಕ್ತವು ಮಹಾ ಬಲವುಳ್ಳ ರಕ್ತವು. ಈ ಬಲಿಯಲ್ಲಿ ಸತ್ತ ಕುರಿಮರಿಯು ಮಹಾ ಪರಿಶುದ್ಧ ಕುರಿಮರಿಯು.

2.) ಬಲಿ ಅರ್ಪಿಸುವ ಸಮಯ ಯಾವದು? ಹಳೆ ಒಡಂಬಡಿಕೆಯಲ್ಲಿ ಪ್ರಧಾನ ಯಾಜಕನು ವರುಷಾವಧಿ ಮಹಾ ವಿಮೋಚನೆಯ ಹಬ್ಬದ ದಿವಸದಲ್ಲಿ ಪಾಪಬಲಿಯನ್ನರ್ಪಿಸಿದನು. ಆ ಸಮಯದಲ್ಲಿ ಆದ ಬಲಿ ಅರ್ಪಣೆಯು ಇಸ್ರಯೇಲ್ಯರಿಗೆ ಅತಿ ವಿಶೇಷ ಬಲಿಯಾಗಿತ್ತು; ಆ ದಿವಸ ಸಹಾ ಮಹಾ ಶ್ರೇಷ್ಠ ಹಬ್ಬದ ದಿವಸವಾಗಿತ್ತು. ಆದರೂ ಮಹಾ ವಿಮೋಚನೆಯು ನಿಜವಾಗಿ ನೆರವೇರದದರಿಂದ ತಿರಿಗಿ ತಿರಿಗಿ ವರುಷ ವರುಷಕ್ಕೆ ಪಾಪ ಬಲಿಯನ್ನರ್ಪಿಸ ಬೇಕಾಯಿತು. ಆದರೆ ಯೇಸು ಕ್ರಿಸ್ತನು ಒಮ್ಮೆಯೇ ಒಂದೇ ಬಲಿಯನ್ನು ಅರ್ಪಿಸಿದನು. ಯೇಸು ಕ್ರಿಸ್ತನು ಒಂದೇ ಸಾರಿ ಶ್ರಮೆ ಪಟ್ಟನು, ಒಂದೇ ಸಾರಿ ಸ್ವರಕ್ತವನ್ನು ಚೆಲ್ಲಿದನು, ಒಂದೇ ಸಾರಿ ಕ್ರೂಜೆ ಎಂಬ ಬಲಿಪೀಠಕ್ಕೆ ಏರಿ, ತನ್ನನ್ನು ತಾನೇ ಅರ್ಪಿಸಿ, ಒಂದೇ ಸಾರಿ ತನ್ನ ಜೀವವನ್ನು ಮನುಷ್ಯರ ಓಲಾಗಿ ಕೊಟ್ಟು ಬಿಟ್ಟನು. ಇನ್ನು ಮೇಲೆ ಎರಡನೇ ಬಲಿಯು ಇಲ್ಲ, ಇನ್ನು ಮೇಲೆ ಯಾವ ಬಲಿಯಾದರೂ ಅರ್ಪಣೆಯಾಗದು, ಎಲ್ಲಾ ಒಮ್ಮೆಯೇ ತೀರಿತು. ಇದೊಂದೇ ಬಲಿ ಸರ್ವ ಕಾಲಕ್ಕೂ ಸರ್ವ ಮನುಷ್ಯರಿಗೂ ಸಾರ್ಥಕವಾದದ್ದು.

B.) ಅತಿ ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸಿ ಅಲ್ಲಿ ಧೂಪವನ್ನರ್ಪಿಸುವದರಲ್ಲಿ ಸಹಾ ಯೇಸು ಕ್ರಿಸ್ತನ ಪ್ರಧಾನ ಯಾಜಕೋದ್ಯೋಗ ಶ್ರೇಷ್ಠವಾದದ್ದು.

ಹಳೆ ಒಡಂಬಡಿಕೆಯಲ್ಲಿ ಪ್ರಧಾನ ಯಾಜಕನು ಮೊದಲಾಗಿ ಸಾಕ್ಷಿಗುಡಾರದ ಪ್ರಾಕಾರದಲ್ಲಿ ಬಲಿಯನ್ನರ್ಪಿಸಿ, ಗೂಳಿ ಹೋತಗಳ ರಕ್ತವನ್ನು ಚೆಲ್ಲಿ, ಆ ರಕ್ತದೊಡನೆ ಬೇರೆ ಯಾಜಕರು ವೃತ್ತಿ ನಡಿಸುವಂಥಾ ಪರಿಶುದ್ಧ ಸ್ಥಳವನ್ನು ದಾಟಿ, ತನ್ನ ಹೊರ್ತು ಬೇರೆ ಯಾವನಾದರೂ ಹೊಗ ಕೂಡದ ಅತಿ ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸಿದನು. ಇಲ್ಲಿ ತೋರಿಸಿರುವ ಮೂರು ಸ್ಥಳಗಳೂ ಕೈಕೆಲಸದ್ದು, ಈ ಸೃಷ್ಟಿಯದ್ದು ಅಂದರೆ ಮರ ಕಲ್ಲು ಮುಂತಾದ ಈ ಭೌಮಿಕ ವಸ್ತುಗಳಿಂದ ಉಂಟು ಮಾಡಿದಂಥವುಗಳು. ಆದರೆ ಯೇಸು ಕ್ರಿಸ್ತ

ನೆಂಬ ಪ್ರಧಾನ ಯಾಜಕನು ಪ್ರಾಕಾರವೆಂಬಂತೆ ಇರುವ ಈ ಭೂಮಿಯಲ್ಲಿ ಕ್ರೂಜೆ ಎಂಬ ಬಲಿಪೀಠದಲ್ಲಿ ತನ್ನ ರಕ್ತವನ್ನು ಚೆಲ್ಲಿ, ಈ ಸೃಷ್ಟಿಯದ್ದಲ್ಲದ, ಮನುಷ್ಯರ ಕೈಕೆಲಸದ್ದಲ್ಲದ ಅಧಿಕ ಸಂಪೂರ್ಣವಾದ ಗುಡಾರದಿಂದ ಅಂದರೆ ಆಕಾಶಲೋಕಗಳನ್ನು ದಾಟಿ, ನಮ್ಮ ಈ ಮರ್ತ್ಯ ಜಿಹ್ವೆಯು ವರ್ಣಿಸ ಕೂಡದಷ್ಟು ಮಹಿಮಾಭರಿತವಾದಂಥಾ, ಅತ್ಯಂತ ಸಂಪೂರ್ಣವಾದಂಥಾ ಪರಲೋಕವೆಂಬ ಅತಿ ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸಿದನು.

ಮತ್ತು ಹಳೆ ಒಡಂಬಡಿಕೆಯ ಪ್ರಧಾನ ಯಾಜಕನು ವೃತ್ತಿ ನಡಿಸುವಂಥಾ ಈ ಅತಿ ಪರಿಶುದ್ಧ ಸ್ಥಳದಲ್ಲಿ ಮುಖ್ಯವಾದ ಸಾಮಗ್ರಿ ಒಡಂಬಡಿಕೆಯ ಪೆಟ್ಟಿಗೆಯೇ. ಇದರಲ್ಲಿ ದೇವರ ಕೃಪಾಸನವು ಇತ್ತು. ಈ ಕೃಪಾಸನಕ್ಕೆ ಎರಡು ಕೆರೂಬಿಗಳು ನೆರಳು ಹಾಕುತ್ತಿದ್ದವು. ಈ ಎರಡರ ಮಧ್ಯದಲ್ಲಿ ಯೆಹೋವನು ಮೇಘರೂಪನಾಗಿ ಇಳಿದು ಬಂದು, ಕೃಪಾಸನದಲ್ಲಿ ವಾಸಿಸಿದನು. ಇಲ್ಲಿ ಯೆಹೋವನು ತನ್ನ ಮಹಿಮೆಯನ್ನು ತೋರಿಸಿದರೂ ತನ್ನ ನಿಜ ಮಹಿಮೆಯನ್ನು ಪ್ರಕಟ ಮಾಡಲಿಲ್ಲ. ಆದದರಿಂದ ಪ್ರಧಾನ ಯಾಜಕನು ಅಲ್ಲಿ ಯೆಹೋವನ ಮಹಿಮೆಯ ಒಂದು ಚಿನ್ಹೆಯನ್ನು ಮಾತ್ರ ಕಂಡನು. ಹಾಗಾದರೆ ಆ ಕೃಪಾಸನವು ದೇವರ ನಿಜವಾದ, ಸಂಪೂರ್ಣವಾದ ವಾಸಸ್ಥಳವಲ್ಲ. ಆದರೆ ಯೇಸು ಕ್ರಿಸ್ತನು ಪರಲೋಕಕ್ಕೆ ಪ್ರವೇಶಿಸಿ, ಅಲ್ಲಿ ತನ್ನ ತಂದೆಯನ್ನೇ ಮುಖಾಮುಖಿಯಾಗಿ ಕಂಡನು. ಅಲ್ಲಿ ತಂದೆಯ ಸಿಂಹಾಸನವನ್ನು ಹೊಸ ಸಂತೋಷದೊಡನೆ ನೋಡುತ್ತಾನೆ. ಅಲ್ಲಿ ಯೆಹೋವನ ನಿವಾಸವು ಪರಿಪೂರ್ಣವಾದದ್ದಾಗಿತ್ತು. ಅಲ್ಲಿ ಕೆರೂಬಿಯರಿಂದಲೂ ಸೆರಫಿಯರಿಂದಲೂ ಮುತ್ತಿದ ಮಹೋನ್ನತನ ಸಿಂಹಾಸನವೆಂಬ ನಿಜ ಕೃಪಾಸನವನ್ನು ಆತನು ಕಂಡನು. ಅದು ಮಾತ್ರವಲ್ಲಾ, ತಂದೆಯ ಸಿಂಹಾಸನದ ಬಲಗಡೆಯಲ್ಲಿ ಕೂತು ಕೊಂಡು ರಾಜಾಧಿರಾಜನಾಗಿ ಆಳುತ್ತಾನೆ.

ಹಳೆ ಒಡಂಬಡಿಕೆಯಲ್ಲಿ ಪ್ರಧಾನ ಯಾಜಕನು ಪ್ರಾಕಾರದಿಂದ ವೈದ ರಕ್ತವನ್ನು ಗುಡಾರದ ಎಲ್ಲಾ ಸಾಮಗ್ರಿಗಳ ಮೇಲೆ ಚಿಮಿಕಿಸಿ, ಎಲ್ಲಾ ಇಸ್ರಯೇಲ್ಯರ ಮಧ್ಯಸ್ಥನಾಗಿ, ವಿಮೋಚನೆಯಾದ ಪಾಪಗಳ ನೆನಪಿಗಾಗಿ ವಿಜ್ಞಾಪನೆಯ ಗುರ್ತಾಗಿರುವ ಧೂಪದ ಆರತಿಯನ್ನು ದೇವರ ಮುಂದೆ ಸುಟ್ಟನು. ಆದರೆ ಯೇಸು ಕ್ರಿಸ್ತನು ತನ್ನ ಸ್ವಂತ ರಕ್ತದೊಡನೆ ಪರಲೋಕಕ್ಕೆ ಏರಿ, ದೇವರ ಮುಂದೆ ಜ್ಞಾಪಕರಕ್ತವಾಗಿಯೂ ತನ್ನ ಎಲ್ಲಾ ಮಧ್ಯಸ್ಥಿಕೆಗೆ ಆಧಾರವಾಗಿಯೂ ಇಟ್ಟು, ತಂದೆಯ ಸನ್ನಿಧಾನದಲ್ಲಿ ಸಕಲ ಪಾಪಿಗಳಿಗೋಸ್ಕರ ಮಧ್ಯಸ್ಥನಾಗಿ, ಸದಾಕಾಲಕ್ಕೆ ಪ್ರಾರ್ಥನೆ ವಿಜ್ಞಾಪನೆ ಎಂಬ ಧೂಪವನ್ನು ಸುಡುತ್ತಾ ಇದ್ದಾನೆ.

ಹೀಗೆ ಯೇಸು ಕ್ರಿಸ್ತನಲ್ಲಿ ಪ್ರಧಾನ ಯಾಜಕೋದ್ಯೋಗವು ಅತ್ಯಂತ ಮಹಿಮೆಯೊಡನೆ ಸಂಪೂರ್ಣವಾಯಿತು. ಹಳೆ ಒಡಂಬಡಿಕೆಯ ಉದ್ಯೋಗವು ಬಲಹೀನವಾಗಿಯೂ ಭಂಗವಾಗಿಯೂ ಹೋಯಿತು. ಇಂಥಾ ಸಂಪೂರ್ಣ ಉದ್ಯೋಗವು ಆತನಿಗೆ ಇದ್ದದರಿಂದ ಈ ಆಧಾರವಚನದಲ್ಲಿ ನಾವು ನೋಡುವ ಪ್ರಕಾರ, ಈ ಸಂಪೂರ್ಣ ಉದ್ಯೋಗದಿಂದ ಸಂಪೂರ್ಣವಾದ ಫಲವು ಸಹಾ ಬಂತು, ಹಾಗಾದರೆ:

II. ಪ್ರಧಾನ ಯಾಜಕೋದ್ಯೋಗದಿಂದ ಬಂದ ಫಲವನ್ನು ನೋಡಿದರೆ ಸಹಾ ಯೇ

ಸು ಕ್ರಿಸ್ತನ ಪ್ರಧಾನ ಯಾಜಕತ್ವವು ಹಳೆ ಒಡಂಬಡಿಕೆಯ ಪ್ರಧಾನ ಯಾಜಕತ್ವಕ್ಕಿಂತ ಅತ್ಯಂತ ಮಹಿಮೆಯುಳ್ಳದ್ದು.

ಹಳೆ ಒಡಂಬಡಿಕೆಯ ಪ್ರಧಾನ ಯಾಜಕೋದ್ಯೋಗದಿಂದ ಫಲ ಬರಲಿಲ್ಲ ಎಂತ ಹೇಳ ಕೂಡದು. ಫಲ ಬಂತು ಸರಿ; ಅದರೂ ಅದು ಸಂಪೂರ್ಣ ಫಲವಲ್ಲ. ಆದರೆ ಯೇಸು ಕ್ರಿಸ್ತನಿಂದ ನಿಜ ಸಂಪೂರ್ಣ ಫಲಗಳು ಸಾಧ್ಯವಾದವು. ಅವುಗಳಿಗೆ ಈ ಆಧಾರವಚನದಲ್ಲಿ ಆಗುವ ಒಳ್ಳೆಯವುಗಳೆಂದು ಹೇಳಿಯದೆ. ಹಳೆ ಒಡಂಬಡಿಕೆಯಲ್ಲಿ ಆಗಲಿಲ್ಲ ಅಂದರೆ ಸಂಪೂರ್ಣವಾಗಲಿಲ್ಲ, ಆದರೆ ಕ್ರಿಸ್ತನ ರಕ್ತದಿಂದ ಒಳ್ಳೆಯವುಗಳು ಆದವು ಅಂದರೆ ಸಂಪೂರ್ಣವಾದವು. ಹಾಗಾದರೆ ಆ ಒಳ್ಳೆಯವುಗಳು ಯಾವವು?

A.) ನಿತ್ಯ ವಿಮೋಚನೆ ಅಂದರೆ ಪಾಪಗಳ ಪರಿಹಾರ, ಮನಸ್ಸಾಕ್ಷಿಯ ಶುದ್ಧಿಯು.

ಹಳೆ ಒಡಂಬಡಿಕೆಯ ಪ್ರಧಾನ ಯಾಜಕನು ಚೆಲ್ಲಿದ ಗೂಳಿ ಹೋತಗಳ ರಕ್ತದಿಂದ ಬಂದ ಪ್ರಯೋಜನವೇನು? ಮಾಂಸಕ್ಕೆ ಮಾತ್ರ ಶುದ್ಧಿ ಬಂತು ಅಂದರೆ ಬಹಿರಂಗದ ಶುದ್ಧೀಕರಣವಾಯಿತು. ಹ್ಯಾಗಂದರೆ ಹೊಲೆಯಾದವರಿಗೂ ಕುಷ್ಟರೋಗಿಗಳಿಗೂ ಸೂತಕದವರಿಗೂ ಶವ ಮುಟ್ಟಿದವರಿಗೂ ಮೇಹದ ಅಶುದ್ಧತ್ವ ಉಳ್ಳವರಿಗೂ ಇನ್ನೂ ಬೇರೆ ಬೇರೆ ವಿಧದಿಂದ ಭ್ರಷ್ಟರಾದವರಿಗೂ ಬಲಿಯ ರಕ್ತವನ್ನಾಗಲಿ ಕಡಸಿನ ಬೂದಿಯನ್ನಾಗಲಿ ತಳಿಸುವದರಿಂದ ಬಹಿರಂಗದ ಶುದ್ಧೀಕರಣವಾಯಿತು, ಅಂದರೆ ಭ್ರಷ್ಟರಾಗಿದ್ದ ಇವರು ಬೇರೊಬ್ಬರ ಕೂಡಾ ಸಂಸರ್ಗದಲ್ಲಿ ಇರ ಬಹುದಾಯಿತು. ಅದಲ್ಲದೆ ಯಾರಾದರೂ ತಪ್ಪಿ ಕರ್ಮ ಮಾಡಿ ಶಿಕ್ಷಾಪಾತ್ರನಾಗಿದ್ದರೆ, ಅಂಥವನಿಗೆ ರಕ್ತ ಬಲಿಯಿಂದ ಬಿಡುಗಡೆಯಾಯಿತು. ಅದು ಮಾತ್ರವಲ್ಲ ಈ ಬಲಿಗಳಿಂದ ಒಂದು ವಿಧವಾಗಿ ಪಾಪಗಳ ಶಾಂತಿ, ಮುಚ್ಚುವಿಕೆ ಆಯಿತು. ಇಸ್ರಯೇಲ್ಯರು ತಮ್ಮ ಬಲಿಪಶುಗಳನ್ನು ಪ್ರಧಾನ ಯಾಜಕನ ಬಳಿಗೆ ತಂದ ಮೇಲೆ, ಅವನು ಅವುಗಳ ತಲೆಯ ಮೇಲೆ ಕೈಗಳನ್ನಿಟ್ಟು ತನ್ನ ಪಾಪವನ್ನೂ ಜನರ ಪಾಪವನ್ನೂ ಅವುಗಳ ಮೇಲೆ ಹೊರಿಸುವದರಿಂದ ತಮ್ಮ ಪಾಪಗಳಿಗೆ ಒಂದಿಷ್ಟು ಶಾಂತಿಯಾಯಿತು. ನನ್ನ ಮೇಲೆ ಬಿದ್ದ ಪಾಪದ ಅಪರಾಧವು ಈಗ ಹೋಯಿತು ಎಂಬ ಒಂದು ತರದ ಅನುಭವವು ಅವರೊಳಗೆ ಆಯಿತು; ಆದರೂ ಅವರ ಅಂತರಂಗದೊಳಗಿದ್ದ ಪಾಪದ ಬಲವು ನಾಶವಾಗಲಿಲ್ಲ, ಪಾಪವು ಬಹಿರಂಗದಲ್ಲಿ ಪ್ರತ್ಯಕ್ಷವಾಗದ ಹಾಗೆ ಒಂದು ಮುಚ್ಚಳದಿಂದ ಮುಚ್ಚಿದ ಹಾಗಾಯಿತು ಅಷ್ಟೇ. ಆದರೆ ಯೇಸು ಕ್ರಿಸ್ತನು ಚೆಲ್ಲಿದ ರಕ್ತದಿಂದ ಮಾಂಸದ ಶುದ್ಧಿಯಲ್ಲ ಅಥವಾ ಪಾಪಗಳ ಶಾಂತಿ ಮಾತ್ರವಲ್ಲ, ಪಾಪಗಳ ಪರಿಹಾರವೇ ಪಾಪಗಳ ನಾಶನವೇ ಆಯಿತು. ಅಂದಿನ ತನಕ ಇಸ್ರಯೇಲ್ಯರು ಮಾತ್ರವಲ್ಲ, ಭೂಮಂಡಲದ ಸಕಲ ಮನುಷ್ಯರು ಪಾಪಕ್ಕೂ ಅದರಿಂದ ಬಂದ ಶಾಪಕ್ಕೂ ಒಳ ಬಿದ್ದು ದಾಸರಾಗಿ ಹೋದರು. ಇಡೀ ನರಜಾತಿಯ ಪಾಪಗಳ ರಾಶಿಯು ಯೇಸುವಿನ ಮೇಲೆ ಬಿದ್ದದರಿಂದ ಎಲ್ಲಾ ಮನುಷ್ಯರ ಮೇಲೆ ಇದ್ದ ಪಾಪದ ಅಧಿಕಾರವೂ ಪಾಪದ ಶಾಪವೂ ಯೇಸು ಕ್ರಿಸ್ತನ ಶುದ್ಧ ರಕ್ತದಿಂದ ತೆಗದು ಹಾಕಲಾಯಿತು. ಅಂದಿನಿಂದ ಯೇಸು ಕ್ರಿಸ್ತನ ರಕ್ತದ ಮೇಲೆ ದೃಢ ನಂಬಿಕೆಯನ್ನಿಡುವ ಒಬ್ಬೊಬ್ಬ ಪಾಪಿಯ ಹೃದಯದಲ್ಲಿರುವ ಪಾಪದ

ಎಲ್ಲಾ ಬಲಗಳೂ, ಪಾಪದ ಸುದಾ, ಪೂರ್ಣವಾಗಿ ಅಡಿ ಸಹಿತವಾಗಿ ಕೀಳಲಾಯಿತು. ಪಾಪಗಳೆಂಬ ಸತ್ತ ಕ್ರಿಯೆಗಳಿಂದ ಮೈಲಿಗೆ ಹತ್ತಿದ ಮನಸ್ಸಾಕ್ಷಿಯು ಶುದ್ಧವಾಯಿತು. ಹಾಗಾದರೆ ಇನ್ನು ಮೇಲೆ ವಿಶ್ವಾಸಿಯ ಹೃದಯದಲ್ಲಿ ಪಾಪದ ಅಧಿಕಾರವಿರುವದಿಲ್ಲ, ಪಾಪದ ದಾಸತ್ವವೂ ಪಾಪದ ಶಾಪವೂ ಇನ್ನೂ ಇರುವದಿಲ್ಲ, ಪಾಪದಿಂದ ಬರುವಂಥಾ ಶಿಕ್ಷೆ ದಂಡನೆಗಳು ಇನ್ನು ಇರುವದಿಲ್ಲ; ಇನ್ನು ಪಾಪಿಯು ಪಾಪದ ಸ್ನೇಹಿತನ ಹಾಗೆ ಸಂತೋಷದಿಂದ ಪಾಪ ಮಾಡನು; ಇನ್ನು ಪಾಪಕ್ಕೂ ಪಾಪಿಗೂ ಪರಸ್ಪರ ಗೊಡವೆ ಏನೇನೂ ಇಲ್ಲ; ಇನ್ನು ಮೇಲೆ ಮೋಸಗಾರನೂ ಪಾಪದ ಪ್ರೇರಕನೂ ಆದ ಸೈತಾನನು ಬಂದು ಎಷ್ಟು ಪ್ರೇರೇಪಿಸಿದರೂ ಅವನು ಜಯ ಹೊಂದ ಕೂಡದು; ಇನ್ನು ಮುಂದೆ ಲೋಕವೂ ಸ್ವಂತ ಮಾಂಸದ ಇಚ್ಛೆ ಆಶೆಗಳೂ ಎಷ್ಟು ಕಾಡಿಸಿದರೂ ಅವುಗಳಿಗೆ ಜಯವಾಗದು; ಅವುಗಳು ಇನ್ನು ಮುಂದೆ ಪಾಪಿಯ ಹೃದಯದಲ್ಲಿ ಆಳುವದಿಲ್ಲ. ಇವೆಲ್ಲವುಗಳು ಯೇಸು ಕ್ರಿಸ್ತನೊಂದಿಗೆ ಶಿಲುಬೆಗೆ ಜಡಿಯಲ್ಪಟ್ಟವು. ಯೇಸು ಕ್ರಿಸ್ತನ ಉತ್ತಮ ರಕ್ತದಿಂದ ಇಷ್ಟು ದೊಡ್ಡ ಕಾರ್ಯಗಳು ಸಿದ್ಧಿಗೆ ಬಂದವು. ಯೇಸು ಕ್ರಿಸ್ತನು ಸರ್ವ ಸಂಪೂರ್ಣ ವಿಮೋಚನೆಯನ್ನು ಉಂಟು ಮಾಡಿದ್ದರೂ, ಈಗ ಮನುಷ್ಯರ ಸ್ಥಿತಿ ಹ್ಯಾಗುಂಟು? ಅಯ್ಯೋ! ಅನೇಕರು ಪಾಪಗಳ ವಿಷಯ ರವಷ್ಟಾದರೂ ಚಿಂತೆ ಪಡುವದಿಲ್ಲ; ಪಾಪ ಹೋಗ ಬೇಕೆಂಬ ಆಶೆಯು ಸ್ವಲ್ಪಾದರೂ ಅವರ ಮನಸ್ಸಿನಲ್ಲಿ ಹೋಗಲಿಲ್ಲ. ಅಂಥವರು ಪಾಪ ಮಾಡಲಿಕ್ಕೆ ಕಿಂಚಿತ್ತಾದರೂ ಭಯ ಪಡುವದಿಲ್ಲ. ಅನೇಕರಿಗೆ ಪಾಪಾಚಾರವನ್ನು ಬಿಟ್ಟು ಬಿಡ ಬೇಕೆಂಬ ಮನಸ್ಸುಂಟು; ಆದರೆ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುವದಕ್ಕೆ ಮನಸ್ಸಿಲ್ಲವೇ ಇಲ್ಲ. ಹಲವರು ನಾನು ಈಗ ಒಂದು ದೊಡ್ಡ ಪಾಪ ಮಾಡಿದ್ದೇನೆ; ಅದರಿಂದ ನನಗೆ ಬಹಳ ಪೀಡೆಯಾಗುತ್ತದೆ, ಅದು ಸ್ವಲ್ಪ ಶಾಂತವಾದರೆ ಸಾಕಾಗುತ್ತಿತ್ತು ಎಂದು ನೆನಸಿ, ದೀರ್ಘ ಪ್ರಾರ್ಥನೆಗಳಿಂದಲೂ ಬಹಳ ಕಣ್ಣೀರಿನಿಂದಲೂ ದುಃಖದಿಂದಲೂ ನಿಟ್ಟುಸುರಿಟ್ಟು ದೇವರಿಗೆ ಮೊರೆ ಇಡುತ್ತಾರೆ. ಅನೇಕರು ನನ್ನ ಪಾಪವು ಅತಿ ಕಠಿಣವಾದದ್ದಾಗಿರುವದರಿಂದ ಎಂದಿಗೂ ಪರಿಹಾರವಾಗದು ಎಂದು ಯೋಚಿಸಿ, ನಿರಾಶೆಯಾಗಿ ಹೋಗುತ್ತಾರೆ.

(ಮುಂದೆ ಸಾಗಿಸುವದು.)

Printed by Sto"z & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. AUGUST 1870. ಅಂಕೆ ೨.

ಇಬ್ರಿಯ. ೮, ೧೧–೧೪.

(೧ನೇ ಅಂಕೆಯಿಂದ ಮುಂದೆ.)

ಬಹು ಜನರು ಪುಣ್ಯ ಕ್ರಿಯೆಗಳನ್ನು ಮಾಡುವದರಿಂದ ಪಾಪದ ಕರ್ಮ ಹೋದೀತೆಂದು ನೆನಸುತ್ತಾರೆ. ಬಹುತೇಕ ಜನರು ಹೊರಗಿನ ರೀತಿಯಿಂದ ಬಹಿರಂಗವಾಗಿ ಮನುಷ್ಯರ ಮುಂದೆ ಭಕ್ತಿ ತೋರಿಸಿದರೆ ಸಾಕು, ಇದಕ್ಕಿಂತ ವಿಶೇಷವಾದದ್ದೇನೂ ಬೇಡ ಎಂದು ಲಘು ಮನಸ್ಸಿನಿಂದಿರುತ್ತಾರೆ. ಅನೇಕರು ತಾವು ಮೆಚ್ಚುವ ಪ್ರತ್ಯೇಕ ಪಾಪಗಳನ್ನು ಅಂತರಂಗದಲ್ಲಿ ಇಟ್ಟು ಕೊಂಡು, ಪಾಪಪರಿಹಾರವನ್ನಪೇಕ್ಷಿಸುತ್ತಾರೆ. ಅನೇಕರು ಪಾಪಪರಿಹಾರದ ನಿಶ್ಚಯವಿಲ್ಲದೆ ಒಮ್ಮೆ ನನಗೆ ಪಾಪಪರಿಹಾರ ಆಯಿತೆಂದು ಹೇಳಿ, ಇನ್ನೊಮ್ಮೆ ಆಯಿತೋ ಏನೋ ಸಂಶಯವದೆ ಎಂದು ಹೇಳುತ್ತಾರೆ. ಇನ್ನು ಅನೇಕರು ತಮಗೆ ಪಾಪಪರಿಹಾರ ಆಗಿ ಹೋಯಿತು ಎಂದು ಯಾವಾಗಲೂ ತಮ್ಮ ನುಡಿಗಳಿಂದ ತೋರಿಸಿ ಕೊಂಡು, ತಾವು ಅನುದಿನವು ಮಾಡುವ ತಪ್ಪುಗಳನ್ನು ಎಣಿಕೆ ಮಾಡದೆ, ಹೆಚ್ಚಳ ಪಟ್ಟು, ಮತ್ತೊಬ್ಬರನ್ನು ಅಸಡ್ಡೆ ಮಾಡುತ್ತಾರೆ. ಆದರೆ ಅವರ ಬಹಿರಂಗದ ಕ್ರಿಯೆಗಳನ್ನು ನೋಡಿದರೆ, ಅಂಥವರಿಗೆ ಪಾಪಪರಿಹಾರ ಆಯಿತೋ ಏನೋ ಎಂಬ ಸಂಶಯ ಹುಟ್ಟುತ್ತದೆ. ಇಂಥವರಲ್ಲಿ ಅನೇಕರಿಗೆ ಪಾಪಪರಿಹಾರದ ಅನುಭವ ಇರುವದೇ ಇಲ್ಲ. ಒಂದು ವೇಳೆ ಪಾಪಪರಿಹಾರವಾಗಿದ್ದರೂ, ತಮ್ಮ ಹೃದಯದ ಸ್ಥಿತಿಯೂ ಮತ್ತೊಬ್ಬರ ಸ್ಥಿತಿಯೂ ಸ್ವಲ್ಪ ಕಡಿಮೆ ಮರತು ಹೋಯಿತಷ್ಟೇ. ಪ್ರಿಯ ಸಹೋದರರೇ, ನಾವು ಯಾವ ಪಕ್ಷದವರು? ಯಾವ ಕೂಟಕ್ಕೆ ಶೇರಿ ಕೊಂಡವರು? ನಾವು ಪೂರ್ಣ ಪಾಪಪರಿಹಾರವನ್ನು ಹೊಂದಿದವರೋ? ಅಥವಾ ಪಾಪಗಳಲ್ಲಿ ಇನ್ನೂ ನಡಿಯುತ್ತಾ ಇರುವವರೋ? ನಾನು ಮುಂಚೆ ಹೇಳಿದ ಕೆಲವು ಕೂಟಗಳಲ್ಲಿ ಶೇರಿದವರಾಗಿದ್ದೆವು. ಆದರೆ ಕಡೇ ಕೆಲವು ಪಕ್ಷಗಳಲ್ಲಿ ಶೇರಿದ್ಧೇವೋ ಏನು? ಜಾಗ್ರತೆಯಿಂದ ಪರೀಕ್ಷಿಸಿ ಕೊಳ್ಳುವಾ. ಯಾರು ಪಾಪಪರಿಹಾರವನ್ನು ಹೃದ

ಯದಲ್ಲಿ ನಿಜವಾಗಿ ಅನುಭವಿಸುವದಿಲ್ಲವೋ, ಅಂಥವನು ಕ್ರಿಸ್ತನು ಕ್ರೂಜೆಯಲ್ಲಿ ಸಂಪಾದಿಸಿದ ನಿತ್ಯ ವಿಮೋಚನೆಯ ಬೆಲೆಯನ್ನು ಸ್ವಲ್ಪಾದರೂ ಗ್ರಹಿಸುವದಿಲ್ಲ. ಪ್ರಿಯ ಸಹೋದರರೇ, ಯೇಸು ಕ್ರಿಸ್ತನು ನಮ್ಮ ಪಾಪಗಳನ್ನು ಸಹಾ ಶಿಲುಬೆಯ ಮೇಲೆ ಹೊತ್ತು ಕೊಂಡನಲ್ಲ! ನಮ್ಮ ಅಕ್ರಮಗಳ ಅಪರಾಧವನ್ನು ಸಹಾ ಆತನು ಕ್ರೂಜೆಕಂಭದಲ್ಲಿ ಅಳಿಸಿ ಬಿಟ್ಟನಲ್ಲಾ! ಹಾಗಾದರೆ ನಮಗೆ ಸಹಾ ಸರ್ವ ಪಾಪಗಳ ವಿಮೋಚನೆಯು ಪ್ರಾಪ್ತಿ ಆದೀತೆಂಬದಕ್ಕೆ ಏನೂ ಸಂದೇಹವಿಲ್ಲ. ಹಾಗಾದರೆ ನಾವು ಮಾಡ ತಕ್ಕದ್ದೇನು? ನಮ್ಮ ಸ್ವಂತ ನೀತಿಯನ್ನೂ ಪಾಪದ ಕಡೆಗೆ ಇರುವ ಸಂತೋಷವನ್ನೂ ಅಗದಿ ಹೇಸಿ ಬಿಟ್ಟು ಬಿಟ್ಟು, ಕ್ರಿಸ್ತನ ದಿವ್ಯ ಬಲಿ ಅರ್ಪಣೆಯನ್ನೂ ಅರ್ಪಿತವಾದ ನಿಷ್ಕಳಂಕ ರಕ್ತವನ್ನೂ ವಿಶ್ವಾಸವೆಂಬ ಕಣ್ಣಿನಿಂದ ದೃಷ್ಟಿಸುವಾ. ಈ ದಿವ್ಯ ರಕ್ತದ ಮೇಲೆ ಯಾರು ವಿಶ್ವಾಸವಿಡುತ್ತಾನೋ, ಅಂಥವನ ಸಕಲ ಪಾಪಗಳು ಪೂರ್ಣವಾಗಿ ಅಳಿದು ಹೋಗಿವೆ. ಹೀಗೆ ಯೇಸು ಕ್ರಿಸ್ತನ ರಕ್ತದಿಂದ ನಿತ್ಯ ವಿಮೋಚನೆಯು ಸಾಧಿಸಿ ಆಯಿತು. ಅದು ಮಾತ್ರವಲ್ಲ,

B.) ಯೇಸು ಕ್ರಿಸ್ತನ ರಕ್ತದ ಮುಖಾಂತ್ರ ದೇವರ ಬಳಿಗೆ ನಿರ್ವಿಘ್ನವಾದ ಪ್ರವೇಶವು ಉಂಟಾಯಿತು.

ಹಳೆ ಒಡಂಬಡಿಕೆಯಲ್ಲಿ ಪ್ರಧಾನ ಯಾಜಕನ ಹೊರ್ತು ಬೇರೆ ಯಾವನಾದರೂ ಅತಿ ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸ ಕೂಡದಿತ್ತು. ಅಲ್ಲಿಗೆ ಯಾರು ಹೊಕ್ಕದ ಹಾಗೆ ಪರಿಶುದ್ಧ ಸ್ಥಳಕ್ಕೂ ಅದಕ್ಕೂ ನಡುವೆ ಒಂದು ತೆರೆ ಇತ್ತು. ಪ್ರಧಾನ ಯಾಜಕನು ಮಾತ್ರ ನೇಮಿಸಿಟ್ಟಿರುವ ಬೇರೆ ಬೇರೆ ಆಚಾರಗಳನ್ನು ಪ್ರವೃತ್ತಿಸಿ, ಅಲ್ಲಿ ಪ್ರವೇಶಿಸ ಬೇಕಾಯಿತು. ಮತ್ತ್ಯಾವನಾದರೂ ದೇವರ ಅಪ್ಪಣೆಯನ್ನು ಮೀರಿ ಅದರೊಳಗೆ ಪ್ರವೇಶಿಸಿದರೆ, ಅರಸನಾದ ಉಜಿಯನಿಗೆ ಆದ ಹಾಗೆ ಭಯಂಕರ ನಾಶನವು ಸಂಭವಿಸುವದು. (೨ ದಿನಚರ್ಯ. ೨೬, ೧೬ – ೨೧.) ಯಾಕೆ ಪಾಪಿಯಾದ ಮನುಷ್ಯನು ಸ್ವತಂತ್ರದಿಂದಲೂ ಸಂತೋಷದಿಂದಲೂ ದೇವರ ಸನ್ನಿಧಿಗೆ ಬರ ಕೂಡದು? ದೇವರು ಪರಿಶುದ್ಧನೂ ದಹಿಸುವ ಅಗ್ನಿಯೂ ಆಗಿದ್ದಾನೆ. ಆದದರಿಂದ ಪಾಪವಾಗಿರುವಂಥಾದ್ದು ಯಾವದೂ ಆತನ ಸನ್ನಿಧಿಗೆ ಹೋಗ ಕೂಡದು. ಹೋದರೆ ದಹಿಸುವ ಅಗ್ನಿಯಂತೆ ತನ್ನ ಪರಿಶುದ್ಧತ್ವ ಎಂಬ ಬೆಂಕಿಯಿಂದ ಪಾಪಿಷ್ಠನನ್ನು ಸುಟ್ಟು ಬಿಟ್ಟಾನು. ಅದಲ್ಲದೆ ಪಾಪಿಗೆನೇ ದೇವರ ಬಳಿಗೆ ಹೋಗ ಎಷ್ಟೋ ಭಯವೂ ಸಂಶಯವೂ ಉಂಟು. ಅಯ್ಯೋ! ಕಡು ಪಾಪಿಯಾದ ನಾನು ಪರಿಶುದ್ಧನಾದ ದೇವರ ಸನ್ನಿಧಿಗೆ ಹ್ಯಾಗೆ ಹೋಗಲಿ? ಹೋದರೆ ಒಂದು ವೇಳೆ ಆತನು ನನ್ನನ್ನು ದಹಿಸಿ ಬಿಟ್ಟಾನು ಎಂಬ ಭಯ ಸಂಶಯಗಳು ಮನುಷ್ಯನನ್ನು ಪೀಡಿಸುತ್ತವೆ. ಆದರೆ ಯೇಸು ಕ್ರಿಸ್ತನು ರಕ್ಷಣಾಕಾರ್ಯ ತೀರಿಸಿದಾಗ ದೇವರ ನಿಜಸಿಂಹಾಸನಕ್ಕೂ ಅಂದರೆ ಆತನ ವಾಸಸ್ಥಾನವಾಗಿರುವ ಪರಲೋಕಕ್ಕೂ ಪಾಪಿಷ್ಠರಿಗೂ ಮಧ್ಯದಲ್ಲಿ ಇರುವ ಅಡ್ಡ ತೆರೆಯು ತುದಿಯಿಂದ ಬುಡದ ವರೆಗೆ ಹರಿದು ಹೋಯಿತು. ಅದಲ್ಲದೆ ಯೇಸು ತಾನೇ ಸಕಲ ಪಾಪಿಷ್ಠರು ದೇವರ ಬಳಿಗೆ ಶೇರುವ ಹಾಗೆ ಮಾರ್ಗ ತಯಾರು ಮಾಡಿ, ತಾನೇ ಮೊದಲು ಅಗ್ರಗಾಮಿಯಾಗಿ ಪರಲೋಕಕ್ಕೆ ಅಂದರೆ ದೇವರ ಸಿಂಹಾಸನವು ಪರಿಪೂರ್ಣವಾಗಿದ್ದ ಸ್ಥ

ಳಕ್ಕೆ ಏರಿ ಹೋದನು. ಹಾಗಾದರೆ ಯೇಸು ಕ್ರಿಸ್ತನಲ್ಲಿ ನಂಬಿ ಆತನ ರಕ್ತದ ದೆಶೆಯಿಂದ ಪಾಪಪರಿಹಾರ ಹೊಂದಿದ ಒಬ್ಬೊಬ್ಬ ಪಾಪಿಯು ದೇವರ ಪರಿಶುದ್ಧ ಸಾನ್ನಿಧಿಗೆ ಹೋಗ ತೆರೆಯಿಂದ ಜೀವವೂ ಹೊಸ ಮಾರ್ಗವೂ ತೆರೆಯಲಾಯಿತು. ಇನ್ನು ಮೇಲೆ ಪಾಪಿಯು ಯೇಸು ಕ್ರಿಸ್ತನ ರಕ್ತದ ಮೂಲವಾಗಿ ದೇವರ ಕೃಪಾಸಿಂಹಾಸನದ ಬಳಿಗೆ ಧೈರ್ಯದಿಂದಲೂ ಸಂತೋಷದಿಂದಲೂ ಪುತ್ರಭಾವದಿಂದಲೂ ಪ್ರವೇಶಿಸ ಬಹುದು. ಇನ್ನು ಮುಂದೆ ತನ್ನ ಬಳಿಗೆ ಬರುವಂಥಾ ಒಬ್ಬೊಬ್ಬ ಪಾಪಿಯನ್ನು ಕರ್ತನು ತನ್ನ ಹಸ್ತ ಚಾಚಿ ಸಂತೋಷದೊಡನೆ ಅಂಗೀಕರಿಸುವನು. ಆದರೆ ಯೇಸು ಕ್ರಿಸ್ತನಲ್ಲಿ ವಿಶ್ವಾಸವನ್ನಿಡದೆ ತಮ್ಮ ಪಾಪಗಳಲ್ಲಿ ಹೊರಳಾಡುತ್ತಾ ಇರುವವರಿಗೆ ದೇವರ ಬಳಿಗೆ ಪ್ರವೇಶವು ಇಲ್ಲ. ಯೇಸು ಕ್ರಿಸ್ತನ ಮುಖಾಂತರವಲ್ಲದೆ ಎಲ್ಲರೂ ದೇವರಿಗೆ ಅನ್ಯರು. ಹೀಗಿದ್ದರೂ ಪಾಪಗಳಲ್ಲಿ ಹೊರಳುತ್ತಿರುವ ಅನೇಕರು ಪರಿಶುದ್ಧನಾದ ದೇವರ ಸನ್ನಿಧಿಗೆ ಹೋಗ ಏನೂ ಭಯ ಪಡುವದಿಲ್ಲ. ಬಹು ಧೈರ್ಯದಿಂದ ಪ್ರಾರ್ಥನೆ ಮಾಡುವದರಿಂದ ದೇವರು ನನ್ನನ್ನು ಅಂಗೀಕರಿಸ್ಯಾನು ಎಂದು ನೆನಸುತ್ತಾರೆ. ಅನೇಕರು ಯೇಸು ಕ್ರಿಸ್ತನು ನನಗಾಗಿ ಮಾರ್ಗವನ್ನು ಸಿದ್ಧ ಮಾಡಿದನಲ್ಲ? ಆತನು ಕೇವಲ ಕರುಣೆಯುಳ್ಳವನಾಗಿರುವದರಿಂದ ನನ್ನನ್ನು ಸಹಾ ನನ್ನ ಅಂತ್ಯ ದಿವಸದಲ್ಲಿ ತನ್ನೆಡೆಗೆ ಅಂಗೀಕರಿಸ್ಯಾನು ಎಂದು ನೆನಸಿ, ಬಾಳೋ ವರೆಗೆ ಈ ಲೋಕದ ಸುಖಭೋಗಗಳನ್ನು ಅನುಭೋಗಿಸಿ, ವಿಶೇಷ ಚಿಂತೆ ಇಲ್ಲದೆ ಇದ್ದಾರೆ. ಇಂಥವರಿಗೆ ಇನ್ನೂ ತೆರೆಯು ಮುಚ್ಚಿ ಇರುತ್ತದೆ. ಇಂಥವರು ದೇವರ ಸನ್ನಿಧಿಗೆ ಹೋದರೆ, ದೇವರು ಅವರನ್ನು ದಹಿಸಿ ಬಿಡುವನು. ಅದಲ್ಲದೆ ಯೇಸು ಕ್ರಿಸ್ತನಿಂದ ಕೃಪಾಸಿಂಹಾಸನದ ಬಳಿಗೆ ಹೋಗ ಮಾರ್ಗ ಸಿದ್ಧವಾಗಿದ್ದರೂ, ಇನ್ನು ಅನೇಕರು ಸಂಶಯ ಭಯದೊಡನೆ ಇದ್ದಾರೆ. ಪ್ರಿಯ ಸಹೋದರರೇ, ನಾವು ಇನ್ನೂ ಪಾಪಗಳಲ್ಲಿ ಹೊರಳಾಡುತ್ತಾ ಇರುವವರಾಗಿದ್ದರೆ, ನಾವು ಯಾವ ಉಪಾಯದಿಂದಲಾದರೂ ದೇವರ ಬಳಿಗೆ ಹೋಗ ಕೂಡದು. ನಾವು ದೇವರಿಗೆ ಅನ್ಯರು ಆಗಿರುವೆವು, ಅಥವಾ ನಾವು ಇನ್ನೂ ಲಘು ಮನಸ್ಸಿನಿಂದ ಲೋಕದ ಭೋಗಗಳನ್ನು ಅನುಭವಿಸುತ್ತಾ, ದೇವರು ನನ್ನನ್ನು ಅಂತ್ಯ ಸಮಯದಲ್ಲಿ ತನ್ನ ರಾಜ್ಯಕ್ಕೆ ವೈದಾನು ಎಂದು ಯೋಚಿಸುತ್ತಾ ನಿಶ್ಚಿಂತರಾಗಿ ದೇವರ ಬಳಿಗೆ ಹೋದರೆ, ಆತನು ನಮ್ಮನ್ನು ತನ್ನ ಸನ್ನಿಧಿಯಿಂದ ಓಡಿಸಿ ಬಿಡುವನು. ಅಥವಾ ಇನ್ನೂ ನಮ್ಮಲ್ಲಿ ಭಯ ಸಂಶಯಗಳು ಇದ್ದರೆ, ನಮ್ಮ ಸ್ಥಿತಿ ಮಹಾ ಅರಿಷ್ಟದ್ದು ಎಂದು ಹೇಳ ಬೇಕು. ಪ್ರಿಯರೇ, ಇನ್ನು ದೇವರ ಬಳಿಗೆ ಹೋಗಲಿಕ್ಕೆ ಭಯವೂ ಸಂಶಯವೂ ಯಾಕೆ? ಜೀವಮಾರ್ಗವಾದ ಕ್ರಿಸ್ತನು ತಾನೇ ನಮಗಾಗಿ ಮಾರ್ಗವನ್ನು ತೆರೆದಿದ್ದಾನಲ್ಲ; ಹಾಗಾದರೆ ಭಯ ಸಂಶಯಗಳನ್ನು ತೊರೆದು, ಯೇಸು ಕ್ರಿಸ್ತನು ನನಗಾಗಿ ಸಹಾ ದಿವ್ಯ ಕೃಪಾಸನದ ಮಾರ್ಗವನ್ನು ಸಿದ್ಧ ಮಾಡಿದ್ದಾನೆ ಎಂಬದನ್ನು ದೃಢವಾಗಿಯೂ ಕಾಂಕ್ಷಿತರಾಗಿಯೂ ನಂಬುವಾ. ಆಗ ನಮ್ಮ ಪರಮ ತಂದೆಯು ಸಂತೋಷದೊಡನೆ ನಮ್ಮನ್ನು ಅಂಗೀಕರಿಸುತ್ತಾನೆ.

C.) ದೇವರ ಸಂಗಡ ಅನ್ಯೋನ್ಯ ಸಮಾಧಾನವು ಆಯಿತು.

ಹಳೆ ಒಡಂಬಡಿಕೆಯ ಬಲಿಗಳಿಂದ ಒಂದು ವಿಧವಾಗಿ ದೇವರ ಸಂಗಡ ಸಮಾಧಾನವಾ

ಯಿತು. ಹ್ಯಾಗಂದರೆ, ಇಸ್ರಯೇಲ್ಯರು ದೇವರ ಆಜ್ಞಾಧಾರಕರಾಗಿ ಬಲಿಯನ್ನರ್ಪಿಸುವದರಿಂದಲೂ, ದೇವರು ಪಾಪವನ್ನು ಹಗೆ ಮಾಡುವಾತನು, ಆದರೆ ಈ ಗೂಳಿ ಹೋತುಗಳ ರಕ್ತವನ್ನರ್ಪಿಸುವದರಿಂದ ನಮ್ಮ ಮೇಲೆ ಆತನಿಗಿದ್ದ ಶತ್ರುತ್ವವು ಹೋಯಿತು ಎಂಬ ಅನುಭವವಾದದರಿಂದಲೂ ದೇವರ ಸಂಗಡ ಒಂದು ತರದ ಸಮಾಧಾನವಾಯಿತು. ಆದರೆ ಆ ಸಮಾಧಾನವು ಅಸಂಪೂರ್ಣವಾದದ್ದೂ ಅಸ್ಥಿರವಾದದ್ದೂ ಆಗಿರುವದರಿಂದ ದೇವರನ್ನು ಇಂಥಾ ಬಲಿಯರ್ಪಣೆಗಳಿಂದ ಮೆಚ್ಚಿಸ ಕೂಡದು; ಯಾಕಂದರೆ ಪಾಪವು ಇನ್ನೂ ಮನುಷ್ಯನೊಳಗೆ ಬಲವಾಗಿ ಆಳುವದರಿಂದ ಮನುಷ್ಯನು ದೇವರ ವೈರಿಯಾಗಿರುತ್ತಾನೆ. ಮನುಷ್ಯನು ಪಾಪದ ಬಂಧನದಿಂದ ಬಿಡಿಸಿ ಕೊಳ್ಳುವ ಹಾಗೆ ಎಷ್ಟು ಪ್ರಯತ್ನ ಮಾಡಿದರೂ, ಅವನು ಪಾಪಕ್ಕೆ ಶೆರೆ ಬಿದ್ದದರಿಂದ ದೇವರ ಶತ್ರುವೇ. ಒಂದು ವೇಳೆ ಇಸ್ರಯೇಲ್ಯರ ಹಾಗೆ ಸ್ವಲ್ಪ ಸಮಾಧಾನವಾದರೂ ಮನಸ್ಸಿನಲ್ಲಿ ಇನ್ನೂ ಕರಕರೆಯೂ ಅಸಮಾಧಾನವೂ ಯಥೇಷ್ಟ ತುಂಬಿಯದೆ. ಅಂಥವನು, ನಾನು ನನ್ನ ಪಾಪಗಳಿಂದ ದೇವರ ಕೋಪವನ್ನೆಬ್ಬಿಸಿ ಆತನ ಶತ್ರುವಾದೆನು; ನನ್ನಲ್ಲಿ ನೀತಿ ಏನೂ ಇಲ್ಲ, ನಾನು ದೇವರ ಶತ್ರುವಾಗಿರುವದರಿಂದ ನಾಶನಕ್ಕೆ ಪಾತ್ರನು ಎಂದು ಹ್ಯಾಗೂ ತಿಳಿಯ ಬೇಕು. ತನ್ನ ಪಾಪಗಳು ಅತಿ ಕೆಟ್ಟವುಗಳೆಂದು ತಿಳಿಯುವ ಒಬ್ಬನಲ್ಲಿ ಇಂಥಾ ಅನುಭವವಾಗುವದು ಬಹಳ ಒಳ್ಳೇದೇ ಸರಿ. ಆದರೆ ತನ್ನ ಪಾಪಗಳನ್ನು ತಿಳು ಕೊಂಡು ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುವವನಿಗೆ ಆತನ ರಕ್ತದ ಮುಖಾಂತ್ರ ಸಂಪೂರ್ಣವಾದ ಚಂಚಲವಿಲ್ಲದ, ಎಲ್ಲಾ ಬುದ್ಧಿಯನ್ನು ಮಿಾರುವ ಸಮಾಧಾನ ಶಿಕ್ಕುತ್ತದೆ. ಇನ್ನು ಅವನು ದೇವರ ಶತ್ರುವಲ್ಲ, ಆತನ ಮಿತ್ರನೇ. ಇನ್ನು ಮೇಲೆ ಕರಕರೆ ಅಸಮಾಧಾನ ಪಡ ಕಾರಣವಿಲ್ಲ, ದೇವರು ತಾನೇ ಅವನ ಹೃದಯದಲ್ಲಿ ತನ್ನ ಸ್ಥಾನ ಸ್ಥಾಪಿಸುತ್ತಾನೆ. ಇನ್ನು ಮುಂಚಿನಂತೆ ಲೋಕದ ಅನ್ಯೋನ್ಯದಲ್ಲಿಯೂ ಪಿಶಾಚನ ಅನ್ಯೋನ್ಯದಲ್ಲಿಯೂ ಸ್ವಂತ ಮಾಂಸೇಚ್ಛೆಗಳ ಅನ್ಯೋನ್ಯದಲ್ಲಿಯೂ ಇರಲಾರನು. ಆದರೆ ದೇವರ ಜೀವವನ್ನೂ ಆತನ ಅನ್ಯೋನ್ಯವನ್ನೂ ಅನುಭವಿಸುತ್ತಾ ಇರುತ್ತಾನೆ. ಹಾಗಾದರೆ ಪ್ರಿಯರೇ, ತಾನು ದೇವರ ಶತ್ರುವೆಂದು ತಿಳಿಯದೆ, ದೇವರ ಸಂಗಡ ಸುಳ್ಳು ಸಮಾಧಾನ ಮಾಡುವದು ಆದೀತೋ? ಅಥವಾ ದೇವರ ಸಂಗಡ ತತ್ಕಾಲಕ್ಕೆ ಸಮಾಧಾನವಾಗುವ ಹಾಗೆ ಹ್ಯಾಗೂ ದೇವರನ್ನು ಮೆಚ್ಚಿಸುವದಕ್ಕೆ ಕೆಲಸಕ್ಕೆ ಬಾರದ ಉಪಾಯಗಳನ್ನು ಪ್ರಯೋಗಿಸುವದು ಆದೀತೇ? ಸ್ವಲ್ಪ ಸಮಯಕ್ಕೆ ಮಾತ್ರ ಹೃದಯದಲ್ಲಿ ಸಮಾಧಾನ ಶಿಕ್ಕಿದರೆ ಸಾಕೋ? ಪ್ರಿಯ ಸಹೋದರರೇ, ನಮಗೆ ಎಂಥಾ ಸಮಾಧಾನವು ಬೇಕು? ತಾತ್ಕಾಲಿಕ ಸಮಾಧಾನವು ಇದ್ದರೆ ಸಾಕೋ? ಅಥವಾ ನಿರಂತರ ಸಮಾಧಾನ ಬೇಕೋ? ಈಗ ನಮ್ಮ ಸ್ಥಿತಿ ಹ್ಯಾಗಿರುತ್ತದೆ? ನಮ್ಮಲ್ಲಿ ಯಾವನೊಬ್ಬನಾದರೂ, ನನಗೆ ನಿರಂತರ ದಿವ್ಯ ಸಮಾಧಾನ ಬೇಡ ಎಂದು ತ್ಯಜಿಸನು. ಆದರೆ ಶಿಕ್ಕಿದರೆ ಆದೀತು ಎಂಬೀ ತರದ ಮನಸ್ಸು ಅನೇಕರಲ್ಲಿ ಉಂಟು. ಅಂಥವರು ಈ ವರೆಗೆ ದೇವರ ಸಮಾಧಾನವನ್ನು ಹೊಂದದೆ, ಇನ್ನೂ ದೇವರ ಶತ್ರುಗಳಾಗಿದ್ದಾರೆ. ಆದರೆ ದೇವರ ಸಂಗಡ ನಮ್ಮನ್ನು ಅನ್ಯೋನ್ಯ ಮಾಡುವ ಆತನ ರಕ್ತವನ್ನು ಧ್ಯಾನಿಸಿ, ನಂಬಿ, ಪಾಪಗಳನ್ನು ತಿಳಿದು, ದೇವರ ಸಂಗಡ ನ

ನಗೂ ನಿರಂತರ ಸಮಾಧಾನ ಇರ ಬೇಕೆಂಬುವ ಹಾಗೆ, ಪೂರ್ಣ ಮನಸ್ಸಿನಿಂದ ಆತನ ಹತ್ತಿರ ಬೇಡಿದರೆ, ಸಂಶಯವಿಲ್ಲದೆ ಆತನು ಅದನ್ನು ಈಡೇರಿಸುವನು.

D.) ಜೀವವುಳ್ಳ ದೇವರ ಆರಾಧನೆಯು.

ಹಳೆ ಒಡಂಬಡಿಕೆಯಲ್ಲಿ ಇಸ್ರಯೇಲ್ ಜನಾಂಗದಲ್ಲಿ ಮಾತ್ರ ನಿಜ ದೇವಾರಾಧನೆಯು ನಡಿಯಿತು. ಮತ್ತಾವ್ಯವ ಜನಾಂಗಕ್ಕಾದರೂ ಇಷ್ಟು ವಿಶೇಷ ಆರಾಧನೆ ಇರಲಿಲ್ಲ. ಅವರು ದೇವರಿಗೆ ಬಲಿಗಳನ್ನೂ ಕಾಣಿಕೆಗಳನ್ನೂ ಅರ್ಪಿಸಿದರು, ಸ್ತುತಿಸ್ತೋತ್ರಗಳೊಡನೆ ಆತನನ್ನು ಕೊಂಡಾಡಿದರು, ಪ್ರಾರ್ಥನೆವಿಜ್ಞಾಪನೆಗಳನ್ನು ಸಲ್ಲಿಸಿದರು. ಹೀಗೆ ದೇವಾರಾಧನೆಯು ಬಹು ಛಂದವಾಗಿ ಅವರಲ್ಲಿ ನಡಿಯಿತು. ಆದರೆ ಮನಸ್ಸಾಕ್ಷಿಯೂ ಹೃದಯವೂ ಪೂರ್ಣ ಶುದ್ಧವಲ್ಲದ್ದರಿಂದ, ಪೂರ್ಣ ಸಂತೋಷದಿಂದಲೂ ಪೂರ್ಣ ಶಕ್ತಿಯಿಂದಲೂ ದೇವರನ್ನು ಸೇವಿಸಲಿಕ್ಕೆ ನ್ಯಾಯಪ್ರಮಾಣದಿಂದಲಾದರೂ ಅವರು ಅರ್ಪಿಸಿದ ಬಲಿಗಳಿಂದಾದರೂ ಶಕ್ತಿ ಬರಲಿಲ್ಲ. ಅದಕ್ಕೆ ಬದಲಾಗಿ ಭಯದಿಂದ, ಅದು ನಮ್ಮ ಮೇಲೆ ಬಿದ್ದ ಹಂಗು ಎಂತ ನೆನಸಿ, ದೇವರನ್ನು ಆರಾಧಿಸಿದರು. ಯೇಸು ಕ್ರಿಸ್ತನ ರಕ್ತದ ಮೂಲಕವಾಗಿ ಪಾಪಪರಿಹಾರ ಹೊಂದಿ ದಿವ್ಯ ಸಮಾಧಾನವನ್ನನುಭವಿಸಿದವನೋ? ದೇವರು ಅವನೊಳಗೆ ಇಟ್ಟ ಪರಿಶುದ್ಧಾತ್ಮದ ಮುಖಾಂತ್ರ ಆತನನ್ನು ಭಯಸ್ಥನಾಗಿರದೆ ಸಂತೋಷದಿಂದಲೂ ಸಂಶಯವು ಇಲ್ಲದೆ ದೃಢದಿಂದಲೂ ಸತ್ಯದಿಂದಲೂ ಅಶಕ್ತನಾಗಿರದೆ ಪೂರ್ಣ ಶಕ್ತಿಯಿಂದಲೂ ತನ್ನ ಶರೀರಾತ್ಮಗಳನ್ನು ದೇವರಿಗೆ ಬಲಿಯಾಗಿ ಅರ್ಪಿಸಿ, ಆತನ ಸೇವೆ ಮಾಡಿ ಆರಾಧಿಸ ಶಕ್ತಿ ಹೊಂದುತ್ತಾನೆ. ಇಂಥವನು ಇನ್ನು ಮುಂದೆ ಜೀವವುಳ್ಳ ದೇವರನ್ನು ತನ್ನೊಳಗೆ ದಿವ್ಯ ಜೀವ ಉಳ್ಳವನಾಗಿ ಆರಾಧಿಸುತ್ತಾನೆ. ಇಂಥವನಲ್ಲಿ ದೇವರ ಪ್ರೀತಿಯೂ ದೇವರ ಮೇಲೆ ನಂಬಿಕೆಯೂ ಸತ್ಯದ ವಿಧೇಯತ್ವವೂ ಸ್ತೋತ್ರದ ಆಸಕ್ತಿಯೂ ಪ್ರಾರ್ಥನೆಯ ಜಾಗ್ರತೆಯೂ ಮಿಗಿಲಾಗಿ ಮೆರೆಯುತ್ತದೆ. ಇಂಥವನು ದೇವರ ಸೇವೆಯು ನಮ್ಮ ಇಡೀ ಜೀವದ ಕೆಲಸವೆಂದು ತಿಳ ಕೊಂಡು, ಸಂತೋಷದಿಂದ ದೇವರ ಸೇವೆಯೇ ಪರಮ ಸುಖವೆಂದು ಒಪ್ಪಿ, ಆ ಪ್ರಕಾರ ಮಾಡುತ್ತಾನೆ. ಹಾಗಾದರೆ ನಾವು ಇನ್ನೂ ಅರ್ಧವಾಗಿ ಲೋಕವನ್ನೂ ಅರ್ಧವಾಗಿ ದೇವರನ್ನೂ ಸೇವಿಸಿದರೆ, ನಾವು ದೇವರ ಸೇವೆಯನ್ನು ಮಾಡುವವರಲ್ಲ, ಅಥವಾ ಪಾಪವನ್ನೂ ಸೈತಾನನನ್ನೂ ಸೇವಿಸಿ ಬಹಿರಂಗವಾಗಿ ಮಾತ್ರ ದೇವರ ಸೇವೆಯಲ್ಲಿ ಆಸಕ್ತಿ ತೋರಿಸಿದರೆ, ಆ ಸೇವೆಯು ವ್ಯರ್ಥ ಸೇವೆಯೇ. ಪ್ರಿಯ ಸಹೋದರರೇ, ಕ್ರೈಸ್ತರಾದ ನಾವು ಅನ್ಯ ಜನರಂತೆ ದೇವರಿಲ್ಲದವರಲ್ಲ. ನಮಗೆ ಜೀವವುಳ್ಳ ಎಂದೆಂದಿಗೂ ಬದುಕುವಂಥಾ ದೇವರು ಇದ್ದಾನೆ. ನಾವು ನಿಜವಾಗಿಯೂ ಸರಿಯಾದ ಭಕ್ತಿಯಿಂದಲೂ ಆತನನ್ನು ಸೇವಿಸಿದೆವೋ ಏನು? ಅನೇಕ ಸಾರಿ ಪಾಪವನ್ನೂ ಲೋಕವನ್ನೂ ಸೈತಾನನನ್ನೂ ಸೇವಿಸಿದವರಲ್ಲವೋ? ಇದೇ ಸ್ಥಿತಿಯು ಇನ್ನೂ ನಮ್ಮಲ್ಲಿ ನೆಲೆಯಾಗಿದ್ದರೆ, ನಮ್ಮ ಸ್ಥಿತಿಯು ಮಹಾ ಅರಿಷ್ಟ ಸ್ಥಿತಿಯು! ನಾವು ದೇವರ ಸರಿಯಾದ ಭಕ್ತರಾಗದಿದ್ದರೆ, ನಾವು ದೇವರ ಜನರಲ್ಲ. ಹಾಗಾದರೆ ಈ ವರೆಗೂ ದೇವರ ನಿಜ ಭಕ್ತರಲ್ಲದವರು ಆತನು ಆದು ಕೊಂಡ ಜನಾಂಗವೂ ಸತ್ಯಭಕ್ತರೂ ಆಗುವ ಹಾಗೂ, ಪೂರ್ಣ ಶಕ್ತಿಯಿಂದ ದೇವ

ರನ್ನು ಸೇವಿಸ ಶಕ್ತರಾಗುವ ಹಾಗೂ, ಜೀವವುಳ್ಳ ದೇವರನ್ನು ಆರಾಧಿಸುವದಕ್ಕಾಗಿ ನಮ್ಮ ಮನಸ್ಸಾಕ್ಷಿಯನ್ನು ಶುಚಿ ಮಾಡುವಂಥಾ ಕ್ರಿಸ್ತನ ಜೀವವುಳ್ಳ ರಕ್ತವು ತಮ್ಮೊಳಗಿನ ಎಲ್ಲಾ ಅಶುದ್ಧತ್ವಗಳನ್ನು ಕಿತ್ತು ಹಾಕಿ, ದೇವರು ತನ್ನ ಪರಿಶುದ್ಧಾತ್ಮನಿಂದ ತಮ್ಮನ್ನು ತುಂಬುವನು ಎಂಬ ಮಾತನ್ನು ಹೃದಯದಲ್ಲಿ ಘಟ್ಟಿ ಹಿಡುಕೊಂಡು, ಇದಕ್ಕಾಗಿ ಮನಃಪೂರ್ವಕವಾಗಿ ಆತನನ್ನು ಬೇಡಲಿ. ಪ್ರಿಯ ಸಹೋದರರೇ, ಈಗ ನಾನು ಕ್ರಿಸ್ತನ ಅತ್ಯಂತ ಮಹಿಮೆಯುಳ್ಳ ಪ್ರಧಾನ ಯಾಜಕೋದ್ಯೋಗವನ್ನೂ ಇದರಿಂದ ಬಂದಂಥಾ ಅತಿ ಮಹಿಮೆಯುಳ್ಳ ಫಲಗಳನ್ನೂ ನಿಮ್ಮ ಕಣ್ಣುಗಳ ಮುಂದೆ ಇಟ್ಟದ್ಧೇನೆ. ನೋಡಿರಿ! ಎಂಥಾ ಮಹಿಮೆಯುಳ್ಳ ನಮ್ಮ ಬುದ್ಧಿಗೆ ಅಗೋಚರವಾದಂಥಾ ಫಲಗಳು ಯೇಸು ಕ್ರಿಸ್ತನ ಪ್ರಧಾನ ಯಾಜಕತ್ವದಿಂದ ಬಂದವು! ನಮ್ಮನ್ನು ನಾವು ಪರೀಕ್ಷಿಸಿ ಕೊಂಡರೆ, ನಮ್ಮ ಸ್ವಂತ ಕ್ರಿಯೆಗಳಿಂದ ಎಷ್ಟು ಪ್ರಯತ್ನ ಮಾಡಿದರೂ ಇಂಥಾ ಮಹಿಮೆಯುಳ್ಳ ಫಲಗಳನ್ನು ಎಂದಿಗೂ ದೊರಕಿಸಿ ಕೊಳ್ಳ ಕೂಡದು. ಯಾಕಂದರೆ ನಮ್ಮ ನೀತಿ ಮೈಲಿಗೆಯಾದ ವಸ್ತ್ರದ ಹಾಗೆ ಇರುತ್ತದೆ. ನಾವು ನಮ್ಮಷ್ಟಕ್ಕೆ ಏನು ಮಾಡಿದರೂ ನಿಷ್ಪ್ರಯೋಜಕ ದಾಸರೇ. ಹಾಗಾದರೆ ನಾವು ರಕ್ಷಣೆಯನ್ನು ಪಡ ಕೊಂಡು, ಕೆಟ್ಟ ಮನಸ್ಸಾಕ್ಷಿಯನ್ನು ಕಳ ಕೊಂಡು, ದೇವರ ಮಕ್ಕಳಾಗಿ, ಆತನ ಸಮಾಧಾನವನ್ನು ಹೊಂದಿ, ನಮ್ಮ ಸ್ವಂತ ಸ್ವಾರ್ಥವನ್ನು ತಿರಸ್ಕರಿಸಿ, ದೇವರ ನಿಜಭಕ್ತರಾಗಿ, ಲೋಕದಿಂದ ದೇವರಿಗೂ ಕತ್ತಲೆಯಿಂದ ಬೆಳಕಿಗೂ ಮರಣದಿಂದ ಜೀವಕ್ಕೂ ತಿರಿಗಿ ಕೊಂಡವರಾಗುವ ಹಾಗೆ, ಯೇಸು ಕ್ರಿಸ್ತನು ಪ್ರಧಾನ ಯಾಜಕನಾಗಿ ತನ್ನ ಅಮೂಲ್ಯ ರಕ್ತವನ್ನು ಚೆಲ್ಲಿ ಸಂಪೂರ್ಣ ವಿಮೋಚನೆಯ ಬಲಿಯನ್ನರ್ಪಿಸುವದರ ಹೊರ್ತು, ಬೇರೆ ಯಾವ ಉಪಾಯವನ್ನಾದರೂ ಯಾವ ಆಧಾರವನ್ನಾದರೂ ಕಾಣೆವು. ನಮ್ಮ ರಕ್ಷಣೆಯ ಆಧಾರವು ಯೇಸು ಕ್ರಿಸ್ತನ ಪ್ರಧಾನ ಯಾಜಕತ್ವವೇ. ಮತ್ತು ಯೇಸು ಕ್ರಿಸ್ತನ ಪ್ರಧಾನ ಯಾಜಕತ್ವದಿಂದ ಬಂದಂಥಾ ಮಹಿಮೆಯ ಫಲಗಳನ್ನು ನಾವು ನಮ್ಮ ಹೃದಯದಲ್ಲಿ ಅನುಭವಿಸಿ ಅದು ಮತ್ತೊಬ್ಬರ ಮುಂದೆ ಪ್ರಕಾಶಿಸುವದರ ಹೊರ್ತು, ಸತ್ ಕ್ರೈಸ್ತರೆಂಬ ಹೆಸರಿಗೆ ಏನೇನೂ ತಕ್ಕವರಲ್ಲ. ಪ್ರಿಯ ಸಹೋದರರೇ, ಕ್ರೈಸ್ತರಾದ ನಾವೆಲ್ಲರು ಕ್ರಿಸ್ತನ ರಕ್ಷಣಾಕಾರ್ಯವನ್ನು ಮತ್ತೊಬ್ಬರಿಗೆ ಸಾರ ತಕ್ಕಂಥವರು, ಆತನ ಪ್ರಧಾನ ಯಾಜಕತ್ವದಿಂದ ಬಂದಂಥಾ ಫಲಗಳನ್ನು ತೋರಿಸ ತಕ್ಕಂಥವರು ಆದರೆ, ನಮ್ಮೊಳಗೆಯೇ ಯೇಸು ಕ್ರಿಸ್ತನ ಪ್ರಧಾನ ಯಾಜಕತ್ವದ ಮಹಿಮೆಯು ಬೆಳಗದಿದ್ದರೆ, ಈ ಮಹಿಮೆಯನ್ನು ಹ್ಯಾಗೆ ಮತ್ತೊಬ್ಬರಿಗೆ ತೋರಿಸ ಶಕ್ತರಾದೇವು. ಆದದರಿಂದ ಎಲ್ಲದಕ್ಕಿಂತ ಮೊದಲಾಗಿ ನಮ್ಮನ್ನು ನಾವೇ ನೋಡಿ ಕೊಳ್ಳುವಾ. ಯಾರು ಈ ವರೆಗೆ ಪಾಪಗಳ ವಿಮೋಚನೆ ಹೊಂದಲಿಲ್ಲವೋ, ಅವನು ನನಗಾಗಿ ಸಹಾ ಕ್ರಿಸ್ತನು ತನ್ನ ರಕ್ತವನ್ನು ಚೆಲ್ಲಿ ನಿತ್ಯ ವಿಮೋಚನೆಯನ್ನು ಸಂಪಾದಿಸಿದ್ದಾನೆ ಎಂಬದನ್ನು ಮನಃಪೂರ್ವಕವಾಗಿ ನಂಬಿ, ತನ್ನ ದೃಷ್ಟಿಯನ್ನು ಕ್ರಿಸ್ತನ ಕ್ರೂಜೆಯ ಕಡೆಗೆ ಎತ್ತಲಿ. ಯಾರಿಗೆ ಈ ವರೆಗೆ ದೇವರ ಬಳಿಗೆ ಪ್ರವೇಶ ಇರಲಿಲ್ಲವೋ, ಅವನು, ಕ್ರಿಸ್ತನು ತನ್ನ ರಕ್ತದಿಂದ ಸಿದ್ಧ ಮಾಡಿದ ಮಾರ್ಗದಲ್ಲಿ ನಡಿಯುವ ಹಾಗೆ, ತನ್ನ ಕೆಟ್ಟ ಮಾರ್ಗವನ್ನು ಬಿಟ್ಟು ತಿರುಗಲಿ. ಈ ವರೆಗೆ ದಿವ್ಯ ಸಮಾಧಾನ ಹೊಂದದವನು

ತನ್ನೊಳಗಿರುವ ಸುಳ್ಳು ಸಮಾಧಾನವನ್ನೂ ಅಸಮಾಧಾನವನ್ನೂ ಬಿಟ್ಟು, ಇನ್ನು ದೇವರು, ಯೇಸು ಕ್ರಿಸ್ತನ ರಕ್ತದ ಮುಖಾಂತ್ರ, ನನ್ನ ಮಿತ್ರನು ಎಂಬ ಮಾತನ್ನು ಘಟ್ಟಿಯಾಗಿ ಹಿಡು ಕೊಳ್ಳಲಿ. ಈ ವರೆಗೆ ದೇವರ ನಿಜಭಕ್ತನಲ್ಲದವನು ತನ್ನ ಅಶಕ್ತಿ ತಿಳ ಕೊಂಡು, ಲೋಕದ, ಸೈತಾನನ, ಸ್ವಂತ ಮಾಂಸೇಚ್ಛೆಗಳ ಸೇವೆಯನ್ನು ಬಿಟ್ಟು ಹಿಂದಿರುಗಿ, ತನ್ನನ್ನು ಜೀವವುಳ್ಳ ದೇವಾರಾಧನೆಗಾಗಿ ಶುದ್ಧ ಮಾಡುವ ಕ್ರಿಸ್ತನ ಕಳಂಕವಿಲ್ಲದ ರಕ್ತದ ಶಕ್ತಿಯನ್ನು ಧ್ಯಾನಿಸಿ, ಪರಿಶುದ್ಧಾತ್ಮನನ್ನು ದೇವರಿಂದ ಬೇಡಲಿ. ಆಗ ಕರುಣೆಯುಳ್ಳ ಕರ್ತನು ಸಂಶಯವಿಲ್ಲದೆ ತನ್ನ ದಿವ್ಯ ಪ್ರಧಾನ ಯಾಜಕತ್ವದಿಂದ ಬಂದ ಎಲ್ಲಾ ಫಲಗಳನ್ನು ಉಚಿತವಾಗಿ ಕೊಡುವನು. ಆದದರಿಂದ ಈ ವರೆಗೆ ರಕ್ಷಣೆ ಪಡಿಯದವನು ಈ ಮಾತನ್ನು ಕೇಳುವಾಗಲೇ ಧ್ಯಾನಿಸಿ, ತನ್ನ ಪಾಪಗಳನ್ನು ತಿಳ ಕೊಂಡು, ಕ್ರೂಜಿತನಾದ ಯೇಸುವಿನ ಬಳಿಗೆ ಬರಲಿ. ಆತನು ಕಡು ಪಾಪಿಯನ್ನಾದರೂ ರಕ್ಷಿಸ ಬಲ್ಲನು. ಯಾರು ತನಗೆ ಈ ದಿವ್ಯ ಫಲಗಳು ಶಿಕ್ಕ ಬೇಕೆಂದು ಆಶಾಭರಿತನಾಗಿದ್ದಾನೋ, ಯಾರು ಈ ದಿವ್ಯ ಪ್ರಧಾನ ಯಾಜಕನ ಮೇಲೆ ಪೂರ್ಣ ನಂಬಿಕೆಯನ್ನಿಡುತ್ತಾನೋ, ಆತನು ಇಹದಲ್ಲಿಯಾದರೂ ಪರದಲ್ಲಿಯಾದರೂ ದೇವರ ಮಗುವೂ ಆತನ ನಿಜ ಸೇವಕನೂ ಆತನ ಮಿತ್ರನೂ ಆಗಿದ್ದಾನೆ. ಇಂಥಾ ಸಂತೋಷಭರಿತವಾದ ಫಲಗಳು ಸರ್ವರಿಗೆ ಶಿಕ್ಕುವ ಹಾಗೆ ಕರ್ತನು ಸಹಾಯ ಮಾಡಲಿ. ಆಮೆನ್.

ತಲಚೇರಿಯ ಸಭಾಪಾಲನೆಯನ್ನೂ ಅನಾಥಶಾಲೆಯ ಮೇಲ್ವಿಚಾರಣೆಯನ್ನೂ ಮಾಡುತ್ತಿರುವ ಕ್ರಿಸ್ತಿಯನ್ ಮಿಲ್ಲರ್ ಧೊರೆಗಳವರ ಸಾನಿ ಅಗೊಸ್ತು ೮ರಲ್ಲು ರಾತ್ರಿ ೮ತ್ರಿಘಂಟೆಗೆ ತನ್ನ ಕರ್ತನ ವಿಶ್ರಾಂತಿಗೆ ಶೇರಿದರು.

ಅವರು ಜೀವದಿಂದಿರುವಾಗ ಮಾಡಿದ ಕೆಲವು ಮನೋಹರವಾದ ಸಂಗತಿಗಳನ್ನು ಸಭಾಪತ್ರಕ್ಕೆ ಕಳುಹಿಸಿ ಎಲ್ಲರಿಗೆ ತಿಳಿಸುವರೆ ಉಚಿತವೆಂದು ತೋರುತ್ತದೆ. ಅವರು ಶುಮಾರು ೮ ವರುಷ ಕೆಳಗೆ ಈ ದೇಶಕ್ಕೆ ಬಂದು ಸ್ವಲ್ಪ ಕಾಲ ಕಣ್ಣನೂರಿನಲ್ಲಿರುವ ಅನಾಥಶಾಲೆಯ ಹುಡುಗಿಯರ ಮೇಲ್ವಿಚಾರಣೆಯನ್ನು ಮಾಡುತ್ತಾ ಇದ್ದು, ಕಾಲ ಸವೆಯುತ್ತಾ ಅಲ್ಲಿಂದ ತಲಚೇರಿಗೆ ಹೋಗಿ, ಮುಖ್ಯವಾಗಿ ಹುಡುಗರ ಅನಾಥಶಾಲೆಯ ಮೇಲ್ವಿಚಾರಣೆಯಲ್ಲಿದ್ದರು. ಅಲ್ಲಿ ಅವರು ತನ್ನ ವಿಚಾರಣೆಯಲ್ಲಿದ್ದ ಹುಡುಗರಿಗೆ ಪೂರ್ಣ ತಾಯಿಯಂತಿದ್ದು ಅವರಿಗಾಗಿ ಪ್ರತಿ ಸಂಗತಿಗಳನ್ನು ತಾನೇ ಮಾಡುತ್ತಿದ್ದರು. ಹ್ಯಾಗಂದರೆ:

ಮುಂಜಾನೆ ಎದ್ದು ಹುಡುಗರೆಲ್ಲರು ಕ್ಷೇಮವಾಗಿದ್ದಾರೋ ಏನೋ ಎಂದು ನೋಡಿ, ಕೋಣೆಗಳನ್ನೆಲ್ಲಾ ಸಾಫ್ ಮಾಡಿಸಿ, ಚಿಕ್ಕವರು ಮೊದಲ್ಗೊಂಡು ದೊಡ್ಡವರ ವರಿಗೆ ಎಲ್ಲರು ಕೈಕಾಲುಗಳನ್ನು ತೊಳದು ತಮ್ಮನ್ನು ಪಾಠಕ್ಕಾಗಿ ಸಿದ್ಧ ಮಾಡಿ ಕೊಳ್ಳುವ ಹಾಗೆ ಒಬ್ಬೊಬ್ಬರನ್ನು ಎಚ್ಚರಿಸುತ್ತಾ, ಬಹು ಚಿಕ್ಕವರನ್ನು ದೊಡ್ಡವರ ಪರಾಂಬರಿಕೆಗೆ ಒಪ್ಪಿಸಿ ಅವರಿಗೆ ಬೇಕಾದ ಸಹಾಯಗಳನ್ನು ಮಾಡುವ ಹಾಗೆ ಹೇಳುತ್ತಾ, ಎಲ್ಲವನ್ನು ಕ್ರಮ ಪಡಿಸಿ

ಮನೆಗೆ ಹೋಗುವರು. ೭ ಘಂಟೆಗೆ ಭೋಜನ ಸಮಯದಲ್ಲಿ ಇನ್ನೊಮ್ಮೆ ಬಂದು, ಎಲ್ಲಾ ನ್ಯಾಯವಾಗಿಯೂ ಕ್ರಮವಾಗಿಯೂ ನಡಿಯುತ್ತದೋ ಏನೋ ಎಂದು ತಾನೇ ಇದ್ದು ನೋಡುವರು. ತರುವಾಯ ಪಾಠದ ಸಮಯದಲ್ಲಿ ತಾನು ಸಹ ಒಂದು ವರ್ಗದವರಿಗೆ ಪಾಠ ಕೊಡುತ್ತಾ ಇರುವರಲ್ಲದೆ, ಬೇರೆ ಉಪಾಧ್ಯಾಯರು ಪಾಠ ಕೊಡುವಲ್ಲಿ ಇದ್ದು ಅವರು ಹೆಚ್ಚಾಗಿ ಬೆತ್ತದಿಂದ ಹುಡುಗರನ್ನು ಶಿಕ್ಷಿತರಾಗ ಮಾಡುವದನ್ನು ನೋಡುವಾಗ್ಯೆ ತಾನೇ ಅತ್ತು ಬಿಡುವರು. ಅಷ್ಟರೊಳಗೆ ಒಬ್ಬೊಬ್ಬನು ಪ್ರತಿ ಪಾಠಕ್ಕೆ ಮನಸ್ಸು ಕೊಡುತ್ತಾನೋ ಎಂಬದರ ವಿಷಯ ಸಹ ಚಿಂತಿಸುವದನ್ನು ಮರಿಯಲಿಕ್ಕಿಲ್ಲ. ಹೀಗೆ ೮—೧ ಘಂಟೆಯ ತನಕ ಹೆಚ್ಚಿನ ಸಮಯಗಳಲ್ಲಿ ತಾನು ಶಾಲೆಯಲ್ಲಿ ಇದ್ದೇ ಇದ್ದು ಹುಡುಗರ ವಿದ್ಯಾವರ್ಧನೆಗಾಗಿ ಬಹಳ ಪರಿಶ್ರಮ ಪಡುವರು. ೧ ಘಂಟೆಗೆ ಮಧ್ಯಾನ್ಹದ ಭೋಜನ ಸಮಯದಲ್ಲಿ ಮತ್ತೂ ಶಾಲೆಯಲ್ಲಿ ಹಾಜರಾಗಿದ್ದು ಅದು ಆದನಂತರ ಚಿಕ್ಕವರನ್ನೂ ದೊಡ್ಡವರನ್ನೂ ತಕ್ಕ ಕೆಲಸಗಳಿಗೆ ನೇಮಿಸುವರು. ಸಂಜೆಯಲ್ಲಿ ಎಲ್ಲರೂ ಮಿಂದು ತಿರಿಗಿ ಶಾಲೆಯನ್ನೆಲ್ಲಾ ಗುಡಿಸಿ ಸಾಫ್ ಮಾಡಿ ಕೊಳ್ಳುವದರ ವಿಷಯ ನೋಡಿ, ಒಬ್ಬೊಬ್ಬರು ಕೈಸಾಧಕ ಮೈಸಾಧಕಗಳನ್ನು ಮಾಡಿ ಕೊಳ್ಳುವ ಹಾಗೆ ಜಾಗ್ರತೆ ಪಡುವರು. ರಾತ್ರಿಯ ಊಟವಾದ ನಂತರ ೮ ಘಂಟೆಗೆ ತಾನೇ ಧೊರೆಯ ಸಂಗಡ ದೀಪ ಹಿಡು ಕೊಂಡು ಪ್ರಾರ್ಥನೆಗೆ ಬಂದು, ಹುಡುಗರನ್ನು ಕ್ರಮ ಪಡಿಸಿ ಹೋಗುವರು. ಹುಡುಗರಿಗೆ ಒಮ್ಮಿಂದೊಮ್ಮೆ ರೋಗ ಉಂಟಾದರೆ, ಹಾ! ಆ ಧೊರೆಸಾನಿ ಅವರಿಗಾಗಿ ಪಡುವ ಕಷ್ಟ ಸಾಹಸಗಳ ವಿಷಯ ಏನು ಹೇಳಲಿ! ತುಟಿಗಳಲ್ಲಿಯೂ ಮನಸ್ಸಿನಲ್ಲಿಯೂ ತನ್ನ ಮಕ್ಕಳೇ ಎಂಬ ಭಾವನೆ ಉಂಟಾಗಿ, ಅವರಿಗೆ ಬೇಕಾದ ಶೈತ್ಯೋಪಚಾರಗಳನ್ನು ತಾನೇ ಮಾಡುವದೂ ಖುದ್ದು ಮಾಡಿಸುವದೂ ಅಲ್ಲದೆ, ಅದನ್ನು ಮಾಡು ಇದನ್ನು ಮಾಡು, ಹಾಗೆ ಮಾಡು ಹೀಗೆ ಮಾಡು ಎಂದು ಹುಕುಂ ಕೊಟ್ಟು ಬಿಟ್ಟು, ನನ್ನ ಕೆಲಸ ಆಯಿತು; ಈ ರಗಳೆ ಎಲ್ಲಾ ಯಾರಿಗೆ ಬೇಕು? ಎಂದು ಒಮ್ಮೆಯಾದರೂ ನೆನಸುವವರಲ್ಲ. ಇಂಥವರಿಗಾಗಿಯೂ ಬಹು ಚಿಕ್ಕವರಿಗಾಗಿಯೂ ಹಾಲು ಮೊದಲಾದ ತನ್ನ ಊಟದ ಸಾಹಿತ್ಯಗಳನ್ನು ಆಗಿಂದಾಗ್ಯೆ ಕಳುಹಿಸಿ ಕೊಟ್ಟು ಅವರನ್ನು ಪರಾಂಬರಿಸುವರು. ಹೀಗೆ ಅವರು ಪ್ರತಿ ದಿನ ಶಾಲೆಗೆ ಹೋಗುತ್ತಾ ಬರುತ್ತಾ ಇರುವದು ಕನಿಷ್ಟ ಪಕ್ಷದಲ್ಲಿ ಒಂದೆರಡು ಮೈಲುಗಳಾಗಿರುವದು. ಆಗ್ಯೆಲ್ಲಾ ಒಂದು ಓಲೆಕೊಡೆಯನ್ನು ಹಿಡು ಕೊಂಡೇ ಅತ್ತಿತ್ತ ಹೋಗುವರು. ಹೀಗೆ ಅವರು ಬಹಳವಾಗಿ ಶಾಲೆಗೆ ಹೋಗುತ್ತಾ ಬರುತ್ತಾ ಇರುವದರಿಂದ ಹುಡುಗರು ಪರಸ್ಪರ ಜಗಳಾಡುವದೂ ಬೈದು ಕೊಳ್ಳುವದೂ ಮುಂತಾದ ದುರ್ನಡತೆಗಳಿಗೆ ದೊಡ್ಡ ಅಭ್ಯಂತರವಾಗುತ್ತಿತ್ತು.

ಅನಾಥ ಹುಡುಗರನ್ನಲ್ಲದೆ ಬಡ ತಂದೆತಾಯಿಗಳ ಮಕ್ಕಳನ್ನು ಸಹ ಶಾಲೆಯಲ್ಲಿ ಶೇರಿಸಿ ಕೊಳ್ಳಲಾಗಿ, ಯಾವಾಗಲೂ ಹತ್ತು ಹದಿನೈದು ಮಂದಿ ಹುಡುಗರು ಬರಾಬರಿ ಸಂಖ್ಯೆಗಿಂತ ಹೆಚ್ಚಿಗೆ ಇದ್ದು, ಖರ್ಚಿನ ವಿಷಯದಲ್ಲಿ ಬಹಳ ಇಕ್ಕಟ್ಟಿನಲ್ಲಿ ಇರುವರು. ಒಂದೊಂದು ಸಾರಿ ೧೦೦ ರೂಪಾಯಿಯ ತನಕ ಈ ಉದ್ದಿಶ್ಯ ಸಾಲವಾಗುವದು; ಆಗ ಆ ಧೊರೆಸಾನಿ ಸ್ವಂತ ಗಂಡನನ್ನು ಸಹ ಧೈರ್ಯ ಪಡಿಸುತ್ತಾ ಈ ಕೆಲಸದಲ್ಲಿ ತಮ್ಮನ್ನು ಇರಿಸಿದ

ಅನಾಥನಾಥನಾದ ಪರಲೋಕದ ತಂದೆಯ ಹತ್ತರ ನಿರೀಕ್ಷೆಯುಳ್ಳ ಪ್ರಾರ್ಥನೆಯ ಮುಖಾಂತರ ಬೇಡಿ ಕೊಳ್ಳುತ್ತಾ ಅತಿಶಯಕರವಾದ ಸಹಾಯವನ್ನು ಹೊಂದಿ ತಮ್ಮ ಕೊರತೆಗಳನ್ನು ತೀರಿಸಿ ಕೊಳ್ಳುತ್ತಿದ್ದರು*. ಪರಂತು ಭಾರೀ ಮನುಷ್ಯರಿಗೆ ಕಾಗದಗಳನ್ನು ಬರದು ಹಣ ಕೂಡಿಸಿ ವಿಧವೆಯರಿಗಾಗಿ ಸಹ ಬಹಳ ಸಹಾಯ ಮಾಡುತ್ತಿದ್ದರು. ತಲಚೇರಿ ಸಭೆಯವರು ಅವರಿಂದ ಉಪಕಾರವನ್ನು ಅನುಭವಿಸಿದ್ದು ಇಂತಿಷ್ಟೇ ಎಂದು ಹೇಳ ಕೂಡದು. ಊಟ ಉಡಿಗೆ ಇತ್ಯಾದಿಗಳಲ್ಲಿ ಕೊರತೆ ಪಡುವ ಕ್ರೈಸ್ತರನ್ನಾಗಲಿ ಪರರನ್ನಾಗಲಿ ಕಂಡರೆ, ಕೈಲಾಗುವಷ್ಟು ಸಹಾಯ ಮಾಡುವರು; ಪ್ರತ್ಯೇಕವಾಗಿ ರೋಗಿಗಳ ಮನೆಗೆ ಹೋಗಿ ಶೈತ್ಯೋಪಚಾರಗಳನ್ನು ಮಾಡಿ ಉಪಶಮನ ಬೋಧನೆಗಳನ್ನು ಕೊಟ್ಟು ಆದರಣೆ ಪಡಿಸುವರು. ಇದಲ್ಲದೆ ಸಭೆಯ ಹೆಂಗಸರೆಲ್ಲಾ ವಾರಕ್ಕೊಮ್ಮೆ ತನ್ನ ಬಳಿಗೆ ಪ್ರಾರ್ಥನೆಯ ಕೂಟಕ್ಕೆ ಬರ ಬೇಕೆಂದು ನೇಮಿಸಿ, ಅದಕ್ಕಾಗಿ ಅವರನ್ನು ಪ್ರೇರೇಪಿಸುತ್ತಿದ್ದರಲ್ಲದೆ ದುರ್ಬುದ್ಧಿಯಲ್ಲಿ ನಡಿಯುವ ಗಂಡಂದಿಯರನ್ನು ಹ್ಯಾಗೆ ನೆಟ್ಟನೆಯ ಮಾರ್ಗಕ್ಕೆ ತರ ಬೇಕೆಂದು ಅವರಿಗೆ ಬೋಧಿಸುವರು. ಹೀಗೆ ಅವರು ಶರೀರಿಕ ಉಪಕಾರಗಳನ್ನು ಮಾಡುತ್ತಿದ್ದದಲ್ಲದೆ ಆತ್ಮಾಭಿವೃದ್ಧಿಗಾಗಿಯೂ ಬಹಳ ಚಿಂತೆ ಪಡುತ್ತಿದ್ದರು. ತನ್ನ ಜತೆಕ್ರೈಸ್ತರ ದುಃಖಗಳನ್ನು ಕಂಡು, ಅವು ತನ್ನದೇ ಎಂದು ಅಳುವರು. ಯಾವದೊಂದು ಸತ್ಕ್ರಿಯೆ ಮಾಡುವದಕ್ಕೆ ಕುತೂಹಲ ಪಡುವರು. ಕ್ರೈಸ್ತರಿಗೆ ತೋರಿಸುವ ಸ್ವಾರ್ಥವಿಲ್ಲದ ಪ್ರೀತಿಯನ್ನೇ ತನ್ನ ಚಾಕರರಾದ ಮೂರ್ತಿಪೂಜಕರಿಗೂ ತೋರಿಸುವರು. ಚಾಕರನು ರೋಗಿಯಾದ ಪಕ್ಷದಲ್ಲಿ ಅವನ ಮನೆಗೆ ಸಹ ಹೋಗಿ ಪರಾಂಬರಿಸುತ್ತಿದ್ದರು. ಈ ಪ್ರಕಾರ ಅವರು ಆಯಾ ಸ್ಥಿತಿ ಗತಿಯಲ್ಲಿರುವ ಎಲ್ಲರಿಗೆ ಉಪಕಾರ ಮಾಡುತ್ತಾ ಬುದ್ಧಿಬೋಧನೆಗಳನ್ನು ಹೇಳುತ್ತಾ ಕರ್ತನ ಪ್ರೀತಿಗೆ ನಡಿಸುವದಕ್ಕೆ ಪ್ರಯತ್ನಿಸುತ್ತಿರುವರು. ಇಂಥ ದೊಡ್ಡ ಸಹಾಯವು ಅಕಸ್ಮಿತವಾಗಿ ಮುರಿದು ಹೋಗುವಾಗ ಅವರಿಂದ ಉಪಕಾರಗಳನ್ನು ಹೊಂದಿದವರಲ್ಲದೆ ಭಕ್ತರು ಸಹಾ ಆಗಾಗ್ಯೆ ಬೆರಗಾಗುವ ಹಾಗಾದೀತು. ಆದರೆ "ಕರ್ತನೇ, ನಿನ್ನ ಕೆಲಸಗಳು ಎಷ್ಟೋ ದೊಡ್ಡವು; ನಿನ್ನ ಯೋಚನೆಗಳು ಬಹಳ ಆಳವಾಗಿವೆ. (ಕೀರ್ತ. ೯೨, ೫.) "ಇಗೋ ದೇವರು ತನ್ನ ಶಕ್ತಿಯಲ್ಲಿ ಉನ್ನತನಾಗಿದ್ದಾನೆ; ಅವನ ಹಾಗೆ ಬೋಧಿಸುವವನು ಯಾರು? ಅವನ ಮಾರ್ಗವನ್ನು ಅವನಿಗೆ ನೇಮಿಸಿದವನ್ಯಾರು?" (ಯೋಬ. ೩೬, ೨೨. ೨೩.) ಎಂಬದನ್ನು ಜ್ಞಾಪಕ ಮಾಡಿ ಕೊಂಡು, ತಮ್ಮ ಸಂಶಯಗಳನ್ನು ಪರಿಹರಿಸಿ ಕೊಳ್ಳುವರು.

ಅವರ ಸ್ಥಳದಲ್ಲಿ ಅವರಂಥವರು ಬಂದು ಅವರ ಎಲ್ಲಾ ತರದ ಪ್ರಯತ್ನಗಳನ್ನು ಮುಂದೆ ಸಾಗಿಸುವ ಹಾಗೆಯೂ ಅವರು ಅಗಲಿದ ಗಂಡನು ಕರ್ತನಲ್ಲಿ ಆದರಣೆಗೊಳ್ಳುವ ಹಾಗೆಯೂ ಪ್ರತ್ಯೇಕವಾಗಿ ಅವರು ಕರ್ತನ ಪರಾಂಬರಿಕೆಯಲ್ಲಿ ಒಪ್ಪಿಸಿ ಹೋದ ಒಂದು ತಿಂಗಳಿನ ಎಳೇ ಕೂಸಿನ ಕ್ಷೇಮಾರ್ಥಕ್ಕಾಗಿಯೂ ಕರ್ತನ ಕೆಲಸವನ್ನೂ ಆತನ ಭಕ್ತರನ್ನೂ

*೧೮೬೮ನೆ ಇಸವಿಯ (Report) ರಿಪೋರ್ಟಿನ ೪೫ನೆ ಪುಟದಲ್ಲಿಯೂ ೧೮೬೫ನೇದರ ೬೦ನೆ ಪುಟದಲ್ಲಿಯೂ ಈ ಸಂಗತಿಗಳ ವಿವರವನ್ನು ನೋಡ ಬಹುದು.

ಪ್ರೀತಿಸುವ ಒಬ್ಬೊಬ್ಬರು ಪ್ರಾರ್ಥನೆ ಮಾಡ ಬೇಕೆಂದು ಮೇಲೆ ಬರೆದವುಗಳನ್ನು ಕಣ್ಣಾರೆ ಅನುಭವಿಸಿ ಅವರ ಪರಿಚಿತ ಇರುವ ಒಬ್ಬನು ಬರದು ಬೇಡಿ ಕೊಳ್ಳುತ್ತಾನೆ.

ರೋಮ. ೧೧, ೩೩.

"ಓ ದೇವರ ಜ್ಞಾನ ತಿಳುವಿಕೆಗಳ ಐಶ್ವರ್ಯದ ಅಗಾಧವೇ! ಅವನ ನ್ಯಾಯತೀರ್ವಿಕೆಗಳು ಎಷ್ಟೋ ಅಶೋಧ್ಯವಾಗಿವೆ! ಅವನ ಹಾದಿಗಳು ಎಷ್ಟೋ ಅಮಾರ್ಗ್ಯವಾಗಿವೆ."

ಉಡಪಿಯಿಂದ ಶುಮಾರು 4 ಮೈಲುಗಳು ದೂರವಾಗಿರುವ ಉಪ್ಪೂರಲ್ಲಿ, ಚಿಕ್ಕ ಪ್ರಾಯದಲ್ಲಿ ಅಂದರೆ 7ನೆ ವರುಷದಲ್ಲಿ ಬೇರೊಬ್ಬರ ಸಂಗಡ ಕ್ರೈಸ್ತನಾಗಿ ತಿರಿಗಿ ಶುಮಾರು 13 ವರುಷಗಳು ತನ್ನ ದೆವ್ವಾರಾಧನೆಯ ಮತವನ್ನು ಅವಲಂಬಿಸಿದ. . . . . ಎಂಬವನು ತನ್ನ ಮೂರು ಮಂದಿ ಸಹೋದರರ ಸಂಗಡಲೂ ಮುದುಕಿಯಾಗಿರುವ ತಾಯಿಯ ಸಂಗಡಲೂ ತಿರಿಗಿ ಕ್ರೈಸ್ತನಾಗ ಆರಿಸಿ, ಜುಲಾಯಿ 23ರಲ್ಲು ತನ್ನ ಮನೆಯಲ್ಲಿ ಪ್ರಾರ್ಥನೆ ಮಾಡ ಬೇಕೆಂದು ಬೇಡಿ ಕೊಂಡನು. ಈಗ ಪ್ರಾರ್ಥನೆಗೆ ಬರುತ್ತಾ ಇರುತ್ತಾನೆ.

ಉಡಪಿಯಲ್ಲಿರುವ ಮಿಶನ್ ಮನೆಯಿಂದ ತೆಂಕು ಪಡುಸಮುದ್ರದ ಹೊದ್ದೀಲಿ ಒಂದು ಹರದಾರಿ ದೂರವಾಗಿ, ಮುಂಚಿತಾಗಿಯೇ ಕ್ರೈಸ್ತರಾಗಿರುವವರ 5 ಮನೆಗಳು ಇರುವಲ್ಲಿ, ... ಎಂಬವನು ತನ್ನ ಮನೆಯವರೆಲ್ಲರ (7 ಮಂದಿ) ಸಂಗಡ ಕ್ರೈಸ್ತನಾಗ ಬೇಕೆಂದು ಮನಸ್ಸು ಮಾಡಿ, ಪ್ರಾರ್ಥನೆಗೂ ಬೋಧನೆಗೂ ಬರುತ್ತಿದ್ದಾನೆ. ಜುಲಾಯಿ 26ರಲ್ಲು ಮೊದಲನೆ ಸಾರಿ ಅವನ ಮನೆಯಲ್ಲಿ ಪ್ರಾರ್ಥನೆ ಆಯಿತು.

ಉಡಪೀ ದೇವಾಲಯದಲ್ಲಿ ಉಪ್ಪೂರಿನಲ್ಲಿರುವ. . . . . ಎಂಬವನ ಮನೆಯವರಿಗೂ, ಅಲ್ಲಿಂದ ಮೂಡು ಒಂದು ಮೈಲು ದೂರದಲ್ಲಿರುವ ಅಮುಂಜೆಯ. . . . . ಎಂಬವನ ಮನೆಯವರಿಗೂ ಒಟ್ಟಿಗೆ 11 ಮಂದಿಗೆ ಅಗೊಸ್ತು 7ರಲ್ಲು ಸ್ನಾನವಾಯಿತು.

ಉಡಪಿಯಲ್ಲಿ ಕೆಲಸ ನೋಡುತ್ತಿರುವ ಒಬ್ಬ ಉಪದೇಶಿಯ ಕೈಯಿಂದ ನಮಗೆ ಬಂದ ಮೇಲಿನ ವರ್ತಮಾನವು ಎಲ್ಲರಿಗೆ ಸಂತೋಷಕರವಾಗಿರುವದು. ಅವರು ಬರದ ಹೆಸರುಗಳನ್ನು ಬಿಟ್ಟಿದ್ದೇವೆ.

ಈ ವರುಷದಲ್ಲಿ ಮುಲ್ಕಿ ಉಡಪಿಯಲ್ಲಿಯೂ ಉಪಠಾಣ್ಯಾಗಳಲ್ಲಿಯೂ ಸ್ನಾನ ಹೊಂದಿದವರ ಲೆಖ್ಖ ಇನ್ನೂರರ ಮೇಲಾಗಿದೆ.

ಸಪ್ತಂಬರ್ ತಿಂಗಳಿನ 8ನೇ ತಾರೀಕಿನಲ್ಲಿ ದಕ್ಷಿಣ ಕನ್ನಡಜಿಲ್ಲಾ ಮಿಶನ್ ಹಬ್ಬವು ಮಂಗಳೂರಿನಲ್ಲಿ ಆಚರಿಸ ಬೇಕೆಂದು ನೇಮಕವಾಯಿತು.

ಸ. ಕ.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. SEPTEMBER 1870. ಅಂಕೆ ೩.

ಕಾಲ್ಹೆಜ್ಜೆಗಳು.

ನಾನು ಒಂದು ಬೈಲನ್ನು ಕಾಲುನಡೆಯಾಗಿ ಹಾದು ಹೋಗುತ್ತಿರುವಾಗ, ದಾರಿಯಲ್ಲಿ ಒಬ್ಬ ಒಕ್ಕಲಿಗನು ಶಿಕ್ಕಿದನು. ಇವನ ಮುಖಚರ್ಯೆಗಳು ನಡುಪ್ರಾಯ ಕಳದ, ಭಯಭಕ್ತಿಯುಳ್ಳ, ಜಾಗರೂಕ ಮನುಷ್ಯನ ಹಾಗಿದ್ದವು. “ಯೇಸು ಕ್ರಿಸ್ತನಲ್ಲಿ ನಮಗಿರುವ ನಿರೀಕ್ಷೆಯ ಸಂತೋಷವು ನಮ್ಮಿಬ್ಬರಿಗೂ ಇದ್ದದರಿಂದ, ನಾವು ಈಗ ಪರಕಿಯವರಾಗಿ ಸಂಘಟಿಸಿದರೂ, ಆ ನಿರೀಕ್ಷೆಯೇ ನಮ್ಮನ್ನು ಬಂಧುಗಳಾಗಿ ಒಡಗೂಡಿಸುತ್ತದೆ” ಎಂಬದಾಗಿ ಅವನು ಮಾತಾಡುತ್ತಾ, ಕೆಲವು ಹೊಲಗಳ ಮಧ್ಯದಿಂದ ನನ್ನನ್ನು ಮಾರ್ಗದಲ್ಲಿರುವ ತನ್ನ ಮನೆಗೆ ಕರಕೊಂಡು ಹೋದನು. ಮತ್ತು ದಾರಿ ನಡಿಯುವಾಗ, ಅವನು ತನ್ನ ಸರಸವಾದ ಶಾಂತ ಮಾತುಗಳಿಂದ ಕ್ರಿಸ್ತನ ಮಮತೆಯ ವಿಷಯ ಮತ್ತು ತಾನು ಹೃತ್ಪರಿಣಾಮ ಹೊಂದಿದ ವಿಷಯ ಮಾತಾಡಿ ಕೊಂಡಿದ್ದನು. ಏನಂದರೆ: ಅವನೂ ಅವನ ಹೆಂಡತಿಯೂ, ಮತದಲ್ಲಿ ತಮ್ಮ ಜನ್ಮ ಸಾರ್ಥಕ ಪಡಿಸುವದೇನಾದರೂ ಉಂಟೆಂದು, ನೆನಸದೆ 40 ವರುಷ ಪ್ರಾಯ ತನಕ ಬಾಳಿ ಇದ್ದರು. ಒಂದು ದಿವಸ ಮಧ್ಯಾಹ್ನ ಹೊತ್ತಿನಲ್ಲಿ ಒಂದು ತಗ್ಗು ಭೂಮಿಯಿಂದ ಒಂದು ಕಲ್ಲುದಾರಿಯಾಗಿ ತನ್ನ ಮನೆಗೆ ಬರುವಾಗ, ತನ್ನ ಹಿಂದೆ ಕಾಲು ಹೆಜ್ಜೆಗಳು ಕೇಳಿದ ಹಾಗಾಯಿತು. ಅವನು ಹಿಂದಿರುಗಿ ನೋಡಿದನು, ಆದರೆ ಯಾರೂ ಕಾಣಲಿಲ್ಲ. ಆದರೆ ಹಿಂದಣಿಂದ ಶಬ್ದ ಕೇಳಿಸುತ್ತಾ ಇತ್ತು. ಅವನು ಮುಂದೆ ನಡಿಯುತ್ತಾ, ಆ ಶಬ್ದವು ಮಾತುಗಳಾಗಿ ಕೇಳಿಸಿದವು. ಏನಂದರೆ: “ಮಾನಸಾಂತರ ಪಡು—ವಿಶ್ವಾಸಿಸು!” ಈ ಮಾತುಗಳು ಕಾಲ್ಹೆಜ್ಜೆಗಳ ಶಬ್ದದ ಸಂಗಡಲೇ ಕೇಳಿಸಿದವು. ಮತ್ತು ಕಡೆಗೆ ತಾನು ಕೇಳಿದ ಶಬ್ದವು ತನ್ನ ಸ್ವಂತ ಕಾಲಿನ ಹೆಜ್ಜೆಯೇ ಅಲ್ಲದೆ ಮತ್ತೇನಲ್ಲವೆಂದು ಅವನಿಗೆ ಕಾಣ ಬಂತು. ಆದರೆ ಆ ಮಾತುಗಳು ಇನ್ನೂ ಕೇಳಿಸಿದವು, ಮತ್ತು ಅವನು ಹ್ಯಾಗೆ ಮುಂದೆ ನಡದನೋ ಹಾಗೆ ಅವನ ಕಿವಿಯಲ್ಲಿ “ಮಾನಸಾಂತರ ಪಡು—ವಿಶ್ವಾಸಿಸು”! ಎಂಬ

ಮಾತುಗಳು ಕಿವಿಗೆ ಕೇಳುತ್ತಾ ಇದ್ದವು. ಹೀಗೆ ಅವನು ಮನೆಗೆ ಮುಟ್ಟಿದನು, ಆ ರಾತ್ರೆ ಅವನ ಹೊಟ್ಟೆಗೆ ಅನ್ನ ಶೇರಲಿಲ್ಲ; ನಿದ್ರೆ ಮಾಡ ಹೋದನು, ಆದರೆ ನಿದ್ರೆ ಬೀಳಲಿಲ್ಲ. ಕಡೆಗೆ, ದೇವರಿಗೆ ಪ್ರಾರ್ಥನೆ ಮಾಡ ಬೇಕೆಂದು ಅವನು ನಿಶ್ಚೈಸಿದನು; ಮತ್ತು ತನ್ನ ಹೆಂಡತಿಯು ನಿದ್ರೆ ಹೋಗುವ ವರೆಗೆ ಕಾದು ಕೊಂಡು, ಅವಳು ಮಲಗಿದ ಕೂಡಲೇ ಇವನು ತನ್ನ ಹಾಶಿಕೆಯ ಬದಿಯಲ್ಲಿ ಮೊಣಕಾಲೂರಿ ನಿಂತನು, ಆದರೆ ಏನು ಹೇಳ ಬೇಕೆಂದು ಅರಿಯದೆ, ಕರುಣೆಯನ್ನು ಬೇಡುವದಕ್ಕೆ ದೇವರನ್ನು ಕುರಿತು ನೆನಸ ತೊಡಗಿದನು. ತತ್ಕ್ಷಣದಲ್ಲಿ ಅವನ ಹೆಂಡತಿಯು ಎಚ್ಚರವಾಗಿ, ಅವನು ಮಾಡುವದೇನೆಂದು ಕೇಳಿದಳು. ಅವನು ತನ್ನ ಮನೋವ್ಯಾಕುಲದ ಕಾರಣವನ್ನು ಅವಳಿಗೆ ತಿಳಿಸಿದಾಗ, ಅವಳು, ತಾನೂ ಮಾನಸಾಂತರ ಪಡಲಾಶಿಸುತ್ತೇನೆಂತ ಹೇಳಿದಳು. ಹಾಗೆಯೇ ಇಬ್ಬರೂ ಸಂಗಡಲೇ ಮೊಣಕಾಲೂರಿ, ತಮ್ಮ ಮಾತುಗಳು ಹೊರಡುವ ಪ್ರಕಾರವೇ ಪ್ರಾರ್ಥಿಸಿದರು. "ಮಾನಸಾಂತರ" ಎಂಬ ಶಬ್ದವು ಅವರ ಮನಸ್ಸಿನಲ್ಲಿ ಪದೇ ಪದೇ ಗೋಚರಕ್ಕೆ ಬರುತ್ತಿತ್ತು. ಮತ್ತು ಅವರು ಸಂಕಷ್ಟದಲ್ಲಿಯಾಗಲೀ ಭಯ ದುಃಖಾದಿಗಳಲ್ಯಾಗಲೀ ಇದ್ದಾಗ್ಯೆ "ವಿಶ್ವಾಸ" ಎಂಬ ಶಬ್ದವು ಅವರ ಕಿವಿಯಲ್ಲಿ ನಾದಿಸುತ್ತಾ ಇತ್ತು. ಬಾಲ್ಯ ಪ್ರಾಯದಲ್ಲಿ ಕಲಿತರೂ, ಅನಂತರ ಲಕ್ಷಿಸದೆ ಅರ್ಥವಾಗ್ರಹಿಸದೆ ಮರತು ಹೋದ ದೇವವಾಕ್ಯವಚನಗಳು, ಮುಖ್ಯವಾಗಿ ನಮ್ಮ ರಕ್ಷಕನು ಆಡಿದ ಆದರಣೀ ಮಾತುಗಳು, ಅವರ ನೆನಪಿಗೂ ಗ್ರಹಿಕೆಗೂ ಬಂದವು. ನಿರಂತರ ಪ್ರಾರ್ಥನೆಯಿಂದಲೂ ಈ ವಾಕ್ಯಗಳ ಧ್ಯಾನದಿಂದಲೂ ಅವರಿಬ್ಬರೂ ತಮ್ಮ ಪಾಪಗಳ ಭಾರವನ್ನೂ ದುಷ್ಟತ್ವವನ್ನೂ ಶಿಕ್ಷೆಯನ್ನೂ ಚನ್ನಾಗಿ ಅರಿತು, ನಿಜ ಮಾನಸಾಂತರ ಪಡುವವರಾದರು. ಮತ್ತು ಯೇಸು ಕ್ರಿಸ್ತನು ಲೋಕಕ್ಕೆ ಅನುಗ್ರಹಿಸಿದ ಅಮೂಲ್ಯವಾದ ರಕ್ಷಣಾದ್ರವ್ಯದಲ್ಲಿ ತಮಗೂ ಪಾಲು ಉಂಟೆಂದು ಪೂರ್ಣ ಹೃದಯದಿಂದ ವಿಶ್ವಾಸಿಸ ತಕ್ಕ ಜ್ಞಾನ ಹೊಂದಿದರು. ಹೀಗೆ ಅವರು ಪರಲೋಕದಿಂದ ಕೃಪೆಯನ್ನು ಹೊಂದಿ, ನವೀನ ದಂಪತಿಗಳಾದರು. ಅವರ ಸ್ವಭಾವವೂ ನಡತೆಯೂ, ಅವರ ಮಾತುಗಳೂ ಕಾರ್ಯಗಳೂ ದೇವಭಕ್ತರಿಗೆ ಯೋಗ್ಯವಾದಂಥವುಗಳಾದವು. ನಾನು ಅವರ ಮನೆಗೆ ಮುಟ್ಟಿದಾಗ, ಅವನ ಹೆಂಡತಿಯನ್ನು ನಾನು ಕಂಡೆನು. ಅವಳ ನಡೆನುಡಿಗಳಲ್ಲಿಯೂ ಗೃಹಕೃತ್ಯದಲ್ಲಿಯೂ ದೇವರ ಆಶೀರ್ವಾದದ ಅಂಕುರವು ಕಾಣಿಸಿತು. ಅವರಿಬ್ಬರೂ ತಮ್ಮ ಅಲ್ಪ ಸ್ಥಿತಿಯಲ್ಲಿ ಸಂತುಷ್ಟರಾಗಿಯೂ ಸುಖಿಯಾಗಿಯೂ ಇದ್ದರು; ಅವರು ತಮ್ಮ ನೆಂಟರಿಷ್ಟರಿಗೂ ಸ್ನೇಹಿತರಿಗೂ ನೆರೆಯವರಿಗೂ ಸಂತೋಷದಾಸ್ಪದರಾಗಿದ್ದರು, ಮತ್ತು ಒಳ್ಳೇ ಮಾದರಿಯಾಗಿದ್ದರು. ಆ ಮಾರ್ಗವಾಗಿ ಹೋಗುವ ಯಾವ ಪ್ರಯಾಣಸ್ಥನಾದರೂ ಅವರ ಆತಿಥ್ಯ ಆದರಣೆಗಳನ್ನು (ಕಿಂಚಿತವಾದರೂ) ಹೊಂದದೆ ಹೋಗುತ್ತಿದ್ದಿಲ್ಲ.

ಈ ಒಕ್ಕಲಿಗನ ಮತ್ತು ಅವನ ಹೆಂಡತಿಯ ಹೃತ್ಪರಿಣಾಮಕ್ಕೆ ಕಾರಣವಾದ ಆ ಶಬ್ದವು ಬರೇ ಮನಸ್ಸಿನ ಕಲ್ಪನೆಯೇ ಎಂತ, ಓದುವವರು ನೆನಸದಿರಲಿ. ದೇವರು ಪಾಪಿಗಳನ್ನು ತನ್ನ ಕಡೆಗೆ ತಿರುಗಿಸುವದಕ್ಕೆ ಈಗಲೂ ಅದ್ಭುತಗಳನ್ನು ಮಾಡುತ್ತಾನೆ. ನಿಜವಾದ ಹೃತ್ಪರಿಣಾಮ ಹೊಂದಿದ ಪ್ರತಿ ಕ್ರೈಸ್ತನು ಇದಕ್ಕೆ ದೃಷ್ಟಾಂತವಾಗಿದ್ದಾನೆ.

ದೇವವಾಕ್ಯದ ತಿಳಿಯದ ಸಂಗತಿಗಳು.

ಒಂದು ದೊಡ್ಡ ಉದ್ಯೋಗಗೃಹದಲ್ಲಿ ನಾನು ಲೇಖಕನಾಗಿರುವ ಸಮಯದಲ್ಲಿ ಅಲ್ಲಿಯ ಅಸ್ವಸ್ಥರ ಕೋಣೆಯಲ್ಲಿರುವ ಒಬ್ಬ ಪ್ರಾಯ ಹೋದ ಮನುಷ್ಯನು ಒಂದು ದಿವಸ ನನ್ನ ಹತ್ತರ ಕೇಳಿದ್ದು: “ಐಯಾ, ನಿಮ್ಮ ಹತ್ತರ ಬಂದು ಪ್ರಶ್ನೆ ಕೇಳ ಮನಸ್ಸುಂಟು, ಶಿಟ್ಟು ಮಾಡಲಿಕ್ಕಿಲ್ಲವೆಂದು ನೆನಸುತ್ತೇನೆ; ಅದು ಬೈಬಲಿನಲ್ಲಿರುವ ಒಂದು ತಿಳಿಯದ ಸಂಗತೀ ವಿಷಯ.”

ಅದಕ್ಕೆ ನಾನು ಉತ್ತರ ಕೊಟ್ಟದ್ದು: “ನಾನೆಂದೂ ಶಿಟ್ಟು ಮಾಡಲಾರೆ! ಆ ಪ್ರಶ್ನೆ ಏನೆಂದು ಕೇಳುವಾ, ದಯ ಮಾಡಿ ಹೇಳಿರಿ.”

ಆಗ ವಯಸ್ಸಿಯು ಬೈಬಲ್‌ಪುಸ್ತಕವನ್ನು ತೆರದು, ಅಂಕೆಗಳ ೩೩ನೇ ಸಂಧಿಯ ೩೮ನೇ ವಚನ ತೆಗದು ಓದಿದ್ದು: ಆಗ ಯಾಜಕನಾದ ಆರೋನನು ಯೆಹೋವನ ಆಜ್ಞೆಯ ಪ್ರಕಾರ ಹೋರ ಗುಡ್ಡದ ಮೇಲೆ ಏರಿ, ಮೃತವಾದನು.”

ನಾನು: “ಈಗ ಈ ವಚನವನ್ನು ಕುರಿತು ನೀವು ಏನು ಕೇಳಲಪೇಕ್ಷಿಸುತ್ತೀರಿ?”

ಅದಕ್ಕೆ ಮುದುಕನು ತಜವಿಜೆಯಾಗಿ ಹೇಳಿದ್ದು: “ಬೈಬಲಿನ ಮತ್ತೊಂದು ಕಡೆಯಲ್ಲಿ ಆರೋನನು ಹೋರ ಬೆಟ್ಟದಲ್ಲಿ ಅಲ್ಲ, ಬೇರೆ ಎಲ್ಲಿಯೋ ಸತ್ತನೆಂದು ಬರದದೆಯಲ್ಲ?” ಅಂತ ಹೇಳಿ, ಕೆಲವು ಹಾಳೆಗಳನ್ನು ಮಗುಚಿ, ದ್ವಿತೀಯನ್ಯಾಯದ ೧೦ನೇ ಸಂಧಿಯ ೬ನೇ ವಚನವನ್ನು ಓದಿದನು: “ಇಸ್ರಯೇಲ ಮಕ್ಕಳು ಯಾಕಾನನ ಮಕ್ಕಳ ಬೆರೋಥನ್ನು ಬಿಟ್ಟು ಮೋಸೆರಕ್ಕೆ ಹೊರಟಾಗ, ಆರೋನನು ಅಲ್ಲಿ ಸತ್ತನು, ಅಲ್ಲೆ ಅವನನ್ನು ಹೂಳಿಟ್ಟರು, ಇತ್ಯಾದಿ.”

ನಾನು: “ಈಗ ಈ ೨ ವಚನಗಳು ಒಂದಕ್ಕೊಂದು ವಿರೋಧವಾಗಿವೆ ಎಂಬದು ನಿಮ್ಮ ಅಭಿಪ್ರಾಯವೋ? ಅಥವಾ ಅದು ನಿಮ್ಮ ಮನಸ್ಸಿಗೆ ಹತ್ತುವದಿಲ್ಲವೆಂದು ಹೇಳುತ್ತೀರೋ?”

ವಯಸ್ಸಿ: “ಹೌದು, ಐಯಾ.”

ನಾನು: “ಹಾಗಾದರೆ, ಒಂದು ಚಿಕ್ಕ ದೃಷ್ಟಾಂತ ಕೊಟ್ಟು ಅದನ್ನು ವಿವರಿಸುತ್ತೇನೆ: ನೀವು ಮುದುಕನಾಗಿರುವದರಿಂದ, ಬಹಳ ಕಾಲ ಹೋಗದ್ದಕ್ಕೆ ಮುಂಚೆ ನೀವು ಸಾಯುವಿರಿ, ಅಲ್ಲ? ಒಂದು ವೇಳೆ ಇದೇ ಉದ್ಯೋಗಶಾಲೆಯಲ್ಲಿ ನಿಮಗೆ ಮರಣ ಬರ ಬಹುದು. ನಿಮ್ಮ ಮರಣದ ವಾರ್ತೆಯು ಎರಡು ಪ್ರಕಾರವಾಗಿ ಬರಿಯೋಣಾದರೆ, ಅಂದರೆ ನೀವು——ಉದ್ಯೋಗಗೃಹದಲ್ಲಿ ಮೃತವಾದಿರೆಂತ, ಮತ್ತು ನೀವು——ಊರಿನಲ್ಲಿ ಮೃತವಾದಿರೆಂತ ಇದ್ದರೆ, ಅವೆರಡೂ ನಿಜವಾಗಿರುವದಲ್ಲ?”

ವಯ: “ಹೌದು, ಆ ೨ ವಾರ್ತೆಗಳೂ ಸತ್ಯವಾಗಿರುವವೇ ಸರಿ.”

ನಾನು: “ಅದೇ ಪ್ರಕಾರ ದ್ವಿತೀಯನ್ಯಾಯ ಪುಸ್ತಕದಲ್ಲಿ ತೋರುವಂತೆ, ಇಸ್ರಯೇಲರ ೪೦ ವರುಷ ತಿರುಗಾಟದ ವಿಷಯ ಬರದ ಮುಖ್ಯ ಸಂಗತಿಗಳಲ್ಲಿ ಮೋಶೆಯು ಆರೋನನ ಮರಣವನ್ನು ಕುರಿತು ಬರಿಯುವಾಗ, ಅದು ಸಂಭವಿಸಿದ ಸ್ಥಳವನ್ನು, ನಮಗೆ

ಪರಿಚಯವಿಲ್ಲದಂಥಾದ್ದಾಗ್ಯೂ ಅಲ್ಲಿಯ ಆಗಿನ ಜನರಿಗೆಲ್ಲ ರೂಢಿಯಾಗಿರುವಂಥಾ ಹೆಸರಿನಿಂದ ಬರದನು; ಮತ್ತು ಮೋಸೆರ ಎಂಬದು ಹೋರ ಬೆಟ್ಟವಿರುವ ಶೀಮೆಯ ಹೆಸರಾಗಿತ್ತು ಎಂಬದು ಹ್ಯಾಗೂ ಸಂಶಯಿಸ ಕೂಡದು.—ಇದು ನನ್ನ ಅಭಿಪ್ರಾಯವಾಗಿರುತ್ತದೆ."

ಇದಕ್ಕೆ ಆ ಮುದುಕನು ಸಮಾಧಾನ ಪಟ್ಟವನಾಗಿ ಸುಮ್ಮನಿದ್ದನು. ಮತ್ತು ನಾನು ಕೆಲವು ತಾಸು ಅಲ್ಲಿ ಇದ್ದ ಕೆಲವು ಸಾದು ಜನರ ಸಂಗಡ ಅವರಿಗೆ ತಕ್ಕ ವಿಷಯಗಳನ್ನು ಕುರಿತು ಮಾತಾಡಿದ ಬಳಿಕ ಅಲ್ಲಿಂದ ಹೊರಟು ಬಂದೆನು.

ಮೇಲಿನ ಸಂಭಾಷಣೆಯನ್ನು ಕುರಿತು ಆಲೋಚಿಸುವಾಗ ದೇವರ ವಾಕ್ಯದಲ್ಲಿ ಎಲ್ಯಾದರೂ ತೋರುವಿಕೆಗಿರುವ ಹೆಚ್ಚುಕಡಿಮೆಗಳನ್ನು ಅಥವ ವಿರೋಧಗಳನ್ನು ಕಾಣಿಸಿಕೊಡುವದಕ್ಕೆ ಪ್ರೀತಿ ಪಡುವವರು ಅದರಿಂದ ಒಳ್ಳೇ ಪ್ರಯೋಜನ ಪಡಿಯ ಬೇಕೆಂಬ ಮನಸುಳ್ಳವರಾಗಿರುವದಿಲ್ಲ. ಆದರೆ ಆಕ್ಷೇಪಣೆಗಳನ್ನು ಕೇಳುವದಕ್ಕೆ ತೋರಿಸುವಷ್ಟು ಮನಸ್ಸು ಅವುಗಳ ನಿವಾರೋತ್ತರಗಳನ್ನು ಕೇಳಿ ತಿಳುಕೊಳ್ಳುವದಕ್ಕೆ ತೋರಿಸುವದಿಲ್ಲ.

ಅದರ ತರುವಾಯ ಒಂದು ದಿವಸ ಅದೇ ವಯಸ್ಸಿ ಮನುಷ್ಯನು ಅದೇ ವಚನವನ್ನು ಕುರಿತು ಅದೇ ಆಕ್ಷೇಪಣೆಯನ್ನು ಕೇಳುವದನ್ನು ಕಂಡು, ಬಹಳ ಆಶ್ಚರ್ಯವಾಯಿತು.

"ಇದೇ ಪ್ರಶ್ನೆ ಮುಂಚೆ ಒಂದು ಸಾರಿ ನೀವು ಕೇಳಿದ್ಧೀರಲ್ಲ?" ಎಂದು ಕೇಳಿದಾಗ,

ಅವನು: "ಇಲ್ಲ ಐಯಾ! ಅದರ ವಿಷಯವಾಗಿ ನನಗೇನೂ ನೆನಪಿಲ್ಲ; ನಾನು ಅದನ್ನು ನಿಮ್ಮ ಹತ್ತರ ಕೇಳ ಬೇಕೆಂತ ಅನೇಕ ಸಾರಿ ಆಲೋಚಿಸುತ್ತಿದ್ದೆ" ಎಂತ ಉತ್ತರ ಕೊಟ್ಟನು.

ನಾನು: "ನೀವು ಆ ಪ್ರಶ್ನೆಯನ್ನು ನಿಜವಾಗಿ ನನಗೊಮ್ಮೆ ಹಾಕಿದ್ಧೀರಿ. ಮತ್ತು ಆಗ ನಾನು ಕೊಟ್ಟ ಉತ್ತರವು ನಿಮ್ಮ ಮನಸ್ಸಿನಲ್ಲಿ ಖಚಿತವಾಗಿ ನಿಲ್ಲುವದೆಂದು ನೆನಸಿದ್ದೆ. ನೋಡಿರಿ, ಶನಿವಾರ ದಿವಸ ಮಧ್ಯಾಹ್ನದಲ್ಲಿ ನಾನು ಮತ್ತು (ಅಲ್ಲಿರುವ ಕೆಲವರನ್ನು ಕಾಣಿಸಿ,) ಇವರು ಆ ಅಗೋಷ್ಟೆಯ ಹತ್ತರ ಕೂತಿರುವ ಸಮಯದಲ್ಲಿ ನಾವು ಇದೇ ಸಂಗತಿಯನ್ನು ಕುರಿತು ಚರ್ಚಿಸಿದ್ದು ಮರತು ಹೋಯಿತೇನು?"

ಹೀಗೆ ನಾನು ಎಷ್ಟು ಪ್ರಯತ್ನ ಮಾಡಿದರೂ, ಹಿಂದೆ ನಡದ ಸಂಭಾಷಣೆಯ ನೆನಪು ಆ ಮುದುಕನ ಮನಸ್ಸಿನಲ್ಲಿ ಹುಟ್ಟಿಸಲಾಗಲಿಲ್ಲ. ಆದರಿಂದ ನಾನು ಎರಡನೇ ಸಾರಿ ಕೊಡುವ ಉತ್ತರವಾದರೂ ಅವನಿಗೆ ಮರಿಯದೆ ನೆನಪು ಉಳಿಯ ಬೇಕೆಂಬದರಿಂದ ಆಗ ನಾನು ಉತ್ತರ ಕೊಡಲಿಲ್ಲ; ಮತ್ತು ಅದಕ್ಕಾಗಿ ಅವನು ಕಾದು ಕೊಳ್ಳುವ ಹಾಗೆ ಕೆಲವು ದಿವಸ ಕಳದೆನು; ಹಾಗೆಯೇ ನಾನು ಮನೆಗೆ ಬಂದು, ನನ್ನ ವಹಿಯಲ್ಲಿ ನೋಡಲಾಗಿ, ನಾನು ಅವನಿಗೆ ಆ ಮೊದಲನೇ ಉತ್ತರ ಕೊಟ್ಟು ಸ್ವಲ್ಪ ಹೆಚ್ಚು ಒಂದು ವರುಷ ಮಾತ್ರವೇ ಆಗಿತ್ತು. ಮತ್ತು ಅವನನ್ನು ಇನ್ನೊಮ್ಮೆ ನೋಡಿದಾಗ, ಆ ಪ್ರಶ್ನೆಯ ಉತ್ತರವನ್ನು ಅವನು ಮರಿಯದಂತೆ ಬಹಳ ವಿಸ್ತಾರವಾಗಿ ವಿವರಿಸಿ ಹೇಳಿದೆನು.

ಈ ಸಂಭಾಷಣೆಯ ವಿಷಯ ವಿಚಾರಿಸಿದರೆ, ಒಂದು ಪ್ರಶ್ನೆ ಹುಟ್ಟುತ್ತದೆ; ಏನಂದರೆ: ದೇವರ ವಾಕ್ಯವನ್ನು ಕುರಿತು ಆಕ್ಷೇಪಣೆಗಳನ್ನು ಕೇಳುವವರ ಉದ್ದೇಶವು ಏನಾಗಿರ ಬಹುದು? ದೇವರ ವಾಕ್ಯದಲ್ಲಿ ವಿಶ್ವಾಸವಿಲ್ಲದೆ, ಅದರಲ್ಲಿ ತಪ್ಪುಗಳು ಅಥವ ಹೆಚ್ಚುಕಡಿಮೆ

ಗಳುಂಟು ಎಂತ ನೆನಸಿ, ಅವನ್ನು ತೋರಿಸಿ ಕೊಡುವದೆಂಬದು ಒಂದು. ಮತ್ತು ದೇವರ ವಾಕ್ಯದಲ್ಲಿ ವಿಶ್ವಾಸವಿದ್ದು, ಅದರ ವಿಷಯದಲ್ಲಿ ಏನಾದರೂ ಆಕ್ಷೇಪಣೆಗಳು ಶಿಕ್ಕಿದರೆ, ಅವು ತನಗೆ ಅರಿಯದಿದ್ದರೂ ಅವು ಆ ಪ್ರಕಾರ ತಪ್ಪಾಗಿರ ಕೂಡದೆಂದು ತಿಳಿದು, ಅವುಗಳನ್ನು ಕೇಳಿ ಕೊಂಡು, ಚನ್ನಾಗಿ ಗ್ರಹಿಸಿ, ಕಲಿಯುವದು ಮತ್ತೊಂದು. ಇದು ಹೊರ್ತು ಬೇರೆ ಉದ್ದೇಶಗಳಿರ ಬಹುದು, ಆದರೆ ಇವು ಮುಖ್ಯವಾಗಿರುವದರಿಂದ ಇವೆರಡನ್ನು ಕುರಿತು ಮಾತಾಡುವಾ.

ದೇವರ ವಾಕ್ಯದಲ್ಲಿ ವಿಶ್ವಾಸವಿಲ್ಲದವರು, ತಾವು ಯಥಾರ್ಥವಂತರಾಗಿಯೂ ಸತ್ಯವನ್ನು ಹುಡುಕುವಂಥವರಾಗಿಯೂ ಇದ್ದರೆ ಹೊರ್ತು, ಅದನ್ನು ಕುರಿತು ಆಕ್ಷೇಪಣೆಗಳನ್ನು ಕೇಳುವದರಿಂದ ಅಥವ ಬರೇ ದೋಷಗಳನ್ನು ಹುಡುಕುವದರಿಂದ ಪ್ರಯೋಜನವಿಲ್ಲ. ಯಥಾರ್ಥವು, ಸತ್ಯದ ಪ್ರೀತಿಯು ಇವೆರಡು ಇಲ್ಲದವರು ತರ್ಕಕ್ಕಾಗಿಯೇ ಆಕ್ಷೇಪಣೆಗಳು ತೆಗಿಯುತ್ತಾರಲ್ಲದೆ, ಅದರ ವಿವರೋತ್ತರವನ್ನು ಕೇಳಿ ಗ್ರಹಿಸ ಬೇಕೆಂಬದರಿಂದಲ್ಲ; ಹ್ಯಾಗಂದರೆ, ಅಂಥವರು ಆಕ್ಷೇಪಣೆಗಳನ್ನು ಕೇಳುವದಕ್ಕೆ ಮರಿಯದಿದ್ದರೂ, ಅದಕ್ಕೆ ಕೊಟ್ಟ ಉತ್ತರಗಳನ್ನು ಬೇಗ ಮರೆತು ಬಿಡುತ್ತಾರೆ. ಅವರು ಹುಡುಕುವದು ಉತ್ತರಗಳಲ್ಲ, ಆಕ್ಷೇಪಣೆಗಳೇ. ಅವರು ದೇವರ ವಾಕ್ಯವನ್ನು ಓದುವದು ಜ್ಞಾನ ಹೊಂದಲಿಕಲ್ಲ, ದೋಷ ಹುಡುಕಲಿಕ್ಕೇ. ಆದದರಿಂದ ಇಂಥವರಿಗೆ ಪ್ರತ್ಯಕ್ಷಾನುಭವಸತ್ಯ ಕೂಡ ಆಕ್ಷೇಪವಾಗಿ ಕಾಣುತ್ತದೆ. "ಅವರ ಬುದ್ಧಿ ಇಲ್ಲದ ಹೃದಯವು ಅಂಧಕಾರವಾಗುತ್ತದೆ." ಮತ್ತು ಅವರು ಸತ್ಯಕ್ಕೂ ಜ್ಞಾನಕ್ಕೂ ಮೂಢಾಂಧಕಾರಿಗಳಾಗಿ ಹೋಗುತ್ತಾರೆ.

ಆದರೆ ಯಥಾರ್ಥದಿಂದ ಸತ್ಯವನ್ನು ಹುಡುಕುವವರ ಸಂಗತಿ ಬೇರೆ. ಅವರು ಆಕ್ಷೇಪಗಳಲ್ಲ, ವಿವರವನ್ನು ಕೇಳುವದಕ್ಕೆ ಪ್ರೀತಿ ಪಡುತ್ತಾರೆ. ಅವರು ಸತ್ಯದ ಮೇಲೆ ಮಾತ್ರ ದೃಷ್ಟಿ ಇಡುತ್ತಾರೆ. ಆದದರಿಂದ ದೇವರು ಅವರನ್ನು ಸತ್ಯಕ್ಕೆ ನಡಿಸುತ್ತಾನೆ. ಅವರಿಗೆ ಹುಟ್ಟುವ ಸಂಶಯಗಳೆಲ್ಲ ದೇವರಿಂದ ಬಯಲಾಗುತ್ತವೆ. ಆದ್ದರಿಂದ ಸತ್ಯವಾಗಿರುವದನ್ನೆಲ್ಲ ಒಮ್ಮಿಂದೊಮ್ಮೆ ಅವರು ಆದರಿಸಿ ಕೊಂಡು ವಿಶ್ವಾಸಿಸುತ್ತಾರೆ.

ಆದರೆ ಯಾವನಾದರೂ ತನಗೆ ಹುಟ್ಟುವ ಸಂಶಯಗಳೆಲ್ಲ ಬಯಲಾಗುವ ತನಕ ಜ್ಞಾನ ಹುಟ್ಟಿ ವಿಶ್ವಾಸದ ಬೆಳಕು ಉದಯಿಸದು ಎಂದು ನೆನಸ ಕೂಡದು. ಯಾಕಂದರೆ ಅದು ಒಳಪ್ರವೇಶಿಸುವ ಮುಂಚೆ ಹೊಸ್ತಿಲಲ್ಲಿ ಅಡ್ಡಗಲ್ಲು ಹೊರಳಿಸಿದ ಹಾಗಾಗುವದು. ಕಠಿಣ ಸಂಶಯಗಳನ್ನೆಲ್ಲ ನಿವಾರಿಸೋಣಾಗಿ, ಆಕ್ಷೇಪಗಳು ನಿವೃತ್ತಿ ಪಡಿಸಿದ ಮೇಲೆ ಮಾತ್ರ ವಿಶ್ವಾಸಿಗಳಾದರೆಂಬ ಮನುಷ್ಯರ ದೃಷ್ಟಾಂತ ದೇವರ ವಾಕ್ಯದಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ. ಕ್ರಿಸ್ತನು ಯೆಹೂದ್ಯರಿಗೆ ಗಲಿಲಾಯದವನಾಗಿ ತೋರಿದನು. ಮತ್ತು ಇದು ಅವರಿಗೆ ನಿಜವಾದ ಆಕ್ಷೇಪವಾಗಿತ್ತು; ಯಾಕಂದರೆ, ಮೆಸ್ಸೀಯನು ಬೆತ್ಲೆಹೇಮ ಪಟ್ಟಣದಿಂದ ಬರುವನೆಂದು ಬರದದೆ. (ಯೋಹಾ. ೭, ೪೧. ೪೨. ಸರಿ ನೋಡು ಮಿಕ. ೫, ೨.) ಆದರೆ ಈ ವಿಶೇಷವಾಗಿರುವ ಆಕ್ಷೇಪವನ್ನು ಬಯಲು ಪಡಿಸುವದಕ್ಕೆ ಏನೂ ಪ್ರಸ್ತಾಪಿಸೋಣಾಗಲಿಲ್ಲ. ಯಾವ ಸಂಗತಿಯಿಂದಂದರೆ, ಯೇಸು ಕ್ರಿಸ್ತನು ತಮ್ಮ ಕಣ್ಣುಗಳ ಮುಂದೆ ಮಾಡಿದ

ಅದ್ಭುತಕಾರ್ಯಗಳು ನೋಡಿ ವಿಶ್ವಾಸಿಸದೆ ಇರುವವರು ಆತನ ಜನನಸ್ಥಾನದ ವಿಷಯ
ವಾಗಿ ಸಮಾಧಾನ ಪಟ್ಟರೂ ಇನ್ನೂ ಅಜ್ಞಾನಿಗಳಾಗಿಯೇ ಇರುತ್ತಿದ್ದರು. ಭಕ್ತನಾದ ನಥ
ನಯೇಲನು ನಜರೇತಿನ ಯೇಸುವಿನ ವಿಷಯ ಕೇಳಿ, ಅವನ ಊರನ್ನು ಕುರಿತು ಆಕ್ಷೇಪ
ತೆಗದು, "ನಜರೇತಿನಿಂದ ಏನೂ ಒಳ್ಳೇದಾಗ ಬಹುದೇ?" ಎಂದು ಆಶ್ಚರ್ಯದಿಂದ ಕೇಳಿದ
ನು. ಆದರೆ ಜ್ಞಾನದೃಷ್ಟಿ ಅವನ ಹೃದಯಕ್ಕೆ ಬರುವಂತೆ ಯೇಸುವು ಅವನನ್ನು ಎದುರಿ
ಸಿದಾಗ, ಆತನು ಬಂದ ಊರಿನ ನಿಜತ್ವವನ್ನು ಕುರಿತ ಆಕ್ಷೇಪದ ವಿವರಣೆ ಕೇಳ ನಿಲ್ಲ
ಲಿಲ್ಲ; ಆದರೆ ಹೃದಯದ ಪೂರ್ಣತೆಯಿಂದ, "ರಬ್ಬಿಯೇ! ನೀನು ದೇವರ ಮಗನಾಗಿದ್ದೀ!
ನೀನು ಇಸ್ರಯೇಲಿನ ಅರಸನಾಗಿದ್ದೀ!" ಎಂತ ಕೂಗಿದನು. ಈ ವಿಶ್ವಾಸದ ಅರಿಕೆಗೆ ರಕ್ಷ
ಕನು ಉತ್ತರ ಕೊಟ್ಟದ್ದೇನು "ನಾನು ನಿನ್ನನ್ನು ಇಪ್ಪೇ ಮರದ ಕೆಳಗೆ ನೋಡಿದೆನು ಎಂ
ದು ಹೇಳಿದರಿಂದ, ನಂಬುತ್ತೀಯೋ?" ನೀನು ಆಕ್ಷೇಪಗಳಿಗೆ ಅಂಟಿ ಕೊಳ್ಳದೆ, ಸಂಶಯಗ
ಳನ್ನು ನಿವೃತ್ತಿಸ ಕೇಳದೆ, ವಿಶ್ವಾಸಿಸಿದರಿಂದ—"ಇದಕ್ಕಿಂತ ದೊಡ್ಡವುಗಳನ್ನು ನೀನು ನೋ
ಡುವಿ"—ಪೂರ್ಣ ಅಪಾರವಾದ ನನ್ನ ಮಹಿಮೆಯ ಪ್ರತ್ಯಕ್ಷತೆಗಳಿಂದ ನೀನು ಪ್ರತಿಫಲ
ಹೊಂದುವಿ. ಈ ಪ್ರಕಾರ ನಥನಯೇಲನಿಗೆ ಆಯಿತು, ಮತ್ತು ಇದೇ ಪ್ರಕಾರ ನಿಷ್ಕ
ಳಂಕವಾದ ವಿಶ್ವಾಸವುಳ್ಳ ನಥನಯೇಲನ ಹೆಜ್ಜೆಗಳಲ್ಲಿ ನಡಿಯುವ ಪ್ರತಿ ಮನುಷ್ಯನಿಗೆ
ವಿಶ್ವಾಸದ ಭಾಗ್ಯ ಉಂಟಾಗುವದು. "ಯಾವ ಮನುಷ್ಯನಾದರೂ ಬೆಳಕಿನಲ್ಲಿ ನಡದ
ರೆ," ಅವನು ದೇವರ ಪರಿಶುದ್ಧ ವಾಕ್ಯವನ್ನು ಜಾಗ್ರತೆಯಿಂದಲೂ ದೈನ್ಯದಿಂದಲೂ ಪ್ರಾ
ರ್ಥನೆಯಿಂದಲೂ ನಿರಂತರ ವಿಧೇಯತ್ವದಿಂದಲೂ ಓದಿದರೆ—"ಅವನು ಬೀಳನು." ಅ
ವನ ಮಾರ್ಗದಲ್ಲಿ ಕುಯುಕ್ತಿಯ ಪ್ರಶ್ನೆಗಳೆಂಬ ಜಾರಿ ಬೀಳುವ ಮಳಲೂ, ಆಕ್ಷೇಪಣೆಗ
ಳೆಂಬ ಕಾಲ್ತಡೆದು ಬೀಳಿಸುವ ಬಂಡೆಗಳೂ ಇರುವದಿಲ್ಲ. ಅವನ ಜ್ಞಾನಕ್ಕೆ ಅವಶ್ಯವಾದ
ಈ ಎಲ್ಲಾ ಸಂಗತಿಗಳಲ್ಲಿ ಅವನು ಸತ್ಯದಿಂದ ನಡಿಸಲ್ಪಡುತ್ತಾನೆ. ಮತ್ತು ಅವನಿಂದ ಈಗ
ಅಡಗಿರುವ ಸಂಗತಿಗಳೆಲ್ಲ, ನಿತ್ಯತ್ವದ ಬೆಳಕು ಪ್ರಕಾಶ ಮಾನವಾಗಿ ಅವುಗಳ ಮೇಲೆ ಪ
ಸರಿಸಿ, ಪ್ರತ್ಯಕ್ಷವಾಗುವನಕ, ಸಾರ್ಥಕವಾಗಿ ನಿರೀಕ್ಷಿಸಿ ಕೊಂಡಿರ ಬಹುದಾಗಿರುತ್ತದೆ.

ವರ್ತಮಾನಗಳು.

ನಮ್ಮ ಸಭಾಪತ್ರದಲ್ಲಿ ಸಾಧಾರಣವಾಗಿ ಈ ಲೋಕರಾಜ್ಯದ ವೃತ್ತಾಂತವನ್ನು ವಿಶೇಷ
ಶೇರಿಸದಿದ್ದರೂ, ಒಂದೆರಡು ಸಂಗತಿಗಳು ತಿಳಿಸಲಿಕ್ಕೆ ಅವೆ; ಅವು ಅಲ್ಪ ಸ್ವಲ್ಪವಾಗಿ ಎ
ಲ್ಲರ ಗೊತ್ತಿಗೆ ಬಂದಿರ ಬಹುದು, ಮತ್ತು ಹೆಚ್ಚು ಕೇಳಲಿಕ್ಕೆ ಅಪೇಕ್ಷೆ ಇದ್ದೀತು. ನಮ್ಮ
ಮಿಶ್ಯನಿಗೆ "ಬಾಸೆಲ್ ಜರ್ಮನ್ ಮಿಶ್ಯನ್" ಎಂಬ ಹೆಸರು ಅದೆ, ಯಾಕಂದರೆ ಅದು ಬಾ
ಸೆಲ್ ಪಟ್ಣದಲ್ಲಿ ಸ್ಥಾಪಿತವಾದದ್ದಾದರೂ, ಹೆಚ್ಚಾದ ಮಿಶ್ಯನೆರಿಗಳು ಜರ್ಮನ್ ದೇಶದವ
ರು, ಅಲ್ಲಿಂದ ಹಣದ ಸಹಾಯ ಸಹಾ ಹೆಚ್ಚಾಗಿ ಬರುತ್ತದೆ. ಆದದರಿಂದ ಅಲ್ಲಿ ನಡೆ
ಯುವ ಯುದ್ಧ ನಮ್ಮೆಲ್ಲರಿಗೆ ಅಷ್ಟು ದೂರವಾದ ಸಂಗತಿಯಲ್ಲ. ಅದು ಫಕ್ಕನೆ ಎದ್ದಿತ್ತು.

ಜೂನ್ ತಿಂಗಳಲ್ಲಿ ಸಮಾಧಾನಕ್ಕೆ ಏನೂ ಅಪಾಯದ ಹೋಲುವೆ ತೋರಲಿಲ್ಲ; ಜುಲಾಯಿ ತಿಂಗಳಲ್ಲಿ ಫ್ರಾಂಚ ದೇಶದ ಮಹಾರಾಜನು ಒಂದು ನೆವನ ಹಿಡಿದು, ಜರ್ಮನಿಯ ಪ್ರುಸ್ಯರಾಜನ ಸಂಗಡ ಯುದ್ಧ ಮಾಡ ಬೇಕೆಂದು ನಿಶ್ಚಯಿಸಿದನು. ಅಗೊಸ್ತು ತಿಂಗಳ ಆರಂಭದಲ್ಲಿ ಉಭಯ ಪಕ್ಷದವರ ಸೇನೆಗಳು (ಒಟ್ಟು ಸುಮಾರು ೧೦ ಲಕ್ಷ ಜನ) ಪ್ರಾಂತ್ಯಗಳಲ್ಲಿ ಇಳಿದಿದ್ದವು. ೪ನೇ ಮತ್ತು ೬ನೇ ತಾರೀಕಿನಲ್ಲಿ ಜರ್ಮನಿಯವರು ಶತ್ರುವನ್ನು ೩ ಕಡೆಯಲ್ಲಿ ಜಯಿಸಿದರು. ಫ್ರಂಚರು ಹಿಂದಿರುಗಿ, ಒಂದು ಘಟ್ಟಿಯಾದ ಕೋಟೆಯ ಸಮೀಪದಲ್ಲಿ ಕಠಿಣವಾದ ೩ ದಿವಸದ ಲಡಾಯಿಯಲ್ಲಿ ತಿರಿಗಿ ಅಪಜಯವಾಗಿ, ಆ ಕೋಟೆಯನ್ನು ಹೊಕ್ಕ ಬೇಕಾಯಿತು. ಜರ್ಮನಿಯವರು ಅಲ್ಲಿ ತಕ್ಕಷ್ಟು ಬಲವುಳ್ಳ ಸೇನೆ ಬಿಟ್ಟು, ಮುಂದೆ ಹೋಗಿ, ಮತ್ತೊಂದು ಸೇನೆಗೆ ಲಡಾಯಿ ಕೊಟ್ಟು, ಗೆದ್ದು, ಮಹಾರಾಜನನ್ನೂ ೮೭೦೦೦ ಮಂದಿ ಸೋಲ್ಜರರನ್ನೂ ಶೆರೆಯಾಗಿ ಹಿಡಿದು, ಜರ್ಮನಿಗೆ ಕಳುಹಿಸಿದರು. ಜರ್ಮನಿಯವರು ಇನ್ನೂ ಮುಂದೆ ಹೋಗಿ, ಫ್ರಾಂಚ ರಾಜಧಾನಿಯ ಮುಂದೆ ಗಮಿಸಿ, ಈಗ ಅದನ್ನು ಎಲ್ಲ ಕಡೆಯಿಂದ ಮುತ್ತಿ ಕೊಂಡಿದ್ದಾರೆ. ಇನ್ನು ಬೇಗ ಸಮಾಧಾನ ಆದೀತೆಂಬ ಕೋರಿಕೆ ಉಂಟು. ಅದನ್ನು ದೇವರು ಕೊಡಲಿ! ಈ ಯುದ್ಧದಲ್ಲಿ ಕೋಟ್ಯಾನುಕೋಟಿ ರೂಪಾಯಿ ವೆಚ್ಚವಾದದ್ದಲ್ಲದೆ ಸತ್ತವರ ಮತ್ತು ಘಾಯವಾದವರ ಲೆಖ್ಖವು ಒಂದು ಲಕ್ಷಕ್ಕೆ ಕಡಿಮೆಯಾಗಲಿಕ್ಕಿಲ್ಲ. ಇಷ್ಟೆಲ್ಲ ಯಾತಕ್ಕೆ? ಫ್ರಾಂಚ ದೇಶದವರು ಹೊಟ್ಟೆಕಿಚ್ಚಿನಿಂದ ಯುದ್ಧ ತೊಡಗಿದದರಿಂದಲೇ. ಯಾಕಂದರೆ ಜರ್ಮನಿ ರಾಜ್ಯವು ಬಹಳ ಬಲವಾಗುತ್ತಾಬಂತು. ಜರ್ಮನಿಯವರು ತಮ್ಮ ದೇಶವನ್ನು ಕಾಪಾಡುವ ಉದ್ದಿಶ್ಯ ಯುದ್ಧಕ್ಕೆ ಹೋಗ ಬೇಕಾಯಿತು. ಯುದ್ಧದ ಆರಂಭದಲ್ಲಿ ಅವರು ಒಂದು ದಿವಸವನ್ನು ಪ್ರತ್ಯೇಕಿಸಿ, ಕೆಲಸವೆಲ್ಲ ಬಿಟ್ಟು, ಪ್ರಾರ್ಥನೆ ಮಾಡಿದರು. ಆದರೆ ಅವರ ಶತ್ರುಗಳು ಮರೀಯಳಿಗೆ ಪೂಜೆ ಮಾಡಿದರು. ಫ್ರೆಂಚರ ಆಲೋಚನೆ ಇದೇ: ನಾವು ಜರ್ಮನಿ ದೇಶವನ್ನು ಹೊಕ್ಕು, ಅಲ್ಲಿಯ ರಾಜ್ಯಕಾರ್ಯಗಳನ್ನು ನಮಗೆ ಸಮ ತೋರುವ ಪ್ರಕಾರ ಸ್ಥಾಪಿಸಿ, ನಮ್ಮ ಕಷ್ಟಕ್ಕಾಗಿ ಜರ್ಮನ್ ದೇಶದ ಒಂದು ಭಾಗ ತಮ್ಮ ದೇಶಕ್ಕೆ ಶೇರಿಸಿ ಕೊಳ್ಳ ಬೇಕೆಂಬುವದೇ. ಆದರೂ ಇದು ದೇವರ ಚಿತ್ತವಾಗಿರಲಿಲ್ಲ. ಜರ್ಮನ್ ಸೇನೆಯವರು ಬಹು ಧೈರ್ಯದಿಂದಲೂ ಹಟದಿಂದಲೂ ಕಾದಿ ಕೊಂಡು, ಜಯದಿಂದ ಜಯಕ್ಕೆ ಹೋಗಿ, ಹೇಳಿದ ಪ್ರಕಾರ, ಈಗ ರಾಜಧಾನಿಯ ಮುಂದೆ ಇದ್ದಾರೆ.

ಮತ್ತೊಂದು ಸಂಗತಿ ಉಂಟು. ಇವೆರಡರ ಸಂಬಂಧ ಬುದ್ಧಿಯುಳ್ಳ ಓದುವವರು ತಾವೇ ಕಂಡು ಕೊಳ್ಳಲಿ.

ರೋಮಪುರದಲ್ಲಿ ದಶಂಬರ್ ತಿಂಗಳಾರಭ್ಯ ಒಂದು ಮಹಾ "ಕಮಿಟೆ" ಅಂದರೆ ರೋಮಾಯ ಅಧ್ಯಕ್ಷರ ಕೂಟ ಕೂಡಿತ್ತು. ಭೂಲೋಕದಲ್ಲಿರುವ ಸಮಸ್ತ ಅಧ್ಯಕ್ಷರು ಬರ ಬೇಕು ಎಂಬ ಅಪ್ಪಣೆ ಆಗಿತ್ತು. ಸುಮಾರು ೭೫೦ ಮಂದಿ ಬಂದು ಕೂಡಿದ್ದರು. ಅವರು ಸಭೆಯನ್ನು ನಡಿಸುವ ವಿಷಯ ಬೇರೆ ಬೇರೆ ಕಾನೂನು ಕಟ್ಟಳೆಗಳನ್ನು ರಚಿಸಿ, ಕಡೆಗೆ ಒಂದು ವಿಪರೀತವಾದ ನಿರ್ಣಯ ಮಾಡಿದರು, ಏನಂದರೆ: ಪೋಪನು ಯೇಸು ಕ್ರಿಸ್ತನ

ಪ್ರತಿನಿಧಿ ಆಗಿ, ತಾನು ಮತದ ಮತ್ತು ನೀತಿಯ ವಿಷಯ ಯಾವ ಬೋಧನೆ ಕೊಟ್ಟು ಯಾವ ಕ್ರಮಗಳನ್ನು ಸ್ಥಾಪಿಸುತ್ತಾನೋ, ಅದರಲ್ಲಿ ಅವನು ತಪ್ಪಿಲ್ಲದವನೇ; ಮತ್ತು ಅಂಥಾ ಬೋಧನೆಗೆ ಸಂಶಯ ಮಾಡುವವರು ಪಾಷಂಡಿಗಳೂ ಶಪಿಸಲ್ಪಟ್ಟವರೂ ಆಗಿದ್ದಾರೆ ಎಂಬದು. ಇದು ವರೆಗೆ ಸರ್ವವಿಶ್ವಾಸಿಕ ಬೋಧನೆ ಸ್ಥಾಪಿಸ ಬೇಕಾದರೆ, ಸಮಸ್ತ ಸಭೆಯ ಅಂದರೆ ಅದರ ಎಲ್ಲ ಅಧ್ಯಕ್ಷರ ಸಮ್ಮತಿ ಇಲ್ಲದೆ ಆಗುತ್ತಿದ್ದಿಲ್ಲ. ಮೇಲಿನ ಕಾನೂನನ್ನು ರೋಮಪುರದ ಮಹಾ ದೇವಾಲಯದಲ್ಲಿ ಸಭೆಯವರಿಗೆ ಪ್ರಕಟಿಸುವ ಸಮಯದಲ್ಲಿ ಅಘೋರ ಮಿಂಚು ಗುಡುಗು ಆಗಿ ಬಿರುಘಾಳಿ ಬೀಸುತ್ತಿತ್ತು. ಅದೇ ವಾರದಲ್ಲಿ ಫ್ರೆಂಚ ಮಹಾ ರಾಜನು ಯುದ್ಧಕ್ಕೆ ಹೋಗುವದಕ್ಕೆ ನಿಶ್ಚೈಸಿ, ತಾನು ಪೋಪನ ಭದ್ರತೆಗಾಗಿ ಇಪ್ಪತ್ತು ವರುಷಗಳಿಂದ ರೋಮಪುರದಲ್ಲಿಟ್ಟ ಕೆಲವು ಪಟಾಲಮುಗಳನ್ನು ಹಿಂದೆ ಕರಿಸಿದನು. ೨ ತಿಂಗಳಿನ ಮೇಲೆ ಒಂದೇ ವಾರದಲ್ಲಿ ಜರ್ಮನಿಯ ಸೇನೆಗಳು ಪರೀಸ್ ಎಂಬ ರಾಜಧಾನಿಯನ್ನೂ ಇತಲಿ ರಾಜ್ಯದ ಸೇನೆ ರೋಮಪುರವನ್ನೂ ಮುತ್ತಿ ಕೊಂಡಿದ್ದಾರೆ. ಇತ್ತಲಾಗಿ ಇವರು ರೋಮಪುರವನ್ನು ವಶ ಮಾಡಿ ಕೊಂಡು, ಪೋಪನಿಂದ ಅರಸುತನ ತೆಗದು, ಅವನಿಗೆ ಗುರುತನ ಮಾತ್ರ ಬಿಟ್ಟರು.

ನನ್ನ ಮಹಿಮೆಯನ್ನು ನಾನು ಮತ್ತೊಬ್ಬನಿಗೆ ಕೊಡುವದಿಲ್ಲವೆಂದು, ಯೆಹೋವನು ಹೇಳುತ್ತಾನೆ. ಯೆಶಾ. ೪೮, ೧೧.

ಮಂಗಳೂರಲ್ಲಿ ೮ನೇ ತಾರೀಕಿನಲ್ಲಿ ಮಿಶ್ಶನ್ ಹಬ್ಬವಿತ್ತು. ನಾವು ಹೀಗೆ ಸಮಾಧಾನದಿಂದ ಹಬ್ಬವನ್ನಾಚರಿಸಿ ಕರ್ತನಿಗೆ ಆತನ ಎಲ್ಲಾ ಒಳ್ಳೇತನಕ್ಕಾಗಿ ಸ್ತುತಿಸಲಿಕ್ಕಾಗುವಂಥಾದ್ದು ದೊಡ್ಡ ದಯ.

ಬಾಸೆಲ್ ಪಟ್ಣದಲ್ಲಿ ಸಹ ಜೂನ್ ೨೯ನೇ, ೩೦ನೇ ತಾರೀಕುಗಳಲ್ಲಿ ಮಿಶ್ಶನ್ ಹಬ್ಬವಿತ್ತು. ೩೦ನೇಯಲ್ಲಿ ಯೋಸೆನ್‌ಹನ್ಸ್ ಧೊರೆ ದೇವಾಲಯಕ್ಕೆ ಹೋಗುವ ಅರ್ಧ ತಾಸು ಮುಂಚೆ, ಅಫ್ರಿಕದಿಂದ ಒಂದು ಕಾಗದ ಬಂದು ಮುಟ್ಟಿತು. ಅದರಲ್ಲಿ ಹೋದ ವರುಷ ಶತ್ರುಗಳು ಶೆರೆ ಹಿಡಿದು ಪರದೇಶಕ್ಕೆ ವೈದು ಕೊಂಡು ಹೋದ ನಮ್ಮ ಮಿಶನೆರಿಗಳ ವಿಷಯ ಮೊದಲನೇ ಸರ್ತಿ ನಿಜ ವರ್ತಮಾನ ಇತ್ತು. ಏನಂದರೆ: ಅವರು ಬದುಕುತ್ತಾರೆ, ಮತ್ತು ಸುಮಾರು ಸೌಖ್ಯದಲ್ಲಿ ಸಹ ಇದ್ದಾರೆ ಎಂಬದು. ಇದನ್ನವರು ಆ ಮಹಾ ಕೂಟಕ್ಕೆ ತಿಳಿಸುವಾಗ, ಸಭೆಯೊಳಗೆ ಆಶ್ಚರ್ಯವೂ ಸಂತೋಷವೂ ಉಂಟಾಯಿತು. ಹೆಚ್ಚಾದವರು ಆನಂದಬಾಷ್ಪ ಸುರಿದು, ಎಲ್ಲರೂ ಎದ್ದು ಏಕ ಮನಸ್ಸಾಗಿ ಕರ್ತನಿಗೆ ಸ್ತೋತ್ರ ಮಾಡಿದರು.

Printed by Stolz & Reuther, Basel Mission Press, Mangalore.

ಸಭಾ ಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. OCTOBER 1870. ಅಂಕೆ ೪.

ಕೊಲೊ. ೧, ೯—೧೪.

ಅಪೊಸ್ತಲನಾದ ಪೌಲನು ರೋಮಾಯರಿಗೆ ಬರದ ಪತ್ರಿಕೆಯ ೫ನೇ ಸಂಧಿಯಲ್ಲಿ—"ಒಬ್ಬ ಮನುಷ್ಯನಿಂದ ಪಾಪವೂ, ಪಾಪದಿಂದ ಮರಣವೂ, ಲೋಕದಲ್ಲಿ ಪ್ರವೇಶಿಸಿ, ಎಲ್ಲರು ಪಾಪ ಮಾಡಿದ್ದಲ್ಲಿ, ಮರಣವು ಎಲ್ಲರ ಮೇಲೆ ವ್ಯಾಪಿಸಿದ ಹಾಗೆಯೇ—ಒಬ್ಬನ ನೀತಿಯಿಂದ ಎಲ್ಲಾ ಮನುಷ್ಯರಿಗೆ ಜೀವದ ನೀತಿನಿರ್ಣಯವು ಉಂಟಾಯಿತು" ಎಂದು ಬೋಧಿಸುತ್ತಾನೆ.

ಪ್ರಿಯರೇ, ನೀವು ಈಗ ಕೇಳಿದ ನಮ್ಮ ಪತ್ರಿಕೆಯಲ್ಲಿ ಅಪೊಸ್ತಲನು ಜೀವದ ನೀತಿನಿರ್ಣಯದ ಸಂಗತಿಯನ್ನು ಹೆಚ್ಚಾಗಿ ವಿವರಿಸಿ, ಈ ಮಹಾ ಕೃಪೆಯು ಪಾಪಿಗಳಾದ ನಮಗೆ ಹ್ಯಾಗೆ ಪ್ರಾಪ್ತವಾಯಿತೆಂದೂ, ಮರಣವು ಇಂದಿನ ವರೆಗೂ ನಮ್ಮ ಮೇಲೆ ಬಿದ್ದರೂ ಸಾಯದೆ ನಿತ್ಯವಾಗಿ ಬದುಕುವ ಪದವಿಯನ್ನು ಹೊಂದುವ ಮಾರ್ಗ ಯಾವದೆಂದೂ ತೋರಿಸುತ್ತಾನೆ. ಈ ಸ್ಥಳದಲ್ಲಿ ಪೌಲನು—ತಾವು ಬಡ ಪಾಪಿಗಳಾಗಿರುವದರಿಂದ ಪರಲೋಕರಾಜ್ಯದ ವಾಗ್ದತ್ತವು ತಮಗೆ ಕೊಟ್ಟಿರುವದಿಲ್ಲವೆಂದೂ, ಭಕ್ತರಾದ ಪರಿಶುದ್ಧ ಮನುಷ್ಯರೇ ಅದನ್ನು ಹೊಂದಲಿಕ್ಕೆ ಯೋಗ್ಯರಾಗಿದ್ದಾರೆಂದೂ, ನೆನಸುವ ಜನರ ಭಾವನೆಯನ್ನು ನಿರಾಕರಿಸುತ್ತಾನೆ. ಈ ಭಾವನೆ ದೇವರ ಸುವಾರ್ತೆಗೆ ಪ್ರತಿಕೂಲವಾಗಿದೆ. ನಾಚಿಕೆ ಇಲ್ಲದ, ಪಶ್ಚಾತ್ತಾಪ ಪಡಲೊಲ್ಲದ ಪಾಪಿಗಳು ಸಾಯುವ ಪರಿಯಂತರ ಮಾನಸಾಂತರವಾಗದೆ ಹೋದರೆ, ಪರಲೋಕರಾಜ್ಯವನ್ನು ಪಡೆದು ಕೊಳ್ಳಲಾರರೆಂದು ಸ್ಪಷ್ಟವಾಗಿ ಬರದದೆ ಸರಿ. ಆದರೆ ಮಾನಸಾಂತರವಾಗುವ ಪಾಪಿಗಳಿಗೆ ಪರಲೋಕರಾಜ್ಯದ ಬಾಧ್ಯತೆಯುಂಟೆಂದು ಬಹಳ ದೃಢವಾಗಿ ಅನೇಕ ಸ್ಥಳಗಳಲ್ಲಿ ಹೇಳಿಯದೆ. ಕರ್ತನು ತಾನು ಹೇಳಿದ್ದೇನಂದರೆ: "ನಿತಿವಂತರನ್ನಲ್ಲಾ, ಪಾಪಿಗಳನ್ನು ಮಾನಸಾಂತರಕ್ಕೆ ಕರೆಯ ಬಂದೆನು."

ಮತ್ತು ಅಪೊಸ್ತಲನಾದ ಪೌಲನು "ಪಾಪಿಗಳನ್ನು ರಕ್ಷಿಸುವದಕ್ಕೆ ಕ್ರಿಸ್ತ ಯೇಸು ಲೋಕಕ್ಕೆ ಬಂದನೆಂಬುವದು ಎಲ್ಲರು ಅಂಗೀಕರಿಸ ತಕ್ಕ ಪೂರ್ಣವಾಗಿ ನಂಬಿಕೆಯುಳ್ಳ ಮಾತಾಗಿದೆ" ಎಂದು, ಬರೆಯುತ್ತಾನೆ. ಆದದರಿಂದ ದೇವರು ತನ್ನ ಪರಲೋಕರಾಜ್ಯದ ವಿಷಯವಾಗಿ ನಮಗೆ ಕೊಟ್ಟ ವಾಕ್ಯವನ್ನು ಅನುಭವಿಸಿ ಕೊಳ್ಳ ಬೇಕಾದರೆ, ಪಾಪಗಳನ್ನು ಬಿಟ್ಟುಬಿಟ್ಟು ಮಾನಸಾಂತರ ಪಡುವದಕ್ಕೆ ಹೃದಯಪೂರ್ವಕವಾಗಿ ಯತ್ನ ಮಾಡ ಬೇಕು.

ಆದರೆ ಈಗ ಮಾನಸಾಂತರವಾದ ಪಾಪಿ ಸಾಯುವಲ್ಲಿ ಸತ್ತು ಹೋಗದೆ ಮರಣಕ್ಕೆ ಬಿಡುಗಡೆಯಾಗುವ ಉಪಕಾರದ ಮೂಲವೇನೆಂದು, ಕೇಳಿರಿ. ಅಪೊಸ್ತಲನಾದ ಪೌಲನು ಹೇಳುವದೇನಂದರೆ: "ಬೆಳಕಿನಲ್ಲಿರುವ ಪರಿಶುದ್ಧರ ಭಾಧ್ಯತೆಯ ಭಾಗಕ್ಕಾಗಿ ನಮ್ಮನ್ನು ಸಿದ್ಧ ಮಾಡಿದ ತಂದೆಗೆ ಸ್ತೋತ್ರ ಮಾಡಿರಿ; ಅವನು ಅಂಧಕಾರದ ಅಧಿಕಾರದೊಳಗಿಂದ ನಮ್ಮನ್ನು ತಪ್ಪಿಸಿ ತನ್ನ ಪ್ರೀತಿಯ ಮಗನ ರಾಜ್ಯದೊಳಗೆ ತಂದಿಟ್ಟದ್ದಾನೆ." ಇಲ್ಲಿ ಮುಖ್ಯವಾಗಿ ಗ್ರಹಿಸಿ ಕೊಳ್ಳ ತಕ್ಕದ್ದೇನಂದರೆ: " ನಮ್ಮನ್ನು ಸಿದ್ಧ ಮಾಡಿದ" ಎಂಬ ಮಾತು ಯಾರಿಗೆ ಒಪ್ಪುತ್ತದೆ? ಮತ್ತು "ನಮ್ಮನ್ನು ತಪ್ಪಿಸಿ" ಎಂಬ ಮಾತು ಯಾರ ವಿಷಯವಾಗಿ ಬರದದೆ? ಅಪೊಸ್ತಲನಾದ ಪೌಲನು ಇಲ್ಲಿ ತಾನು ಮುಂತಾದ ಅಪೊಸ್ತಲರ ಅಥವಾ ಪ್ರವಾದಿಗಳ ವಿಷಯವಾಗಿ ಮಾತಾಡದೆ, ಯೇಸು ಕ್ರಿಸ್ತನನ್ನು ನಂಬುವ ಮಾನಸಾಂತರವಾದ ಪಾಪಿಗಳೆಲ್ಲರ ವಿಷಯವಾಗಿ ಮಾತಾಡುತ್ತಾನೆ. ಯಾಕಂದರೆ ಇಂದಿನ ಸುವಾರ್ತೆಯು ಅಪೊಸ್ತಲರ ಮತ್ತು ಪ್ರವಾದಿಗಳ ಪ್ರಯೋಜನಕ್ಕೆ ಮಾತ್ರವಲ್ಲ ಪಾಪಿಗಳ ಸಮೂಹದೊಳಗಿಂದ ಕೂಡಿಸಿದಂಥ ಸರ್ವ ಕ್ರೈಸ್ತಸಭೆಯ ಪ್ರಯೋಜನಕ್ಕಾಗಿ ಯೇಸು ಕ್ರಿಸ್ತನ ಕೃಪೆಯನ್ನು ವರ್ಣಿಸುತ್ತದೆ. ಹೀಗಿರಲಾಗಿ ಅಪೊಸ್ತಲನಾದ ಯೋಹಾನನು ಯೇಸು ಕ್ರಿಸ್ತನು ನಮ್ಮ ಪಾಪಕ್ಕಾಗಿ, ನಮ್ಮ ಪಾಪಕ್ಕಾಗಿ ಮಾತ್ರವಲ್ಲಾ, ಸಮಸ್ತ ಲೋಕದ್ದಕ್ಕಾಗಿಯೂ ಕೃಪಾಸನವಾಗಿದ್ದಾನೆ ಎಂದು ಹೇಳುತ್ತಾನೆ. ಮತ್ತು ಕ್ರಿಸ್ತನು ತನ್ನ ಪ್ರಧಾನ ಯಾಜಕ ಪ್ರಾರ್ಥನೆಯಲ್ಲಿ: "ಆದರೆ ಇವರಿಗಾಗಿ (ಅಂದರೆ ಅಪೊಸ್ತಲರಿಗಾಗಿ) ಮಾತ್ರವಲ್ಲಾ, ಅವರ ವಾಕ್ಯದ ಮೂಲವಾಗಿ ನನ್ನನ್ನು ನಂಬ ತಕ್ಕವರಿಗಾಗಿಯೂ ಬಿನ್ನಹ ಮಾಡುತ್ತೇನೆ ಎಂದು ಹೇಳುತ್ತಾನೆ."

ಇದಲ್ಲದೆ ಅಪೊಸ್ತಲನಾದ ಪೌಲನು ಹೇಳುವ ಅಂಧಕಾರದ ಅಧಿಕಾರವೇನೆಂದೂ, ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆ ಏನೆಂದೂ ಕಲಿತು ಕೊಳ್ಳ ಬೇಕು. ಇಲ್ಲಿ ಹೇಳಿರುವ ಅಂಧಕಾರವು ಎಂಬುವದಕ್ಕೆ ರಾತ್ರಿಯ ಮೊಬ್ಬೊ ಕತ್ತಲೂ ಎಂಬ ಅರ್ಥವಿಲ್ಲ. ಅದರ ಅಭಿಪ್ರಾಯ ಮೂರು ವಿಧವಾದದ್ದು: ೧. ಸಂತೋಷವೆಂಬ ಬೆಳಕು ಕಾಣದಂಥ ಉಪದ್ರ ಶೋಧನೆಗಳ ಸ್ಥಿತಿ ಒಂದು ಪ್ರಕಾರದ ಅಂಧಕಾರವಾಗಿದೆ. ೨. ಮರಣದ ಸ್ಥಿತಿಯು ಸಹ ಅಂಧಕಾರವಾಗಿದೆ; ಯಾಕಂದರೆ ಮರಣದ ಗುಣ ಭಾವಗಳನ್ನು ನೋಡಿದರೆ, ಬೆಳಕು ಎಷ್ಟು ಮಾತ್ರ ಕಾಣದೆ ಅಂಧಕಾರವೇ ಕಾಣುತ್ತದೆ. ೩. ಸೈತಾನನೂ ನರಕವೂ ಅಂಧಕಾರವಾಗಿವೆ; ಯಾಕಂದರೆ ಆ ಪಕ್ಷದವರಿಗೆ ಸಹಾಯವೂ ರಕ್ಷಣೆಯೂ ಎಂದಿಗೂ ದೊರಕುವದಿಲ್ಲ.--ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆ ಏನಂದರೆ: ನಮ್ಮ ಕರ್ತನಾದ ಯೇಸು

ಕ್ರಿಸ್ತನ ನಿರಂತರವಾದ ರಾಜ್ಯವು. ಅದು ಉಪದ್ರ ಮರಣ ನಾಶನ ಮುಂತಾದದ್ದೊಂದೂ
ಇಲ್ಲದೆ ಮಂಗಳ ಕ್ಷೇಮ ಜೀವಮಯವಾಗಿದೆ. ನಾವು ಕ್ರಿಸ್ತನನ್ನು ನಂಬಿದರೆ, ತಂದೆಯಾ
ದ ದೇವರು ಉಪದ್ರ ಮರಣ ಸೈತಾನ ನಿತ್ಯ ಆಜ್ಞೆನಿರ್ಣಯಗಳೆಂಬ ಅಂಧಕಾರದ ಬಲ
ಕ್ಕೆಲ್ಲಾ ನಮ್ಮನ್ನು ತಪ್ಪಿಸಿ, ತನ್ನ ಪ್ರೀತಿಯ ಮಗನ ರಾಜ್ಯದಲ್ಲಿ ತಂದಿಡುತ್ತಾನೆ. ಯಾಕಂ
ದರೆ ನಮಗೆ ನಷ್ಟ ಮಾಡದ ಹಾಗೆ ಉಪದ್ರಕ್ಕೂ, ನಮ್ಮನ್ನು ಕೊಲ್ಲದ ಹಾಗೆ ಮರಣಕ್ಕೂ
ಅಡ್ಡಿ ಮಾಡಲಿಕ್ಕೆ ಶಕ್ತನಾಗಿದ್ದು ಸೈತಾನನಿಗೂ ಆಜ್ಞೆನಿರ್ಣಯಕ್ಕೂ ನಮ್ಮ ಮೇಲೆ ಅಧಿಕಾ
ರವಿರ ಗೊಡಿಸದೆ ಅದಕ್ಕೆಲ್ಲಾ ನಮ್ಮನ್ನು ತಪ್ಪಿಸಿ ನಮಗೆ ನಿರಂತರವಾದ ಭಾಗ್ಯವನ್ನು ಕೊ
ಡಲಿಕ್ಕೆ ಮನಸ್ಸಾಗಿದ್ದಾನೆ.

ಈ ಮಹಾ ಉಪಕಾರವು ತಂದೆಯಾದ ದೇವರಿಂದ ನಮಗೆ ಸಿಕ್ಕಿದ್ದು ಹ್ಯಾಗೆ? ಯಾ
ವ ಪುಣ್ಯದಿಂದ ಅದನ್ನು ಪಡೆದು ಕೊಂಡೆವು? ಈ ಪ್ರಶ್ನೆಗಳಿಗೆ ಅಪೊಸ್ತಲನಾದ ಪೌಲನು
ಹೇಳುವದೇನಂದರೆ: “ಇವನಲ್ಲಿ ಅವನ ರಕ್ತದಿಂದಾಗುವ ವಿಮೋಚನೆಯಾದ
ಪಾಪಗಳ ಪರಿಹಾರವು ನಮಗೆ ಉಂಟು.” ಈ ಮಾತಿನಿಂದ ಅಂಧಕಾರದ ಅಧಿಕಾ
ರಕ್ಕೆ ನಮ್ಮನ್ನು ತಪ್ಪಿಸುವ ದೇವರ ಉಪಕಾರವು ನಮ್ಮ ಪುಣ್ಯದ ಫಲವಲ್ಲವೆಂದು ತಿ
ಳುಕೊಳ್ಳುತ್ತೇವೆ. ಓ ಕರ್ತನೇ, ನೀನು ಪಾಪವನ್ನು ನಮ್ಮಲ್ಲಿ ಹಿಡಿಯ ಬೇಕೆಂದಿದ್ದರೆ,
ನಿನ್ನ ಮುಂದೆ ನಿಲ್ಲ ತಕ್ಕವರು ಯಾರು, ಕರ್ತನೇ? ಎಂದು ದಾವೀದನು ಹೇಳಿದ್ದು ನಮಗೆ
ಸರಿ ಬೀಳುತ್ತದೆ. ಮುಕ್ತರಾದ ಸಿದ್ಧರಲ್ಲಿ ಯಾರೊಬ್ಬನೂ ಈ ಉಪಕಾರವನ್ನು ಕರ್ತನಾ
ದ ದೇವರ ಕಡೆಯಿಂದ ನಮಗಾಗಿ ಪಡಕೊಂಡನೆಂಬುವದಕ್ಕೆ ಸಹ ಏನೂ ಆಸ್ಪದವಿಲ್ಲ.
ನಮ್ಮ ಕರ್ತನಾದ ಯೇಸು ಕ್ರಿಸ್ತನು ಒಬ್ಬನೇ ಅದನ್ನು ನಮಗಾಗಿ ಪಡ ಕೊಂಡಿ
ದ್ದಾನೆ. ಆತನೊಬ್ಬನ ಮೂಲಕದಿಂದಲೇ ನಮಗೆ ವಿಮೋಚನೆಯುಂಟಾಯಿತು. ಆದರೆ
ಕ್ರಿಸ್ತನು ಅದನ್ನು ಹ್ಯಾಗೆ ಪಡ ಕೊಂಡನು? “ತನ್ನ ರಕ್ತದಿಂದ” ಎಂದು ಪೌಲನು ಹೇ
ಳುತ್ತಾನೆ. ಹಾಗಾದರೆ ಆತನು ನಮ್ಮ ರಕ್ಷಣೆಗಾಗಿ ದೊಡ್ಡ ಬೆಲೆ ಕೊಟ್ಟನು! ಬೆಳ್ಳಿಯಿಂದ
ಲೂ ಹೊನ್ನಿನಿಂದಲೂ ಈ ಉಪಕಾರವನ್ನು ನಮಗಾಗಿ ಸಂಪಾದಿಸಲಿಲ್ಲ. ಸುಖಕ್ಷೇಮ
ವಾಗಿ ಬದುಕಿ ಅದನ್ನು ಪಡಕೊಳ್ಳಲಿಲ್ಲ. ತನ್ನ ದೇಹವನ್ನೂ ಜೀವವನ್ನೂ ಕೊಟ್ಟು ತನ್ನ
ರಕ್ತವನ್ನು ಚಲ್ಲಿ ನಮಗೆ ವಿಮೋಚನೆ ಮಾಡಿದ್ದಾನೆ. ತನ್ನ ರಕ್ತವನ್ನು ಚೆಲ್ಲಿ ತನ್ನ ರಕ್ತದಿಂ
ದ ನಮ್ಮ ಪಾಪವನ್ನು ಅಳಿಸಿ, ಇನ್ನು ಮುಂದೆ ನಾವು ಅಂಧಕಾರದ ಅಧಿಕಾರಕ್ಕೊಳಗಾ
ಗಿರದ ಹಾಗೆ ನಮ್ಮನ್ನು ಬಿಡುಗಡೆ ಮಾಡಿದ್ದಾನೆ.

ಪಾಪಕ್ಕೆ ವಿಮೋಚನೆಯೂ ಕ್ಷಮೆಯೂ ಉಂಟಾದ ಮೇಲೆ ಮನುಷ್ಯನಿಗೆ ನಷ್ಟಕರ
ವಾದ ಪಾಪಫಲವೆಲ್ಲಾ ಮುಗಿದು ಹೋದ ಕಾರಣ ಪಾಪಿಯು ನಾಶನ ಹೋಗುವ ಹಂಗಿ
ನಲ್ಲಿರದೆ ರಕ್ಷಣೆಗೂ ಮಹಿಮೆಗೂ ಬಾಧ್ಯಸ್ಥನಾಗಿದ್ದಾನೆ.

ಪಾಪವು ಆದಿಯಲ್ಲಿ ನಷ್ಟ ಶಾಪಗಳಿಗೆಲ್ಲಾ ಕಾರಣವಾಯಿತು; ಯಾಕಂದರೆ ಕರ್ತ
ನಾದ ದೇವರು ಆದಮನಿಗೆ—“ನೀನು ನಿನ್ನ ಹೆಂಡತಿಯ ಮಾತು ಕೇಳಿ, ತಿನ್ನ ಬಾರದೆಂದು
ನಾನು ನಿನಗೆ ಆಜ್ಞಾಪಿಸಿದ ಮರದ ಫಲ ತಿಂದ ಕಾರಣ, ನಿನಗೋಸ್ಕರ ಭೂಮಿ ಶಪಿಸ

ಲ್ಪಟ್ಟದ್ದಾಗಿರಲಿ. ನಿನ್ನ ಜೀವದ ದಿವಸಗಳೆಲ್ಲಾ ಸಂಕಟ ಪಟ್ಟು, ಅದರ ಫಲ ತಿನ್ನುವಿ. ಮತ್ತು ಮುಳ್ಳುಗಳನ್ನೂ ದತ್ತೂರಿಗಳನ್ನೂ ನಿನಗೆ ಮೊಳಿಸುವದು" ಎಂದು ಹೇಳಿದನು. ಇದಲ್ಲದೆ ಪಾಪವು ಮರಣಕ್ಕೆ ಸಹ ಕಾರಣವಾಯಿತು; ಯಾಕಂದರೆ ದೇವರು ಮತ್ತು ಆದಮನಿಗೆ—"ಮಣ್ಣಿಗೆ ತಿರುಗುವನಕಾ ನಿನ್ನ ಮುಖದ ಬೆವರಿನಿಂದ ರೊಟ್ಟಿ ತಿನ್ನುವಿ; ಯಾಕಂದರೆ ಅದರೊಳಗಿಂದ ತೆಗಿಯಲ್ಪಟ್ಟಿ. ನೀನು ಮಣ್ಣು; ಮಣ್ಣಿಗೆ ತಿರುಗುವಿ" ಎಂದು ಹೇಳಿದನು. ಮರಣವು ಪಾಪದ ನಿಮಿತ್ತವಾಗಿಯೇ ನಿತ್ಯ ಆಜ್ಞೆನಿರ್ಣಯಕ್ಕೆ ಆರಂಭವಾಗಿದೆ. ಆದದರಿಂದ ಪಾಪ ಪರಿಹಾರವಾದರೆ, ಆಜ್ಞೆನಿರ್ಣಯವಿಲ್ಲದ ಕಾರಣ ನಮ್ಮ ಪಾಪ ವಿಮೋಚನೆಗಾಗಿ ತನ್ನ ಜೀವವನ್ನು ಕೊಟ್ಟು ತನ್ನ ರಕ್ತವನ್ನು ಚೆಲ್ಲಿದ ಯೇಸು ಕ್ರಿಸ್ತನನ್ನು ನಂಬುವವರು ಮರಣಕ್ಕೆ ಭಯ ಪಡ ಕೆಲಸವಿಲ್ಲ. ಯಾಕಂದರೆ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಪಾಪಪರಿಹಾರವನ್ನು ಹೊಂದಿದವರ ಪಕ್ಷದಲ್ಲಿ ಶಾಪ ಮರಣಗಳ ವಿಷವು ಕಳದು ಹೋಗಿರಲಾಗಿ, ಅವಿಶ್ವಾಸಿಗಳಿಗೆ ನಷ್ಟಕರವಾದ ನ್ಯಾಯಪ್ರಮಾಣದ ಶಿಕ್ಷೆಯು ಯೇಸುವನ್ನು ನಂಬುವ ಭಕ್ತರಿಗೆ ಅಮೃತಸಂಜೀವನವೂ ನಿರಂತರವಾದ ಜೀವ ಮಹಿಮೆಗಳ ದ್ವಾರವೂ ಆಗುತ್ತದೆ. ಈ ಪದವಿಯನ್ನು ಹೊಂದಲಿಕ್ಕೆ ದೇವರು ನಮ್ಮೆಲ್ಲರಿಗೆ ಕೃಪೆಯನ್ನು ಕೊಡಲಿ! ಆಮೆನ್.

ಕ್ಷಮೆಯು.

೧೭ನೇ ಶತಮಾನದ ಅಂತ್ಯದಲ್ಲಿ ತುರ್ಕರ ಪಡೆಯ ಒಬ್ಬ ಮಹಮ್ಮದಿ ಮುಖ್ಯಸ್ಥನು ಒಂದು ಯುದ್ಧದಲ್ಲಿ ಹಂಗೇರಿ ದೇಶದವನಾದ ಒಬ್ಬ ಕ್ರೈಸ್ತ ಶ್ರೀಮಂತನನ್ನು ಶೆರೆಯಾಗಿ ಹಿಡಿದು, ಅವನನ್ನು ತನ್ನ ದಾಸನಾಗ ಮಾಡಿ ಕೊಂಡನು. ಈ ಶ್ರೀಮಂತ ದಾಸನನ್ನು ಅವನು ಬಹಳ ಕ್ರೂರತ್ವದಿಂದ ನಡಿಸುತ್ತಿದ್ದನು; ಮತ್ತು ಅವನಿಗೆ ಬೇಕಾದ ಆಹಾರವಾದರೂ ಕೊಡದೆ, ಮೃಗಗಳ ಕೆಲಸವನ್ನು ಸಹಾ ಅವನಿಂದ ಮಾಡಿಸುತ್ತಿದ್ದನು: ಅವನನ್ನು ಎತ್ತುಗಳ ಸಂಗಡ ನೊಗಕ್ಕೆ ಕಟ್ಟಿ, ಬಲಾತ್ಕಾರವಾಗಿ ಅವನಿಂದ ಹೊಲವನ್ನು ಹೂಡಿಸುತ್ತಿದ್ದನು. ಆದರೆ ಆ ಯುದ್ಧವು ನಡಿಯುತ್ತಿರುವಾಗ, ಕಾಲೋಚಿತದಲ್ಲಿ ಹಂಗೇರಿಯವರಿಗೆ ಜಯವಾಗಿ, ಇದೇ ತುರ್ಕನು ಅವರಿಂದ ಶೆರೆ ಹಿಡಿಯಲ್ಪಟ್ಟನು. ಆಗ ಅವನ ದಾಸನಾಗಿದ್ದ ಆ ಕ್ರೈಸ್ತ ಶ್ರೀಮಂತನು ಬಿಡುಗಡೆಯಾಗಿ, ಜಯಪ್ರದರಾದ ತನ್ನ ಜನರ ಸಂಗಡ ಶೇರಲು, ಆ ತುರ್ಕನನ್ನು ಶೆರೆಯಾಗಿ ಹಿಡಿದ ಅವನ ಸ್ವದೇಶಸ್ಥರು ಅವನಿಗೆ ಹೇಳಿದ್ದು: "ಇಗೋ, ಈ ತುರ್ಕನು ನಿಮ್ಮನ್ನು ಬಹಳ ಕ್ರೂರತ್ವದಿಂದ ಹಿಂಸಿಸುತ್ತಿದ್ದನಲ್ಲ! ಈಗ ಈತ ನಮ್ಮ ಕೈಗೆ ಶಿಕ್ಕಿದ್ದಾನೆ, ಇವನ ಮೇಲೆ ನಿಮ್ಮ ಹಗೆ ಎಲ್ಲಾ ತೀರಿಸಿ ಬಿಡಿರಿ." ಮತ್ತು ಆ ಕಾಲದಲ್ಲಿ ಇಂಥಾ ಮರ್ಯಾದೆ ಇತ್ತು; ಆದರೆ ದಾಸನಾಗಿದ್ದ ಆ ಕ್ರೈಸ್ತನು ಅವನ ಮೇಲೆ ತನ್ನ ಹಗೆ ತೀರಿಸಲಿಲ್ಲ, "ನಿಮ್ಮ ವೈರಿಗಳನ್ನು ಪ್ರೀತಿ ಮಾಡಿರಿ, ನಿಮ್ಮನ್ನು ಹಿಂಸಿಸಿದವರಿಗೆ ಪ್ರತಿಯಾಗಿ ಒಳ್ಳೇದನ್ನು ಮಾಡಿರಿ" ಎಂಬ ಯೇಸು ಕ್ರಿಸ್ತನ ಆಜ್ಞೆಯನ್ನು ಅವನು

ನೆನಪಿಗೆ ತಂದು ಕೊಂಡನು. ಮತ್ತು ಶೆರೆಯಲ್ಲಿರುವ ಆ ತುರ್ಕನ ಬಳಿಗೆ ತನ್ನ ದೂತನನ್ನು ಕಳುಹಿಸಿ, ಅವನಿಗೆ ಬಿಡುಗಡೆ ಆಯಿತು, ಭಯ ಪಡದೆ, ಸಮಾಧಾನದಲ್ಲಿ ತನ್ನ ದೇಶಕ್ಕೆ ಹೋಗಲಿ ಎಂದು ತಿಳಿಸಿದನು. ಆದರೆ ಅಷ್ಟರೊಳಗೆ ಆ ತುರ್ಕನು, ತಾನು ಆ ಶ್ರೀಮಂತನ ಕೈಯಿಂದ ಕಠಿಣ ಪೀಡೆಯೊಡನೆ ಸಾಯುವೆನು ಎಂದು ನಿಶ್ಚಯ ಪಟ್ಟು, ವಿಷ ತಿಂದು ಬಿಟ್ಟಿದ್ದನು. ಆದರೆ ಆ ಶ್ರೀಮಂತನು ಹೇಳಿ ಕಳುಹಿಸಿದ ದಯೆಯ ಮಾತು ಕೇಳಿದಾಕ್ಷಣ ಕೃತಜ್ಞತೆಯ ಹರುಷದಿಂದ ಹೃದಯ ಕರಗಿದವನಾಗಿ, ತನ್ನ ಪ್ರಾಣ ಬಿಡುವಾಗ ಕೂಗಿ ಉಸುರಿದ್ದು: "ನಾನು ಮುಸಲ್ಮಾನನಾಗಿ ಸಾಯಲಾರೆ, ಕ್ರೈಸ್ತನಾಗಿಯೇ ಸಾಯುವೆನು; ಯಾಕಂದರೆ, ಕ್ರಿಸ್ತನ ಮತ ಹೊರ್ತು ಮತ್ತ್ಯಾವ ಮತವಾದರೂ ಕೇಡಿಗೆ ಪ್ರತಿಯಾಗಿ ಕ್ಷಮೆ ಮಾಡ ಬೇಕೆಂದು ಕಲಿಸುವದಿಲ್ಲ!"

ಈ ಪತ್ರ ಓದುವವನೇ, ಆ ಶ್ರೀಮಂತನಿಗಿದ್ದಂಥಾ ಕ್ಷಮಾಗುಣ ನಿನಗೂ ಉಂಟೇನು?

ಸಿಯಮ್ ದೇಶದ ಕ್ರೈಸ್ತನು.

ಅನೇಕ ವರುಷಗಳ ಹಿಂದೆ ಸಿಯಮ್ ಕೊಲ್ಲಿಯ ಪೂರ್ವತೀರದಲ್ಲಿ ವಾಸಿಸುವ ಒಬ್ಬ ಬಡ ಮೊಗೇರನು ಒಂದಾನೊಂದು ದಿವಸ ಬೆಳಿಗ್ಯೆ ಸಮುದ್ರದಲ್ಲಿ ಸ್ನಾನ ಮಾಡುತ್ತಿದ್ದನು. ಆಗ ಅಲ್ಲಿ ಆಹಾರಕ್ಕೋಸ್ಕರ ಹೊಂಚಿ ಕೊಂಡಿರುವ ಒಂದು ಮೊಸಳೆಯು ಅವನನ್ನು ಹಿಡಿದು ಬಿಟ್ಟಿತು; ಆದರೆ ತತ್ಕ್ಷಣದಲ್ಲಿ ಬಹಳ ಹೋರಾಟ ಮಾಡಿ ತಪ್ಪಿಸಿ ಕೊಂಡರೂ, ಅವನದೊಂದು ಕೈಯನ್ನು ಕಡದು ಕೊಂಡು ಹೋಯಿತು. ಆಗ ಅವನ ಸ್ನೇಹಿತರು ಅವನ ಬಳಿಗೆ ಬಂದು, ಅವನ ಮುರಿದು ಹೋದ ಕೈಯನ್ನು ಔಷಧ ಕೊಟ್ಟು ಗುಣ ಮಾಡಿಸುವದು ಹ್ಯಾಗೆಂದು ಆಲೋಚಿಸಿ, ಕಡೆಗೆ "ಬಿಳೀ ಮುಖದ ಡಾಕ್ತರ್" ಬಳಿಗೆ ಅವನನ್ನು ಕಳುಹಿಸುವದೆಂತ ನಿಶ್ಚಯ ಮಾಡಿದರು. ಹಾಗೆಯೇ ಅವನು ಆ "ಡಾಕ್ತರ ಧೊರೆ" ಇದ್ದ ಬೆಂಕೊಕ್ ಪಟ್ಣಕ್ಕೆ ಹೊರಟನು; ಮತ್ತು ಪ್ರೆಸ್ಬಿತರ್ ಮಿಶನ್ ಸ್ಟೇಶನಿನಲ್ಲಿರುವ ಮಿಶನೆರಿ ಡಾಕ್ತರಾದ ಹೌಸ್ ಧೊರೆಯ ಹತ್ತರ ಬಂದು, ತನ್ನ ಸಂಕಟದ ಕಾರಣವನ್ನು ಅವರಿಗೆ ತಿಳಿಸಲಾಗಿ, ಅವರು ಅವನನ್ನು ತನ್ನ ಬಳಿಯಲ್ಲಿರಿಸಿ ಕೊಂಡು, ಔಷಧ ಕೊಟ್ಟು, ಮುರಿದು ಹೋದ ಅವನ ತೋಳಿನ ವ್ರಣವನ್ನು ವಾಶಿ ಮಾಡಿದರು. ಮತ್ತು ಅಷ್ಟರಲ್ಲೇ ಬಿಡಲಿಲ್ಲ; ದೇವರ ಪರಿಶುದ್ಧವಾಕ್ಯದಲ್ಲಿ ಹೇಳಿರುವ ಆತ್ಮೌಷಧದ ಕ್ರಮವನ್ನು ಸಹ ಬೋಧಿಸಿ, ಆತನ ಅತ್ಮರೋಗವನ್ನು ಕೂಡ ಕ್ಷೇಮ ಮಾಡುವ ನಿಜವೈದ್ಯನನ್ನು ಅವನಿಗೆ ತೋರಿಸಿ ಕೊಟ್ಟರು. ಆ ಬಡ ಮೊಗೇರನು ಅವರ ಬೋಧನೆಯನ್ನು ಚನ್ನಾಗಿ ಲಾಲಿಸಿ ಕೇಳಿ, ಹೃದಯ ತಿವಿದವನಾಗಿ, ತನ್ನ ಪಾಪವೆಂಬ ರೋಗದ ವೇದನೆಯನ್ನು ಅರಿತು, ಸಹಿಸಲಾರದೆ, ಹೃತ್ಪರಿಣಾಮ ಪಟ್ಟು, "ಪ್ರಿಯ ಕರ್ತನಾದ ಯೇಸುವೇ ನನ್ನನ್ನು ಪಾಪದೊಳಗಿಂದ ವಿಮೋಚಿಸುವ ನಿಜ ರಕ್ಷಕನಾಗಿದ್ದಾನೆ; ಆತನ ಮುಖದಿಂದಲೇ ನಿಜ, ಸಜೀವ, ಪರಿಶುದ ದೇವರ ಮುಂದೆ ನನಗೆ ಕ್ಷಮೆಯೂ ಕೃಪೆಯೂ ದೊರಕಿತು; ಆದದರಿಂದ ನಾನು ಆತ

ನಿಗೆ ಎಂದೆಂದಿಗೂ ಸೇವಿಸುವೆನು" ಎಂದು ಪೂರ್ಣ ಹೃದಯದಿಂದ ಅರಿಕೆ ಮಾಡುವಂಥಾ ವಿಶ್ವಾಸಿಯಾದನು. ಈ ಪ್ರಕಾರ ಆ ಮಿಶನೆರಿಯ ಮುಖಾಂತರ ಅವನು ಕ್ರಿಸ್ತನ ಸಭೆಗೆ ಶೇರುವವನಾದನು. ಅವನು ತನ್ನ ಮನೆಗೆ ತಿರಿಗಿ ಬರುವಾಗ, ಅವನ ಮುಂಚಿನ ಸ್ನೇಹಿತರು ಅವನಿಗೆ ಕುಚೋದ್ಯ ಮಾಡಿದರು, ನಿಂದಿಸಿದರು, ದೂಷಿಸಿದರು, ಗದರಿಸಿದರು, ಆದರೂ ಅವನು ಅಲೆಯಲಿಲ್ಲ; ಅವನು ಬಡವನಾಗಿದ್ದರೂ ತನ್ನ ವಿಶ್ವಾಸದಲ್ಲಿ ಸಾಯುವನಕ ದೃಢವಾಗಿಯೂ ಘನವಾಗಿಯೂ ನಡೆದು, ಅಂಧಕಾರದಲ್ಲಿರುವ ತನ್ನ ದೇಶಸ್ಥರಿಗೆ ಒಳ್ಳೇ ಮಾದರಿಯಾಗಿ ಶೋಭಿಸಿದನು. ಕಡೆಗೆ ಅವನ ಪರಲೋಕದ ತಂದೆಯು ಅವನನ್ನು ತನ್ನ ಆನಂದಕ್ಕೆ ಕರೆದನು. ಅವನ ಮರಣವು ಶಾಂತವಾಗಿಯೂ ಸಮಾಧಾನಕರವಾಗಿಯೂ ಇತ್ತು. ಅವನ ಜೀವದ ಬೆಳಕು ಇನ್ನೂ ಆರಲಿಕ್ಕಿರುವಾಗ, ಅವನ ಚಿಕ್ಕ ಮಗನು: "ದೇವರನ್ನು ಪ್ರೀತಿಸುತ್ತೀಯಾ?" ಎಂದು ಕೇಳಿದನು. ಅದಕ್ಕೆ ಅವನ ಸಾಯುವ ತಂದೆಯು ಆನಂದ ಪಟ್ಟು ಹೇಳಿದ್ದು: "ಯೇಸುವಿನಲ್ಲಿಯೇ ನಾನು ವಿಶ್ವಾಸವನ್ನಿಟ್ಟಿದ್ಧೇನೆ." ಜೀವಿಸುವದು ಕ್ರಿಸ್ತನಿಗಾಗಿಯೇ, ಸಾಯುವದು ಲಾಭವೇ ಎಂದು ಅವನು ತಿಳಿದಿದ್ದನು. ಅವನ ಸಮಾಧಿಯ ಮೇಲೆ ಯಾವ ಬರಹವಿರ ಬೇಕೆಂದು, ಮಗನು ಅವನೊಡನೆ ಕೇಳಿದ್ದಕ್ಕೆ—"ಯೇಸುವಿನ ಒಬ್ಬ ದಾಸನು" ಎಂತ ಬರಿಯ ಬೇಕೆಂದು ಹೇಳಿದ್ದನು. ಈಗ ಇದೇ ಹೆಸರಿನ ಗೋರಿಯು ಅವನ ಊರಿನದೊಂದು ಬೈಲಿನ ಮೂಲೆಯಲ್ಲಿ ಕಾಣಲ್ಪಡುವದು; ಅದು ಈಗ ಅಪ್ರಶಸ್ತವಾಗಿದ್ದರೂ, ಅವನ ಆತ್ಮವು ಯೇಸು ಕ್ರಿಸ್ತನ ಕೃಪಾದಾನದಿಂದ ದೇವರ ಸನ್ನಿಧಿಯಲ್ಲಿ ಪ್ರಶಸ್ತವಾಗಿರುವದು.

ಒಬ್ಬ ರೋಮಾಯ ಶಿಪಾಯಿ.

ಪೂರ್ವದ ರೋಮಾಯರ ರಾಜ್ಯದೊಳಗೆ ಒಂದು ಅಪ್ಪಣೆ ಇತ್ತು; ಅದೇನೆಂದರೆ: ರಾತ್ರೇ ಕಾಲದಲ್ಲಿ ಯಾರು ರಾಜ್ಯದ ಚಕ್ರವರ್ತಿಯ ಬಳಿಗೆ ಬರುತ್ತಾನೋ, ಅವನಿಗೆ ಮರಣದಂಡನೆ ವಿಧಿಸೋಣಾಗುವದು ಎಂಬದು. ಆದರೆ ಇಂಥಾ ಕಂಟಕವುಳ್ಳ ಸಮಯದಲ್ಲಿ ಒಬ್ಬ ಶಿಪಾಯಿಯು ಕೈಯಲ್ಲಿ ಒಂದು ಅರ್ಜಿ ಹಿಡಿದು, ಚಕ್ರವರ್ತಿಯ ತಂಬು ಹೊಡದಲ್ಲಿಗೆ ಬಂದು, ಅವನ ಭೇಟಿ ಮಾಡ ನೋಡಿದನು. ಆಗ ಅರಸನ ಮೈಗಾವಲಿನವರು ಅವನನ್ನು ಕಂಡು, ಹಿಡಿದು, ಕೂಡಲೇ ಗಲ್ಲಕ್ಕೆ ಹಾಕಲಿಕ್ಕೆ ವೈದು ಕೊಂಡು ಹೋಗುತ್ತಿದ್ದರು. ಆದರೆ ಆ ಚಕ್ರವರ್ತಿಯು ತಂಬಿನೊಳಗಿನಿಂದ ಹೊರಗೆ ಗುಲ್ಲು ಆದದ್ದನ್ನು ಕೇಳಿ, ಹೊರಗೆ ಬಂದು, ಆ ಮಾರೆಕಾರರನ್ನು ಕರದು, ಕೂಗಿ ಹೇಳಿದ್ದು: "ಅವನ ಕೈಯಲ್ಲಿರುವ ಅರ್ಜಿಯು ತನಗೋಸ್ಕರವೇ ಆಗಿದ್ದರೆ, ಅವನು ಸಾಯಲಿ; ಆದರೆ ಅನ್ಯರದಾಗಿದ್ದರೆ, ಅವನ ಜೀವವನ್ನುಳಿಸಿರಿ." ವಿಚಾರಿಸಿ ನೋಡುವಾಗ, ಆ ಔದಾರ್ಯ ಗುಣದ ಶಿಪಾಯಿಯು, ಪಹರೆಯ ಸಮಯ ನಿದ್ರೆ ಗೈದದಕ್ಕಾಗಿ ಮರಣದ ಶಿಕ್ಷೆ ಹೊಂದಿದ ಅವನ ಇಬ್ಬರು ಗೆಳೆಯರಿಗೆ ಕ್ಷಮೆ ಕೊಡುವಂತೆ ಬರಕೊಂಡ ಅರ್ಜಿಯನ್ನು ಚಕ್ರವರ್ತಿಯ ಬಳಿಗೆ ತಂದಿದ್ದನೆಂತ ಕಂಡು ಬಂತು. ಆಗ ಬುದ್ಧಿಯುಳ್ಳ ಚಕ್ರವರ್ತಿಯು ಘನವಾಗಿ ಆ ಮೂವರನ್ನೂ ಕ್ಷಮಿಸಿ, ಕಳುಹಿಸಿದನು.

ಕೆಲವು ಪ್ರಶ್ನೆಗಳು.

1. ಎರಡಾವರ್ತಿ ಹುಟ್ಟಿದಂಥವರು ಒಂದಾವರ್ತಿ ಸಾಯುವರು; ಒಂದಾವರ್ತಿ ಮಾತ್ರ ಹುಟ್ಟಿದವರು ಎರಡಾವರ್ತಿ ಸಾಯ ಬೇಕು. ಇದು ಹ್ಯಾಗೆ?

2. ಬಂದದ್ದಕ್ಕೆ ಅತಿ ಸಂತೋಷ ಪಟ್ಟು ಬಂದವನಿಗೆ ಮನೆಯ ಬಾಗಲನ್ನು ತೆಗಿಯದೆ ಹೋದದ್ದು ಯಾರು?

3. ಪರಲೋಕಕ್ಕೆ ಏರಿ ಹೋದ ಮೇಲೆ ಯೇಸು ಯೆರೂಸಲೇಮಿನ ದೇವಾಲಯದಲ್ಲಿ ಯಾವ ಪುರುಷನ ಸಂಗಡ ಸಂಭಾಷಣೆ ಮಾಡಿದನು?

4. ಒಂದೇ ಮನೆಯಲ್ಲಿ ಅದೇ ಹೆಸರುಳ್ಳ ಇಬ್ಬರು ಗೃಹಸ್ಥರು ವಾಸಿಸಿದ್ದರು. ಅವರ ಹೆಸರೇನು?

5. ತನ್ನ ಮಗುವನ್ನು ದುಃಖದಿಂದಲೂ ಮಮತೆಯ ದೆಶೆಯಿಂದಲೂ ಬಿಟ್ಟಗಲಿದ ತಾಯಿಯ ಹೆಸರೇನು?

6. ಅರಸುತನಕ್ಕೆ ಬರುವದಕ್ಕಿಂತ ಮುಂಚೆ ತೀರಿ ಹೋದ ಅರಸನ ಹೆಸರೇನು?

7. ತನ್ನ ಆಯುಷ್ಯದ ಪ್ರಥಮ ಮೂರನೇ ಭಾಗ ವಿದ್ಯಾಭ್ಯಾಸದಲ್ಲಿ, ಮಧ್ಯ ಮೂರನೇ ಭಾಗ ಊಳಿಗದಲ್ಲಿ, ಅಂತ್ಯ ಮೂರನೇ ಭಾಗ ಒಂದೇ ಪ್ರಯಾಣದಲ್ಲಿ ಕಳೆದವನು ಯಾರು?

8. ಒಬ್ಬನು ತಾನೇ ನೋಡದಂಥಾದ್ದನ್ನು ನೋಡಿದ ಬೇರೊಬ್ಬನಿಗೆ ಹೇಳಿ ತಿಳಿಸಬೇಕಾಯಿತು. ಅವನ ಇವನ ಹೆಸರುಗಳೇನು?

9. ಮೃತ್ಯುವಿನಿಂದಲಾದರೂ ಕೊಂದು ಹಾಕಲ್ಪಡ ಕೂಡದಂಥವನೊಬ್ಬನು ಕೊಲೆಯಾಗಿ ಸತ್ತು ಹೋದನು. ಯಾರು?

10. ತನ್ನ ದೀರ್ಘಾಯುಷ್ಯದ ಪ್ರಾರಂಭದಲ್ಲಿಯೇ ಸತ್ತು ಹೋದವನ ಹೆಸರೇನು?

11. ಕುಡಿದು, ಕುಡಿದು, ಅಮಲೇರಿ, ಕೈಬೆರಳುಗಳನ್ನು ನೋಡಿದ ಮಾತ್ರದಿಂದ ಅಮಲಿಳಿದು ಎಚ್ಚರವಾದವನ್ಯಾರು?

12. ಏನಿಲ್ಲದ ಯೌವನಸ್ಥನಾಗಿ ಮೂಡಣಕ್ಕೆ ಹೊರಟು ಹೋದೆನು; ವೃದ್ಧಿ ಹೊಂದಿ, ಗೃಹಸ್ಥನಾಗಿ ತಿರಿಗಿ ಸ್ವದೇಶಕ್ಕೆ ಮುಟ್ಟಿ ಬಂದೆನು; ಗೋರಿಗೆ ಸಮೀಪಿಸಿ ಬಂದ ವೃದ್ಧನಾಗಿ ನಾನು ಮತ್ತೊಮ್ಮೆ ದೇಶಾಂತರಕ್ಕೆ ಹೋಗಿ ಪರವಾಸ ಮಾಡಿದ್ದ ತೆಂಕಣದಲ್ಲಿ ಗೋರಿ ಕಾಣಲೇ ಇಲ್ಲ; ಬಡಗಕ್ಕೆ ನನ್ನ ಶವವನ್ನು ಕೊಂಡೊಯ್ಯಿದು ಹುಗಿದರು. ನನ್ನ ಹೆಸರೇನೆಂದು, ತಿಳಿದಿದ್ದರೆ, ಹೇಳು!

ಕ್ರಿಯೆಗಳಲ್ಲ ವಿಶ್ವಾಸವೇ ರಕ್ಷಣೆಗೆ ಅವಶ್ಯವಾದದ್ದು.

1' 5' 1' 2' 3 3 | 3' 3' 3' 2' 4'.3" 3'.2" :||
ಸಂ ಧ್ಯ ವಂ ದ ನಾ ದಿ ಸ್ನಾ ನ ವು ಯ ಜ್ಞಾ ದಿ,

1' 2' 3' 3"2" 1 1 |: 5 5'.4" 3'.2" 3'.2" 1' 2' 3' 3"2" 1 1 :||
ಮಾ ಡ ದು ಪ ಕಾ ರ ಹೋ ಗೋ ದಿ ಲ್ಲ ಘೋ ರ ಪಾ ಪ ಭಾ ರ

H. R

೧. ಸಂಧ್ಯ ವಂದನಾದಿ, ಸ್ನಾನವು ಯಜ್ಞಾದಿ : ||
ಮಾಡದುಪಕಾರ, || ಹೋಗೋದಿಲ್ಲ, ಘೋರ ಪಾಪಭಾರ, : ||

೨. ತೀರ್ಥ ಯಾತ್ರೆಯಿಂದ, ಅಗ್ನಿ ಹೋತ್ರದಿಂದ, : ||
ದಾನ ಧರ್ಮದಿಂದ, || : ಬಾರದೆಲೇ: ಮನಕ್ಕೆ ಆನಂದ. : ||

೩. ವ್ರತ ಉಪವಾಸ, ಕಾನನ ನಿವಾಸ, : ||
ದೇಹದ ಸನ್ಯಾಸ, || : ಮಹಾನಂತ, ಕಾಯದ ಪ್ರಯಾಸ. : ||

೪. ಜ್ಞಾನಮಾರ್ಗವನ್ನ, ಹೇಳೋ ಬ್ರಹ್ಮಜ್ಞಾನ, : ||
ನಿನ್ನ ಬೋಧವನ್ನ, || : ಮಾಡುವದು—ನಿನಗೆ ಅಜ್ಞಾನ : ||

೫. ನಾಮ ನಾರಾಯಣ, ಎಂದೆಂದೂ ಸ್ಮರಣ, : ||
ಮಾಡುವವನನ್ನ, || : ನಾರಾಯಣ, ಮಾಡನುದ್ಧಾರಣ. : ||

೬. ಶಾಸ್ತ್ರ ತರ್ಕ ವೇದ, ಪೌರಾಣಿಕ ಬೋಧ, : ||
ನಾಸ್ತಿಕದ ದಾನ, || : ಕುಂದಿಸದು, ಜೀವಾತ್ಮದ ಬಾಧ. : ||

೭. ಪಾಪಭಾರವನ್ನ, ತೆತ್ತು ಶಾಂತಿಯನ್ನ, : ||
ಈಯುವಾತನನ್ನ, || : ಪೂರಾ ನಂಬಿ ಪೂಜಿಸ್ಯೇಸುವನ್ನ. : ||

೮. ನರಜೀವಿಯಾತ್ಮ, ಪ್ರೀತಿ ಪರಮಾತ್ಮ : ||
ಮಾಡಿದಂಥ ಪ್ರೇಮ, || : ಶೋಧಿಸೆಲ್ಲ, ಆದಿ ದೇವಧರ್ಮ, : ||

೯. ಮಾನವನು ಆಗಿ, ನಿನ್ನ ಜೀವಕ್ಕಾಗಿ, : ||
ತನ್ನ ಬಲಿಯಾಗಿ, || : ದಾತನನ್ನ ನಂಬು ನಿಜವಾಗಿ. : ||

೧೦. ಈಗ ಬಾನದಲ್ಲಿ, ದೇವರ ಹಂತೀಲಿ, : ||
ಶೇರಲಕ್ಕು ಕೇಳಿ. || : ದೇವಕಂದ ಹಿಂದೆ ಹೋಗ ಏಳಿ. : ||

೧೧. ಬೇರೆ ದಾರಿ ಇಲ್ಲ, ಕೇಳಿರೆನ್ನ ಸೊಲ್ಲ, : ||
ಇದು ಮಿಥ್ಯವಲ್ಲ, || : ಈಗೀಗಲೇ ಓಡಿ ಬನ್ನಿರೆಲ್ಲ. : ||

೧೨. ಮಾನವನೇ, ನೀನು ಚಿಂತಿಸೋದು ಏನು? : ||
ಬೇಗ ನಂಬು ಇನ್ನು || :ಯೇಸು ಕ್ರಿಸ್ತ ಯಜ್ಞದಂತನನ್ನು. : ||

E. P. K.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. **NOVEMBER 1870.** ಅಂಕೆ ೫.

ನೀಲಗಿರಿಗಳ ವರ್ತಮಾನ.


ಸಭಾಪತ್ರವನ್ನು ಓದುವವರಿಗೆ ನಾವು ಒಂದು ದುಃಖಕರವಾದ ಸಂಗತಿಯನ್ನು ತಿಳಿಸ ಬೇಕು. ಸನ್ ೧೮೭೦ನೇ ವರುಷದ ಒಕ್ಟೋಬರ ೧೦ನೇ ತಾರೀಕಿನಲ್ಲಿ ನೇರಿಕಂಬೆಯಲ್ಲಿ ಸುವಾರ್ತಿಕನಾದ ಅಬ್ರಹಾಮ್ ನೇರಿಕಂಬೆ ಎಂಬವನು ತೀರಿ ಹೋದನು. ಅವನು ಮೊದಲನೇ ಬಡಗ ಕ್ರೈಸ್ತನಾದದರಿಂದ ಅವನ ವಿಷಯ ಹೆಚ್ಚು ಕೇಳುವದಕ್ಕೆ ಅನೇಕರಿಗೆ ಮನಸ್ಸಾಗಿರುವದು ಎಂದು ನೆನಸುವದರಿಂದ, ಅವನ ಸಂವರ್ತನೆ, ಜೀವ, ಮರಣದ ಮುಖ್ಯವಾದ ಸಂಗತಿಗಳನ್ನು ಬರೆಯುತ್ತೇವೆ.

೧೮೪೭ನೇ ವರುಷದ ಜನವರಿ ತಿಂಗಳಲ್ಲಿ ನೀಲಗಿರಿಗಳಲ್ಲಿ ನಮ್ಮ ಮಿಶ್ಯನ್ ಸ್ಥಾಪಿತವಾಯಿತು. ಆ ಸಮಯದಲ್ಲಿ ಬೀಲರ್, ಮೆತ್ಸ್ ಮತ್ತು ಮೇರಿಕೆ ಎಂಬ ಮೂರು ಧೊರೆಗಳು ಇದ್ದರು. ಅವರು ಹತ್ತು ವರುಷಗಳ ಪರ್ಯಂತರ ಒಂದೊಂದು ಊರಿನಲ್ಲಿ ಒಂದೊಂದು ಗ್ರಾಮದಲ್ಲಿ ದೇವರ ವಾಕ್ಯವನ್ನು ಪ್ರಸಂಗಿಸಿ, ಕೆಲವು ಸ್ಥಳಗಳಲ್ಲಿ ಹುಡುಗರ ಶಾಲೆಗಳನ್ನು ಸ್ಥಾಪಿಸಿದರು. ಆದರೆ ಒಬ್ಬನಾದರೂ ದೇವರ ವಾಕ್ಯವನ್ನು ನಂಬಿ ಕ್ರೈಸ್ತ ಸಭೆಯಲ್ಲಿ ಶೇರಲಿಲ್ಲ. ಕೆಲವರು ಹತ್ತರ ಬಂದರು, ಸರಿ, ಆದರೆ ಮನುಷ್ಯರ ಭಯದಿಂದ ಅವರೆಲ್ಲರು ಹಿಂಜರಿದು ಅಜ್ಞಾನದಲ್ಲಿ ಸತ್ತು ಹೋದರು. ಸನ್ ೧೮೫೭ನೇ ವರುಷದಲ್ಲಿ ಜೋಗತೊರೆ ಎಂಬ ಹಳ್ಳಿಯಿಂದ ಹಾಲೆಯನೆಂಬವನೊಬ್ಬನು ಮೇರಿಕೆ ಧೊರೆಯ ಹತ್ತರ ಬಂದು, ಸುವಾರ್ತೆ ನಮ್ಮ ಊರಲ್ಲಿರುವ ಜನರೆಲ್ಲರಿಗೆ ತಿಳಿಸುವ ಹಾಗೆ ಅಲ್ಲಿ ಒಂದು ಹುಡುಗರ ಶಾಲೆ ಸ್ಥಾಪಿಸಿರಿ ಎಂದು ಬೇಡಿ ಕೊಂಡನು. ಆಗ ಮೇರಿಕೆ ಧೊರೆ ಅಲ್ಲಿ ಒಂದು ಶಾಲೆ ಮಾಡಿದರು. ೧೧ ಹುಡುಗರು ಶಾಲೆಗೆ ಬಂದರು. ಅವರೊಳಗೆ ಹಾಲೆಯನ ಇಬ್ಬರು ಮಕ್ಕಳಿದ್ದರು. ಕೆಲವು ದಿವಸಗಳಾದ ಮೇಲೆ ಹಾಲೆಯನು ತಿರಿಗಿ ಬಂ

ದು, ನಮ್ಮ ಹಳ್ಳಿಯಲ್ಲಿ ಒಂದು ದೇವಾಲಯವನ್ನು ಕಟ್ಟಿರಿ. ಒಂದು ವೇಳೆ ನಮ್ಮ ಮಕ್ಕಳೂ ಮೊಮ್ಮಕ್ಕಳೂ ದೇವರ ವಾಕ್ಯವನ್ನು ನಂಬುವರು, ಅಂದನು. ಅಂದಿನಿಂದ ಮೇರಿಕೆ ಧೊರೆ ಒಂದೊಂದು ವೇಳೆ ಆ ಮನುಷ್ಯನನ್ನು ಕಂಡು, ಅವನ ಸಂಗಡ ಮಾತಾಡಿದರು. ಸನ್ ೧೮೫೭ನೇ ವರುಷ ಜೂನ್ ತಿಂಗಳಲ್ಲಿ ಅವರು ಕೇತಿಯಲ್ಲಿ ಒಂದು ಆದಿತ್ಯವಾರ ಪ್ರಸಂಗ ಮಾಡಿ, ತಪ್ಪಿ ಹೋದ ಕುರಿಯ ವಿಷಯ ಮಾತಾಡಿದರು. ಹಾಲೆಯನು ಆ ಸಮಯದಲ್ಲಿ ಪ್ರಾರ್ಥನೆಗೆ ಬಂದಿದ್ದನು. ಪ್ರಾರ್ಥನೆ ಆದ ಮೇಲೆ ಅವನು ಧೊರೆಯ ಹತ್ತರ ಬಂದು, ನಾನು ಆ ತಪ್ಪಿ ಹೋದ ಕುರಿ ಆಗಿದ್ದೆನು; ಆದರೆ ಈಗ ಸಿಕ್ಕಿದೆನು. ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬುತ್ತೇನೆ. ಮೇರಿಕೆ ಧೊರೆ ಈ ಮಾತನ್ನು ಕೇಳುವಾಗ ಬಹಳ ಸಂತೋಷ ಪಟ್ಟರು. ಆದರೆ ಸ್ನಾನದ ಸಲುವಾಗಿ ಹಾಲೆಯನು ಸಂಶಯ ಪಟ್ಟನು: ನಾನು ನನ್ನ ಹೃದಯದಲ್ಲಿ ಪೂರ್ಣವಾಗಿ ನಂಬುತ್ತೇನೆ; ಹೊರಗಿನ ಗುರುತು ಇನ್ನು ಯಾತಕ್ಕೆ ಬೇಕು? ಎಂದು ಕೇಳಿದನು. ಆಗ ಮೇರಿಕೆ ಧೊರೆ ಸ್ನಾನದ ಅರ್ಥವನ್ನು ಅವನಿಗೆ ಎಷ್ಟು ಹೇಳಿದಾಗ್ಯೂ ಹಾಲೆಯನು ಅದಕ್ಕೆ ಕಿವಿ ಕೊಡಲಿಲ್ಲ. ಕಡೇಲಿ ಧೊರೆ, ವಿಶ್ವಾಸಿಸಿ ಸ್ನಾನ ಹೊಂದುವವನು ರಕ್ಷಿಸಲ್ಪಡುವನು ಎಂಬ ವಚನವನ್ನು ಹೇಳಿದರು. ಅದಕ್ಕೆ ಹಾಲೆಯನು ಉತ್ತರ ಕೊಟ್ಟು ಹೇಳಿದ್ದೇನಂದರೆ: ದೇವರ ಅಪ್ಪಣೆ ಹೀಗಿದ್ದರೆ, ಸ್ನಾನವನ್ನು ತಕ್ಕೊಳ್ಳುತ್ತೇನೆ. ನಾನು ದೇವರಿಗೆ ವಿಧೇಯನಾಗಿರ ಬೇಕು.—೧೮೫೮ನೇ ಜನವರಿ ೩೧ನೇ ತಾರೀಕಿನಲ್ಲಿ ಹಾಲೆಯನು ಸ್ನಾನವನ್ನು ಹೊಂದಿದನು, ಅವನಿಗೆ ಅಬ್ರಹಾಮನೆಂಬ ಹೆಸರಾಯಿತು.

ಹಾಲೆಯನು ಮುಂಚೆ ಒಂದು ಕಾಫಿ ತೋಟದಲ್ಲಿ ಮೇಸ್ತ್ರಿಯಾಗಿದ್ದನು. ಸ್ನಾನ ಹೊಂದಿದ ಮೇಲೆ ಅವನ ಹೆಂಡತಿಯೂ ಮಕ್ಕಳೂ ನೆಂಟರೂ ಅವನನ್ನು ತಮ್ಮ ಮನೆಯಿಂದ ತಳ್ಳಿ ಬಿಟ್ಟರು. ಅದಕ್ಕೋಸ್ಕರ ಅಬ್ರಹಾಮನು ಆ ತೋಟದಲ್ಲಿ ಒಂದು ಸಣ್ಣ ಗುಡಸಲು ಕಟ್ಟಿ ಮೂರು ತಿಂಗಳು ಅಲ್ಲಿ ಒಂಟಿಗನಾಗಿ ಬದುಕಿದನು. ಅವನು ದೇವರ ರಾಜ್ಯಕ್ಕಾಗಿ ಹೆಂಡತಿಯನ್ನೂ ಮಕ್ಕಳನ್ನೂ ಆಸ್ತಿಯನ್ನೂ ಬಿಡ ಬೇಕಾಗಿದ್ದನು. ಹುಡುಗರು ತಾವು ಬಹಳ ಪ್ರೀತಿ ಮಾಡಿದ ತಂದೆಯನ್ನು ಇನ್ನು ನೋಡದೆ ಇರುವದರಿಂದ ರೋಗದಲ್ಲಿ ಬಿದ್ದರು. ಅವನ ಹೆಂಡತಿ ಅವನನ್ನು ಮನೆಗೆ ಕರೆಸಿದಳು. ಮನೆಗೆ ತಿರಿಗಿ ಬಂದ ಮೇಲೆ ಅಬ್ರಹಾಮನೂ ಸಭೆಯನ್ನು ಶೇರಿದ ಇನ್ನೊಬ್ಬ ಬಡಗನೂ ದಿನಾಲು ಹೊತ್ತಾರೆಯಲ್ಲಿಯೂ ಸಾಯಂಕಾಲದಲ್ಲಿಯೂ ದೇವರ ವಾಕ್ಯವನ್ನು ಓದಿ ಪ್ರಾರ್ಥನೆ ಮಾಡಿದರು. ಆದರೆ ಅವರ ಕುಟುಂಬದವರಲ್ಲಿ ಒಬ್ಬನಾದರೂ ಅವರನ್ನು ಶೇರಲಿಲ್ಲ.

ಹೀಗೆ ಇವರಿಬ್ಬರು ೧೮ ತಿಂಗಳು ಅವರಿಗೋಸ್ಕರ ದೇವರನ್ನು ಪ್ರಾರ್ಥಿಸಿದರು. ಆಗ ಅಬ್ರಹಾಮನ ಕುಟುಂಬದವರು ಸ್ನಾನ ಹೊಂದಿದರು. ೧೮೬೪ನೇ ವರುಷದಲ್ಲಿ ಅವರ ಮನೆಯ ಹತ್ತರ ಒಂದು ದೇವಾಲಯ ಕಟ್ಟಲ್ಪಟ್ಟಿತು. ಅದರ ಚಿತ್ರವು ಇಲ್ಲಿ ಕಾಣಿಸಿ ಅದೆ. ಈ ವರೆಗೆ ಅಬ್ರಹಾಮನು ದಿನಾಲು ಕಾಫಿ ತೋಟಕ್ಕೆ ಹೋಗಿ ತನ್ನ ಕೆಲಸವನ್ನು ಮಾಡಿದ್ದನು. ೧೮೬೪ನೇ ವರುಷದಲ್ಲಿ ಮೇರಿಕೆ ಧೊರೆ ಅವನನ್ನು ಒಂದೊಂದು ವೇಳೆ



ಪ್ರಸಂಗ ಮಾಡಲಿಕ್ಕಾಗಿ ತಮ್ಮ ಸಂಗಡ ಪ್ರಯಾಣಕ್ಕೆ ಕರಕೊಂಡು ಹೋದರು. ಆದರೆ ೧೮೬೫ನೇ ವರುಷದಲ್ಲಿ ಮಾತ್ರ ಅವನು ಸುವಾರ್ತಿಕ ಉದ್ಯೋಗವನ್ನು ಶೇರಿದನು. ಅಂದಿನಿಂದ ಅಬ್ರಹಾಮನು ಯಾವಾಗಲೂ ಬೋಧಕರ ಸಂಗಡ ಪ್ರಯಾಣಕ್ಕೆ ಹೋಗಿ, ಅಜ್ಞಾನಿಗಳಿಗೆ ಸುವಾರ್ತೆಯನ್ನು ಪ್ರಸಂಗಿಸಿದನು. ಈ ಪ್ರಕಾರ ನಾಲ್ಕುವರೆ ವರುಷ ಮಾಡುತ್ತಾ ಬಂದನು. ಒಕ್ಟೋಬರ್ ತಿಂಗಳಿನ ಆರಂಭದಲ್ಲಿ ಅವನಿಗೆ ಸ್ವಲ್ಪ ಕೆಮ್ಮು ಆದದರಿಂದ ಅವನು ಒಬ್ಬ ವೈದ್ಯಗಾರನಿಂದ ಔಷಧ ತಕ್ಕೊಂಡನು. ಆದರೆ ಅವನು ಗುಣವಾಗದೆ ರೋಗವು ಹೆಚ್ಚಾಯಿತು. ಶ್ರಮೆಗಳು ಬಹಳವಾದದರಿಂದ ಇನ್ನೊಬ್ಬ ವೈದ್ಯಗಾರನನ್ನು ಕರೆಸಿದನು. ಇವನು ಕೊಟ್ಟ ಔಷಧಗಳಿಂದ ಅವನ ಕಷ್ಟಗಳು ಕಡಿಮೆ ಆದವು, ಸರಿ; ಆದರೆ ಅವನ ಪ್ರಾಣ ಸಹ ಕಡಿಮೆ ಆಯಿತು. ಒಕ್ಟೋಬರ ೧೦ನೇ ತಾರೀಕಿನಲ್ಲಿ ಅವನು ರಾತ್ರಿಭೋಜನವನ್ನು ತನ್ನ ಮನೆಯಲ್ಲಿ ತಕ್ಕೊಂಡನು. ನಾವು ರಾಗ ಹಾಡುವ ಸಮಯದಲ್ಲಿ ತಾನು ಹಾಡಲಿಕ್ಕೆ ಪ್ರಯತ್ನ ಮಾಡಿದನು. ಆದರೆ ತನ್ನ ಬಾಯಿಯನ್ನು ತೆರೆಯಲಿಕ್ಕೆ ಆಗಲಿಲ್ಲ. ಯೇಸು ಕ್ರಿಸ್ತನು ನಿಮಗಾಗಿ ತನ್ನ ರಕ್ತವನ್ನು ಚೆಲ್ಲಿದನು ಎಂದು ಧೊರೆ ಅವನಿಗೆ ಹೇಳುವಾಗ, ಅವನು, ಹೌದು ಅಂದನು. ಸಾಯಂಕಾಲದಲ್ಲಿ ಅವನು ಧೊರೆ ಧೊರೆಸಾನಿಗೆ ಸಲಾಮು ಹೇಳಿದನು. ಈ ಎರಡು ಮಾತುಗಳು ಅವನು ಹೇಳಿದ ಕಡೇ ಮಾತುಗಳಾಗಿದ್ದವು. ಸುಮಾರು ಮಧ್ಯರಾತ್ರಿ ಅವನ ಪ್ರಾಣ ಹೋಯಿತು.

ಮರು ದಿವಸದಲ್ಲಿ ಅವನ ಹೂಣಿಡುವಿಕೆ ನೋಡುವದಕ್ಕೆ ಬಹಳ ಬಡಗರೂ ಕೋತರೂ ತೊದವರೂ ಮತ್ತು ಕುನ್ನೂರಿನಿಂದ ಕ್ರೈಸ್ತರೂ ಬಂದರು. ಅವರೆಲ್ಲರ ದುಃಖವು ಬಹಳವಾಯಿತು; ಯಾಕಂದರೆ ನಮ್ಮನ್ನು ಪ್ರೀತಿ ಮಾಡಿದವನು ನಮ್ಮನ್ನು ಬಿಟ್ಟನು ಎಂದು ತಿಳ ಕೊಂಡರು. ನಾವು ಈಗ ಏನು ಮಾಡ ಬೇಕು? ನಮಗೆ ನೆರಳು ಕೊಟ್ಟ ಮರವು ಕಡಿಯಲ್ಪಟ್ಟಿತು! ಎಂದು ಕೆಲವು ಅಜ್ಞಾನಿಗಳು ಹೇಳಿದರು. ಅಬ್ರಹಾಮನು ಯೇಸು ಕ್ರಿಸ್ತನ ರೆಕ್ಕೆಗಳ ಕೆಳಗೆ ಆಶ್ರಯವನ್ನು ಹೊಂದಿದನು. ಅದಕ್ಕಾಗಿ ತಾನು ಆಶೀರ್ವದಿಸಲ್ಪಟ್ಟ

ವನಾಗಿ ಆಶೀರ್ವಾದ ಕೊಡುವವನಾದನು. ಮೊದಲಿಂದ ಕಡೆ ವರೆಗೂ ಅವನು ಒಳ್ಳೇ ಅರಿಕೆಯನ್ನು ಮಾಡಿ, ವಿಶ್ವಾಸದ ಹೋರಾಟವನ್ನು ಹೋರಾಡಿದನು. ಮತ್ತು ಅಂತ್ಯದ ಪರ್ಯಂತರ ವಿಶ್ವಾಸವುಳ್ಳವರಿಗೆ ದೇವರು ಜೀವದ ಕಿರೀಟವನ್ನು ಕೊಡುವನು.

ತನ್ನ ಭಕ್ತರನ್ನು ಕಷ್ಟಗಳಲ್ಲಿ ಪಾರಗಾಣಿಸಲಿಕ್ಕೆ ದೇವರಿಗೆ ಸಹಸ್ರ ನಾವೆಗಳು.

ವಿರ್ತೆಂಬೆರ್ಗೆಂಬ ಶೀಮೆಯ ರೋಥ್ ಎಂಬ ಊರಿನಲ್ಲಿ ಸುಮಾರು ಹದಿನೈದು ವರುಷಗಳ ಹಿಂದೆ ಸಂಭವಿಸಿದ್ದೇನಂದರೆ: ದೇವಭಕ್ತಿಯುಳ್ಳ ಬಡ ವಿಧವಾಸ್ತ್ರೀಯೊಬ್ಬಳು, ಆಪತ್ಕಾಲವು ಬಂದು, ಬಹಳ ಪೇಚಾಡಿ, ಕಷ್ಟದಿಂದ ಕಾಲಕ್ಷೇಪವ ಮಾಡುತ್ತಿದ್ದದಲ್ಲದೆ, ಅವಳಿಗೂ ಅವಳ ಮಕ್ಕಳಿಗೂ ಜೀವನೋಪಾಯಕ್ಕೆ ವಿಶೇಷ ಸಹಾಯವಾಗಿದ್ದ ಒಂದೇ ಆಕಳನ್ನು ಸಾಲದ ನಿಮಿತ್ಯ ಜಪ್ತಿಯಾಗಿ ಮಾರಿ ಹೋಗುವದೆಂಬ ಅತಿ ದುಃಖಕರವಾದ ಭಯದಲ್ಲಿ ಬೀಳ ಬೇಕಾಯಿತು. ಮನುಷ್ಯರಲ್ಲಿ ಯಾರಾದರೂ ತನ್ನ ಮೇಲೆ ದಯವಿಟ್ಟು ಒತ್ತಾಸೆ ಮಾಡ್ಯಾರೆಂಬ ಭರವಸವನ್ನು ಇನ್ನು ಹಿಡಿಯ ಕೂಡದಾಗಿದ್ದಾಗ್ಯೆ, ತನ್ನ ಇಕ್ಕಟ್ಟಿನೊಳಗಿಂದ ಬಹು ಚುರುಕಾಗಿಯೂ ಸಾಹಸವಾಗಿಯೂ ದೇವರೊಬ್ಬನನ್ನೇ ಬೇಡಿ ಪ್ರಾರ್ಥಿಸಲಿಕ್ಕೆ ಹತ್ತಿದಳು. ಅವಳು ಹೀಗೆ ಪ್ರಾರ್ಥಿಸಿ ಬೇಡುತ್ತಿರುವಲ್ಲಿ ಅವಳ ಹುಡುಗರಲ್ಲೊಬ್ಬನು ಧಡಕ್ಕನೆ ಓಡಿ ಬಂದು, ಅವಳ ಕೈಯಲ್ಲಿ ಹಳದಿ ಬಣ್ಣವುಳ್ಳ ಎರಡು ಹರಳುಗಳನ್ನು ತಂದು ಕೊಟ್ಟನು. ಈ ಹರಳುಗಳೇನೆಂದು ವಿಚಾರಿಸಿ ನೋಡಿದಲ್ಲಿ, ಅವು ಭಂಗಾರದ ವರಹಗಳೆಂದು ಕಂಡು ಬಂತು. ಇವು ನಿನಗೆ ಎಲ್ಲಿ ಶಿಕ್ಕಿದವೆಂದು ಕೇಳಿದ ತಾಯಿಯನ್ನು ಹುಡುಗನು ಮನೆಯ ಹಿತ್ತಲಿನಲ್ಲಿಯ ತೋಟಕ್ಕೆ ಕರಕೊಂಡು ಹೋಗಿ, ಒಂದು ಜಾತೀ ಇಲಿಯ ಹೊಸ ಬಿಲದ್ವಾರವ ತೋರಿಸಿ, ಇದರಲ್ಲಿ ಕಂಡು ಕೊಂಡೆ ಎಂದನು. ಅಲ್ಲಿಯೇ ಸ್ವಲ್ಪ ಹೆಚ್ಚು ಅಗಿದು ಹುಡುಕಿ, ಇನ್ನು ಬೇರೆ ಹತ್ತು ವರಹಗಳನ್ನು ಬೈಲಿಗೆ ತಂದರು. ಈ ತರದಲ್ಲಿ ಭಕ್ತಳಾದ ಬಡ ಸ್ತ್ರೀಗೆ ಸಹಾಯವಾಗಿ, ಆಕಳು ಜಪ್ತಿಯಾಗದೆ ಸಾಲ ತೀರಿಸಿ, ಅರಿಷ್ಟಕಾಲ ಪಾರಗಾಣಲಿಕ್ಕಾಯಿತು. ಈ ಸಂಗತಿಯು ಆಶ್ಚರ್ಯಕರವಾಗಿರುವದಲ್ಲದೆ, ನಿಜವೂ ಆಗಿರುತ್ತದೆ. ಇದನ್ನು ಓದಿದ ನಿನಗೂ ಎಂದಾದರೂ ಕಷ್ಟಕಾಲ ಬಂದರೆ, ನೀನು ಸಹಾ ಆ ಬಡವಳ ಹಾಗೆ ದೇವರನ್ನು ನಂಬಿ, ಬೇಡಿ ಪಾರಗೊಳ್ಳ ಬಾರದೋ? ಯೆಹೋವನು ತನ್ನನ್ನು ಕರೆಯುವವರೆಲ್ಲರಿಗೆ, ಸತ್ಯದಿಂದ ತನ್ನನ್ನು ಕರೆಯುವವರೆಲ್ಲರಿಗೆ, ಸಮೀಪವಾಗಿದ್ದಾನೆ; ತನಗೆ ಭಯ ಪಡುವವರ ಇಷ್ಟವನ್ನು ತೀರಿಸುತ್ತಾನೆ; ಅವರ ಮೊರೆಯನ್ನು ಕೇಳಿ, ಅವರನ್ನು ರಕ್ಷಿಸುತ್ತಾನೆ.

ತಪ್ಪಿ ಹೋಗ ಬೇಡಿರಿ; ದೇವರು ಹಾಸ್ಯ ಮಾಡಲ್ಪಡುವವನಲ್ಲ.

ಬಹಳ ತುಂಟನೂ ಪೋಕನೂ ಆಗಿದ್ದ ಒಬ್ಬ ರಾಣುವೆಯವನು ಸಾರಾಯ ಅಂಗಡಿಯಲ್ಲಿ ಕೂತು, ಶಾನೆ ಗುಲ್ಲು ಗದ್ದಲದೊಂದಿಗೆ ಕುಡಿಯುತ್ತಿರಲಾಗಿ, ಒಂದಾನೊಂದು ಸಾರಿ ಕುಡಿಗೆಯನ್ನು ತಿರಿಗಿ ಹಿಡಿದು, ಬಾಯಿಗೆ ತಂದು ಕೊಳ್ಳುವಾಗ, ಅವನ ಜತೆಗಾರರಲ್ಲೊಬ್ಬನು ಅವನಿಗೆ—"ಐಯ್ಯಾಲ್ಲಾ! ಪಾಪ! ನಿನ್ನ ಕುಡಿಗೆಯಲ್ಲಿ ಯಾವದೊಂದು ಜಂತು ಬಿದ್ದದ್ದನ್ನು ನೋಡಲಿಲ್ಲವೋ? ಅದನ್ನು ಹೊರಗೆ ತೆಗದು ಹಾಕ ಬೇಡವೋ?" ಎಂದು ಕೂಗಿ ಹೇಳಿದ್ದಕ್ಕೆ ಅವನು ಪ್ರತ್ಯುತ್ತರವಾಗಿ—"ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸದಿರಲಿ!" ಎಂದು ಹೇಳಿ, ನಕ್ಕು, ಕುಡಿದು ಬಿಟ್ಟನು. ಹಾಸ್ಯದ ಈ ಮಾತಿಗೂ ಅವನ ಚೇಷ್ಟೆಗೂ ಅವನ ಜತೆಗಾರರೆಲ್ಲರು ಮೆಚ್ಚಿಕೊಂಡು, ಕೇಕೇ ಹಾಕಿ, ನಗಾಡಿದರು. ಆದರೆ ಮೂರು ಘಳಿಗೇ ಮೇಲೆ ಆ ಹಾಸ್ಯಗಾರನು ದೇವಾಜ್ಞೆಯನ್ನು ಹೊಂದಿ, ಆಕಸ್ಮಿತವಾಗಿ ಬಿದ್ದು ಸತ್ತನು.

ಒಳ್ಳೇತನಕ್ಕೆ ಜ್ಞಾನಿಗಳೂ, ಕೆಟ್ಟತನಕ್ಕೆ ಮತಿಹೀನರೂ ಆಗಿರಿ.

ಕೇವಲ ಲಘು ಮನಸ್ಸುಳ್ಳ ಲೌಕೀಕ ಮನುಷ್ಯನೊಬ್ಬನು ಯಥಾರ್ಥಿಯೂ ಬೋಳಾರ್ಥಿಯೂ ಆಗಿದ್ದ ಒಬ್ಬ ಭಕ್ತಿಯುಳ್ಳ ಕ್ರೈಸ್ತನ ಸಂಗಡ ಸಂವಾದಿಸುತ್ತಿರುವಾಗ್ಯೆ, ಇವನನ್ನು ಗೊಂದಲದಲ್ಲಿ ಬೀಳಿಸಿ ತಬ್ಬಿಬ್ಬು ಮಾಡ ಬೇಕೆಂಬ ಮನಸ್ಸಾಗಿ, ನಾನಾ ಡೊಂಕು ಪ್ರಶ್ನೆಗಳನ್ನು ಹಾಕಲಿಕ್ಕೆ ಹತ್ತಿ, ದೇವರು ಎಷ್ಟು ದೊಡ್ಡವನಾಗಿದ್ಧಾನೆಂಬುವ ಪ್ರಶ್ನೆ ಸಹಾ ಹಾಕಿ ಕೇಳಿದನು. ಆ ಕ್ರೈಸ್ತಭಕ್ತನು ಪ್ರತ್ಯುತ್ತರವಾಗಿ—"ದೇವರು ಸರ್ವವ್ಯಾಪಕನಾಗಿ, ಸಮಸ್ತವನ್ನು ತುಂಬಿಸುವಷ್ಟೂ, ಆದರೆ ಸೊಕ್ಕಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಅರಿಷಡ್ವರ್ಗದಿಂದ ತುಂಬಿ, ತನ್ನನ್ನು ತಾನೇ ಹೆಚ್ಚಿಸಿ ಕೊಳ್ಳುವಂಥವನಿಗೆ ಏನೂ ಸ್ಥಳ ಬಿಡ ಕೂಡದಷ್ಟೂ ದೊಡ್ಡವನಾಗಿದ್ಧಾನೆ. ಪರಂತು ಆತನ ಮೇಲೆ ವಿಶ್ವಾಸವಿಟ್ಟು, ಆತನನ್ನು ಪ್ರೀತಿ ಮಾಡುವ ತನ್ನ ಭಕ್ತರಿಗೆ ದೇವರು ಭಕ್ತಾಧೀನನೂ, ದೀನ ಮನಸ್ಸೂ ನಲಗಿದ ಆತ್ಮವೂ ಉಳ್ಳವರಲ್ಲಿ ನಿವಾಸಗೊಳ್ಳಲಿಕ್ಕಾಗುವಷ್ಟು ಸಣ್ಣವನೂ ಆಗಿದ್ಧಾನೆ."

ಹುಟ್ಟುವಾಗ ಮನೋಹರವಾಗಿರುವಂಥಾದ್ದೊಂದು ಹುಟ್ಟಿದ ಮೇಲೆ ಮನೋವೇಧಿಸುವಂಥಾದ್ದಾಗಿ ಹೋಗುತ್ತಿರುತ್ತದೆ.

ಅದೇನೆಂದು ತಿಳಿದು ಹೇಳ ಬಲ್ಲಿರೈಯಾ? ಪಾಪವೆಂಬುವದೇ. ಮೊದಲಿನಲ್ಲಿ ಪಾಪವು ಅತಿ ಶೀಯಾಗಿಯೂ ರಮಣೀಯವಾಗಿಯೂ ತೋಚುವಂಥಾದ್ದಾಗಿದೆ; ಆದರೆ ಕಡೇಲಿ ಅದು ಬಹು ಕಹಿಯಾಗಿಯೂ ಅನಿಷ್ಟವಾಗಿಯೂ ಹೋಗುತ್ತಿರುವಂಥಾದ್ದು. ಇ

ಥ್ಥಗೊಂಡು, ಸುಖಿಸಿ, ಪಾಪವ ಮಾಡಿದವನು ವ್ಯಥೆ ಪಟ್ಟು, ದುಃಖಿಸಿ, ಅದರ ಫಲವ ತಿನ್ನುವನು. ತಪ್ಪಿ ಹೋದ ಮಗನು ಸಂತುಷ್ಟನಾಗಿ ತಂದೆಯ ಮನೆಯನ್ನು ಬಿಟ್ಟು, ಹೊರಟು ಹೋದನು; ಆದರೆ ಅಘೋರ ಕಷ್ಟದಲ್ಲಿ ಬಿದ್ದು, ದುಃಖಿತನಾಗಿ ತಿರಿಗಿ ತಂದೆಯ ಮನೆಯನ್ನು ಹುಡುಕಿ ಬಂದನಲ್ಲಾ? ಈ ಸಂಗತಿಯು ಹೀಗಿರುವ ಕಾರಣ, ಅಂತ್ಯವನ್ನೇ ಯೋಚಿಸಿ, ನೋಡಿ ಕೊಳ್ಳಿರಪ್ಪಾ!

ಉಂಟಾಗುವಾಗ ಬಹು ದುಃಖ ಪಡಿಸುವಂಥಾದ್ದೊಂದು ಉಂಟಾದನಂತರ ಅಧಿಕ ಸಂತೋಷಕ್ಕೆ ಕಾರಣವಾಗುತ್ತದೆ.

ಇದೇನಪ್ಪಾ? ಮಾನಸಾಂತರ ಪಡುವವನಿಗೆ ಪ್ರಾಪ್ತಿಸುವ ದೇವರ ಕೃಪೆಯೇ. ನಿಜ ಮಾನಸಾಂತರ ಪಡುವವನು ದೇವರ ಅನುಗ್ರಹವನ್ನು ಹೊಂದುತ್ತಾನೆ. ಆದರೆ ಮಾನಸಾಂತರದ ಸಂಗತಿಯು ಬಹು ಕಹಿಯಾಗಿದೆ. ಅದು ಎಷ್ಟೋ ಪ್ರಯಾಸದ ಕೆಲಸವೆಂದು ತಿಳಿಯದವರು ಅರಸನಾದ ಹೆಜ್ಕೀಯನನ್ನು ಕೇಳಲಿ. ಬಾನಕ್ಕಿಯಂತೆಯೂ ಕೊಕ್ಕರೆಯಂತೆಯೂ ಕೀಚುಕೀಚೆನ್ನುತ್ತೇನೆ; ಪಾರಿವಾಳದ ಹಾಗೆ ಮೂಲುಗುತ್ತೇನೆ; ನನ್ನ ಕಣ್ಣುಗಳು ಮೇಲಕ್ಕೆ ನೋಡುವದರಿಂದ ಕ್ಷೀಣವಾದವು; ಯೆಹೋವನೇ, ನನಗೆ ಸಂಕಟವಾಯಿತು; ನನ್ನನ್ನು ಉದ್ಧಾರ ಮಾಡು ಎಂದು, ಅವನು ಕುಗ್ಗಿದವನಾಗಿ ಕರ್ತನನ್ನು ಬೇಡಿ ಪ್ರಾರ್ಥಿಸಿದನು. ಹಾಗೆಯೇ ದಾವೀದನು ಎಷ್ಟೋ ಕಾರ್ಪಣ್ಯ ಪಶ್ಚಾತ್ತಾಪದೊಂದಿಗೆ ತನ್ನ ಪಾಪಗಳನ್ನು ಅರಿಕೆ ಮಾಡಿ ಬಿನ್ನೈಸುತ್ತಿದ್ದನಲ್ಲಾ! ಆ ಸುಂಕದವನನ್ನು ನೋಡಿರಿ! ಅವನ ಹೃದಯವು ಭಯದಿಂದಲೂ ನಾಚಿಕೆಯಿಂದಲೂ ತೀವಿದು ಹೋಗಿತ್ತು. ದೂರದಲ್ಲಿ ನಿಂತು, ಕಣ್ಣುಗಳನ್ನಾದರೂ ಆಕಾಶಕ್ಕೆ ಎತ್ತಲಿಕ್ಕೆ ಧೈರ್ಯಗುಂದಿ—ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಎಂದು ಮಾತ್ರವೇ ಹೇಳಿ, ತನ್ನ ಎದೆ ಬಡು ಕೊಂಡನು. ತಪ್ಪಿ ಹೋಗಿ, ದೇವರಿಗೆ ದೂರವಾದ ಪಾಪಿಷ್ಟನು ದೇವರನ್ನು ಎಲ್ಲಿ ತಿರಿಗಿ ಕಂಡು ಕೊಳ್ಳ ಬಹುದು? ಮನಸ್ತಾಪವೆಂಬ ಅಗ್ನಿಯಲ್ಲಿಯೇ; ಪಶ್ಚಾತ್ತಾಪದ ಕಣ್ಣೀರೆಂಬ ತೀರ್ಥಜಲದಲ್ಲಿಯೇ. ಮಾನಸಾಂತರವೆಂಬ ಘಟ್ಟಿಯಾದ ಕರಟವನ್ನು ಒಡೆದು ಹಾಕದವನು ದೇವಾನುಗ್ರಹವೆಂಬ ಕೊಬ್ಬರಿಯನ್ನು ರುಚಿ ನೋಡನು. ಶಾನೆ ಕಣ್ಣೀರಿನಿಂದಲೂ, ತೀಕ್ಷ್ಣ ಮನೋವ್ಯಾಧಿಯಿಂದಲೂ ಹುಡುಕಿ, ಕಂಡುಕೊಂಡ ದೇವರ ಕೃಪೆಯೂ ಪಾಪಪರಿಹಾರವೂ ಅಧಿಕಾಧಿಕ ಸಂತೋಷಪಡಿಸುವಂಥಾದ್ದು. ಹೆಜ್ಕೀಯನ ಹಾಗೆ ಬೇಡಿ ಮೂಲುಗುತ್ತಿದ್ದವನು ಕಡೆಗೆ ಉಪಶಮನ ಹೊಂದಿ, ಸಂತೋಷಿಸಿ, ಹಾಡಲೂ ಹರ್ಷಿಸಲೂ ಬಹುದು. ದಾವೀದನ ಮಾತುಗಳಲ್ಲಿ—ನನ್ನ ನಿಟ್ಟುಸುರಿನಿಂದ ದಣಿದಿದ್ದೇನೆ; ಪ್ರತಿ ರಾತ್ರಿಯಲ್ಲಿ ನನ್ನ ಹಾಸಿಕೆ ತೇಲಾಡಿಸುತ್ತೇನೆ; ನನ್ನ ಕಣ್ಣೀರಿನಿಂದ ನನ್ನ ಮಂಚವ ತ್ಯಾವ ಮಾಡುತ್ತೇನೆ; ನನ್ನ ಕಣ್ಣು ಕರಕರೆಯಿಂದ ಡೊಗರು ಬೀಳುತ್ತದೆ ಎಂದು ಅಂಗಲಾಚಿದವನು—ನನ್ನ ಅಳುವಿಕೆಯ ಶಬ್ದವನ್ನು ಯೆಹೋವನು ಕೇಳಿದ್ದಾನೆ; ಯೆಹೋವನು ನನ್ನ ವಿಜ್ಞಾಪನೆ ಕೇಳಿದ್ದಾನೆಂದು ಕರ್ತನನ್ನು ಹಾಡಿ ಹರಸ ಬಹುದು.

ದೇವರ ಸ್ತುತಿ.

1 5 4 3' 2' 3 2' 1' 1' 1' 2' 1' 2 5 4 3' 2' 3 2 1:||
ಜೀವಾಳೇ ದಿ ವ ರಾ ಜ ನ ಸ್ತು ತಿ ಯು ನಾನಾ ನಾಮ ದೊಳು ಹೇಳು. ಪಲ್ಲವಿ.

5' 1 1' 1 1' 7' 7' 1' 1' 7' 6' 5' 5':||
ಮಹಾ ರಾಜಾ ಧಿ ಗ ಗ ನೊ ಡೆ ಯ ನ ಮ ರಾ

5' 6 5' 6 1 7' 6' 5:||
ಯೆ ಹೋವ ನಾ ಮಾಂಕಿ ತ ವ

3' 3 3' 4 6 ||:5' 6 6' 5 3' 3':||
ವಿ ನೋದ ದೊ ಳು ಚ ನ್ನಾ ಗಿ ಹಾಡೊ ಕೆ

3' 4' 5' 4' 3 2' 1' 1' 1' 2' 1' 2 5 4:|
ಬೋ ಧ ದ ದಾ ನ ವ ಕೊಡ ನೇ ಜೀವಾ ಳೇ.

H. R.

೧. ಮಹಾ ರಾಜಾಧಿ ಗಗನೊಡೆಯನಮರಾ:||
ಯೆಹೋವ ನಾಮಾಂಕಿತವ:||
ವಿನೋದದೊಳು||: ಚನ್ನಾಗಿ ಹಾಡೊಕೆ:||
ಬೋಧದ ದಾನವ ಕೊಡನೇ?—ಜೀವಾಳೇ

೨. ದೇವಾಧೀಶಾ! ಜಯ ಜಯ ಮನುಜತನಯಾ! :||
ತವಾಮಲಾಂಕಿತ ಜಗದಿ:||
ಗೊತ್ತಾಗಲಿನ್ನು||: ನವೀನ ರಾಗದಿ:||
ತಾರಕಾ ನಾಯಕಾ ಬೋಧಕಾ.—ಜೀವಾಳೇ

೩. ದಿವಾರಾತ್ರೀಲಿ ವಿಮಲ ಬಲದೊಡೆಯಾ! :||
ಕೆರೂಬ ಸೇರಾಫ ಗಣವು:||
ಒಂದೇರವದಿ,||: ವಿಶ್ವಾಸ ಹಾಡೊರು:||
ಪಾವನ ಜೀವನ ವಿಷಯಾ.—ಜೀವಾಳೇ

೪. ವರಾತಿಶಯಾ! ಪಾವನತರಮಲನೇ! :||
ದಿನೇ ದಿನೇ ನೂತನದ:||
ಪದದಿ ರಚಿಸ||: ನನಗೆ ಕಲಿಸಯಾ:||
ಜ್ಞಾನವ ಪಾಲಿಸೋ ದಯನೇ!—ಜೀವಾಳೇ

E. P. K.

☞ ಅಕ್ಟೋಬರ್ ತಿಂಗಳಿನ ಸಭಾಪತ್ರದಲ್ಲಿ ಛಾಪಿಸೋಣಾದ ಗೀತದ ೬ನೇ ಶ್ಲೋಕದಲ್ಲಿ ಒಂದು ತಪ್ಪು ಬಂದ ಹಾಗೆ ತೋರುತ್ತದೆ. ಅದು ಕೆಳಗೆ ಬರದ ಪ್ರಕಾರ ಇರ ತಕ್ಕದ್ದು:

"ನಾಸ್ತಿಕದ ದಾನ" ಅಲ್ಲ, "ನಾಸ್ತಿಕದ ವಾದ."

Des Glaubens Wacht. ವಿಶ್ವಾಸಪಾಲರು.

Mel. Die Wacht am Rhein.

1=1 4/4 { 5 | 1. 3’ 5 5 | 3. 5’ 1 || 1 | 2 3 4 2 | 1. 7’ 7 ||
ಉಂ ಟಾ ಗಿ ದೊಂ ದು ಗ ರ್ಜ ನೆ; ಶ ಸ್ತ್ರ ಕ್ಕೆ ಶ ಸ್ತ್ರ ತಾ ಗು ತೆ;

5 | 3. 3’ 2’. 2” ‡ 1’. 1” | 2¯0 || 7 | 6’. 6” 7’. 1” 7 6 | 5¯0 |
ನಿ ರ್ಘೋ ಷ ಹೆ ಚ್ಚಿ, ಹ ಬ್ಬೊ ದು! ವಿ ಶ್ವಾ ಸ ಪಾ ಲ ರೆ ತ್ತ ಲು?

5 | 2’. 1’ 7 7 | 1. 5’ 5 || 5 | 4. 3’ 2 2 | 3. 2’ 1 0 ||
ಸು ಶಾಂ ತಿ ಪ ಡು, ಸ ಭೆ ಯೆ; ಸು ಶಾಂ ತಿ ಪ ಡು, ಸ ಭೆ ಯೆ;

5¯5 ‡ 5 | 6. 7’ 1 1 | 1¯2¯ | 3¯0¯ || 1¯1 1 | 1. 3’ 5 4 |
ಅ ಧ್ಯ ಕ್ಷ ಕ ಣ್ಣೆ ಚ್ಚ ತ್ತಿ ಧೆ, ಇ ಧೆ! ಅ ಧ್ಯ ಕ್ಷ ಕ ಣ್ಣೆ ಚ್ಚ ತ್ತೆ

3¯2¯ | 1¯0 ||
ಚ್ಚ ತ್ತಿ ಧೆ!

೨. ಸಹಸ್ರ ಮಂದಿ, ನಮ್ಮನು
ನಿರ್ಮೂಲಿಸಲ್ಕೆ, ಎದ್ದರು;
ಕುಯುಕ್ತಿ, ಮೋಸ, ಕಪಟ,
ಬಲಾದಿ ಅವರಾಯುಧ.
ಸುಶಾಂತಿ ಪಡು, ಸಭೆಯೆ;
ಅಧ್ಯಕ್ಷ ಕಣ್ಣ್ ಎಚ್ಚತ್ತಿಧೆ.

೩. ನಾಂ ಭಯಗೊಳ್ಳೆವ್; ಯೇಸುವು
ಕ್ರೂಜೇಲಿ ಹೋರನಾಡಲು,
ವೈರೀಶನ್ ಅಧಿಕಾರವ
ಸಂಪೂರ್ಣವಾಗಿ ಮುರಿದ.
ಸುಶಾಂತಿ ಪಡು, ಸಭೆಯೆ;
ಅಧ್ಯಕ್ಷ ಕಣ್ಣ್ ಎಚ್ಚತ್ತಿಧೆ.

೪. ಹೃತ್ಪಾತನನ್ನು ಸ್ನೇಹಿಸೆ,
ಕೈ ಆತನಡಿ ಹಿಡಿಯೆ,
ನಮ್ಮಾಸ್ಯ ಬೇಡೊ ವರೆಗು
ಯಾವರಿ ನಮ್ಮ ಜೈಸನು!
ಸುಶಾಂತಿ ಪಡು, ಸಭೆಯೆ;
ಅಧ್ಯಕ್ಷ ಕಣ್ಣ್ ಎಚ್ಚತ್ತಿಧೆ.

೫. ಪ್ರಮಾಣ ಮಾಡಿ, ನಂಬಿಕೆ
ಇಟ್ಟೆಮ್ಮ ಯೇಸುನಾಥಗೆ,
ವಿಶ್ವಾಸವನ್ನು ಪಾಲಿಸ
ನಾವೆಲ್ಲರೆದ್ದು, ಹೋರುವ!
ಸುಶಾಂತಿ ಪಡು, ಸಭೆಯೆ;
ಅಧ್ಯಕ್ಷ ಕಣ್ಣ್ ಎಚ್ಚತ್ತಿಧೆ.

J. M.

Printed by Stolz & Reuther, Basel Mission Press, Mangalore.

ಸತ್ಯದೀಪಿಕೆ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. DECEMBER 1870. ಅಂಕೆ ೬.

ಕ್ರಿಸ್ತಿಯಾನನೂ ಆದಾಮನೂ ಇವರಿಬ್ಬರ ಸಂಭಾಷಣೆಯು.

ಕ್ರಿ. ಸಲಾಂ, ಆದಾಮಣ್ಣಾ, ನಿನ್ನನ್ನು ನೋಡಿ ಬಹಳ ದಿವಸವಾಯಿತು. ನಿನಗೆ ಕ್ಷೇಮ ಉಂಟೋ?

ಆ. ಹಾಗೆ ಉಂಟು. ನಿನಗೆ ಹ್ಯಾಗೆ?

ಕ್ರಿ. ದೇವರ ದಯದಿಂದ ನಾನೂ ಮನೆಯವರೂ ಚನ್ನಾಗಿ ಇದ್ದೇವೆ.

ಆ. ನಿನ್ನ ವರ್ತಮಾನ ಇದೊಂದೇ: ನೀನು ಕಷ್ಟವಿಲ್ಲದವನ ಹಾಗಿದ್ಧೀ.

ಕ್ರಿ. ಹಾಗಲ್ಲ, ಎರಡು ತಿಂಗಳು ಹಿಂದೆ ನನ್ನ ಕೂಸು ತೀರಿ ಹೋಯಿತಲ್ಲ! ಆಗ ನನಗೂ ಹೆಂಡತಿಗೂ ಬಹಳ ದುಃಖವಾಯಿತು. ಆದರೆ ದೇವರ ವಾಕ್ಯದಲ್ಲಿ ನಮಗೆ ಒಳ್ಳೇ ಆಧಾರ ಶಿಕ್ಕಿತು.

ಆ. ಅದಿರಲಿ, ಆದರೆ ನಿನ್ನ ಕೈಕೆಲಸವೆಲ್ಲ ಸಾಗುವ ಸಮಯದಲ್ಲಿ ನನ್ನಂತೆ ಬಡವನು ಎಷ್ಟು ಪೇಚಾಡಿದರೂ ಸಾಕಾಗುವದಿಲ್ಲ. ಮನೆಯಲ್ಲಿ ಸಹಾ ಸುಮಾರು ಕರಕರೆ ಆಗುವದುಂಟು.

ಕ್ರಿ. ನಿನ್ನ ಸ್ಥಿತಿ ಹಾಗೋ? ನಿನಗೆ ಸಹಾಯಕರು ಯಾರಿಲ್ಲವೋ?

ಆ. ದೊಡ್ಡವರಿಗೆ ಬೇಕಾದಷ್ಟು ಸ್ನೇಹಿತರು ಇದ್ದಾರೆ ಹೊರ್ತು, ಬಡವರನ್ನು ಯಾರು ನೋಡುತ್ತಾರೆ?

ಕ್ರಿ. ನಿನ್ನ ಸ್ಥಿತಿ ಯಾರಿಗೆ ಗೊತ್ತು ಮಾಡಿದಿ?

ಆ. ಯಾರಿಗೆ ತಿಳಿಸುವದು?

ಕ್ರಿ. ಮನುಷ್ಯರಿಗೆ ತಿಳಿಸದಿದ್ದರೂ ಕರ್ತನಿಗಾದರೂ ಮೊರೆ ಇಡ ಬಹುದಲ್ಲ.

ಆ. ಪ್ರಾರ್ಥನೆ ಮಾಡಿದೆ, ಗುಣ ಕಾಣಲಿಲ್ಲ.

ಕ್ರಿ. ಬೇಸರಾಗ ಬೇಡ. ಕರ್ತನು ತನ್ನಲ್ಲಿ ಭರವಸವಿಡುವ ಒಬ್ಬನನ್ನೂ ಬಿಡನು.

ಆ. ಆತನು ನನ್ನನ್ನು ಬಿಟ್ಟ ಹಾಗಾಯಿತು.

ಕ್ರಿ. ನೀನು ಆತನನ್ನು ಬಿಟ್ಟೆ ಎಂಬಂತೆ ತೋರುತ್ತದೆ. ಈಗ ಕರ್ತನ ಜನ್ಮದ ಹಬ್ಬ ಸಮೀಪ ಬಂತು. ಅದು ಸರ್ವರಿಗೆ ಮಹಾ ಸಂತೋಷದ ವರ್ತಮಾನ ಸಾರುತ್ತದಲ್ಲ.

ಆ. ಹಬ್ಬ ಉಂಟು. ಮಕ್ಕಳಿಗೆ ಏನಾದರೂ ಉಚಿತ ಕೊಡುವ ರೀತಿ ಅದೆ; ಆದರೆ ಖರ್ಜೂರ ಮಿಠಾಯಿ ತಿಂದ ಮೇಲೆ ಸಂತೋಷ ಸಹ ಹೋದ ಹಾಗಾದೀತು.

ಕ್ರಿ. ಹೊರಗಿನ ಆಚಾರದಲ್ಲಿ ತೃಪ್ತಿ ಹುಡುಕುವವರಿಗೆ ಮಾತ್ರ. ನೀನು ಅಂಥವನಲ್ಲವೆಂದು ಕೋರುತ್ತೇನೆ. ನಮ್ಮಲ್ಲಿ ಉಳಿಯುವ ಒಂದು ಸಂತೋಷವದೆ.

ಆ. ಅದೇನು?

ಕ್ರಿ. ಯೇಸು ಕ್ರಿಸ್ತನು ಲೋಕಕ್ಕೆ ಬಂದನು ಮಾತ್ರವಲ್ಲ, ನನಗಾಗಿ ಬಂದನೆಂಬ ನಿಶ್ಚಯ.

ಆ. ಆ ನಿಶ್ಚಯ ನನಗೆ ಇದು ವರೆಗೆ ಆಗಲಿಲ್ಲ.

ಕ್ರಿ. ಇದೇ ನಿನ್ನ ದುರವಸ್ಥೆಯ ಮೂಲ.

ಆ. ಇದಕ್ಕೂ ಅದಕ್ಕೂ ಏನು ಸಂಬಂಧ?

ಕ್ರಿ. ಸಂಬಂಧ ಉಂಟು. ಸಹಾಯಕನನ್ನು ನೋಡದೆ ಕಷ್ಟವನ್ನು ಮಾತ್ರ ನೋಡಿದರೆ, ದುರವಸ್ಥೆಯೇ ಸರಿ.

ಆ. ನಾನು ಕ್ರಿಸ್ತನಲ್ಲಿ ನಂಬುತ್ತೇನಲ್ಲ.

ಕ್ರಿ. ನಂಬುತ್ತೀಯಾ! ಹಾಗಾದರೆ ಸಂತೋಷ ಎಲ್ಲಿ?

ಆ. ಆಗುತ್ತದೋ ಏನೋ.

ಕ್ರಿ. ಸ್ನೇಹಿತನೇ, ಕರ್ತನು ನಮಗಾಗಿ ಬಂದನು ಮಾತ್ರವಲ್ಲ, ನಮ್ಮಲ್ಲಿ ವಾಸ ಮಾಡಲಿಕ್ಕೆ ಸಹಾ ಅಪೇಕ್ಷಿಸುತ್ತಾನೆ.

ಆ. ಹಾಗಿದ್ದರೆ ಒಳ್ಳೇದು.

ಕ್ರಿ. ಆತನು ನಮ್ಮ ಹೃದಯಗಳಲ್ಲಿ ಸೇರುವ ಹಾಗೆ, ಅವುಗಳನ್ನು ಸಿದ್ಧ ಮಾಡ ಬೇಕು.

ಆ. ಅದು ಪ್ರಸಂಗದಲ್ಲಿ ಕೇಳಿದೆ.

ಕ್ರಿ. ಗರ್ವವೆಂಬ ಬೆಟ್ಟಗಳು ತಗ್ಗೂ, ನಿರಾಶೆ ಎಂಬ ತಗ್ಗುಗಳು ಎತ್ತರವೂ ಆಗಿ, ಮಾನಸಾಂತರದಿಂದ ಕರ್ತನ ಮಾರ್ಗವು ನಮ್ಮಲ್ಲಿ ಸಿದ್ಧವಾಗ ಬೇಕು. ಯೆಶಾಯನ ೪೦ನೇ ಸಂಧಿ ಓದು.

ಆ. ಹೌದು, ಹೌದು.

ಕ್ರಿ. ಈ ಪ್ರಕಾರ ಕ್ರಿಸ್ತನು ನಮ್ಮಲ್ಲಿ ಬರುವವನಾದರೆ, ಸಂತೋಷವು ನಮ್ಮಲ್ಲಿ ಉಳಿದು, ನಮಗೆ ಕಷ್ಟವು ಇನ್ನು ಕಷ್ಟವಲ್ಲ, ನಾವು ಹೊತ್ತು ಕೊಳ್ಳುವ ಆತನ ಕ್ರೂಜೆಯೇ. ಮನಸ್ಸಿನಲ್ಲಿಯೂ ಮನೆಯಲ್ಲಿಯೂ ಸಮಾಧಾನವಾಗುತ್ತದೆ, ಮತ್ತು ನಮ್ಮ ಕೆಲಸದಲ್ಲಿ ಸಹಾ ಕರ್ತನ ಆಶೀರ್ವಾದವನ್ನು ಅನುಭವಿಸುವವರಾಗಿದ್ದೇವೆ. ನೀನು ಈ ಪ್ರಕಾರ ಪೇಚಾಡಿದರೆ, ಬೇಸರ ಆಗಲಿಕ್ಕಿಲ್ಲ. ಕರ್ತನು ನಿನಗೂ ನನಗೂ ಸಂತೋಷವುಳ್ಳ ಹಬ್ಬ ದಯಪಾಲಿಸಲಿ!

ಅತಿ ಪ್ರಿಯ ಸಭಾಪತ್ರಕರ್ತರಿಗೆ.

ಅಯ್ಯಾ,

ಒಂದು ಕಾರ್ಯಕ್ಕಾಗಿ, ಸಾರಾಯದ ವಿಷಯ ಒಬ್ಬರು ಪ್ರಶ್ನೆ ಕೊಟ್ಟದ್ದಕ್ಕೆ, ಉತ್ತರವಾಗಿ ಬರೆದ ಆ ಪ್ರಬಂಧವನ್ನು ತಮ್ಮ ಕಡೆಗೆ ಕಳುಹಿಸುತ್ತೇನೆ. ಇದು ಓದುವವರಿಗೆ ಪ್ರಯೋಜನವುಳ್ಳದ್ದೆಂದು ತಮಗೆ ಕಂಡು ಬಂದ ಪಕ್ಷದಲ್ಲಿ, ಇದಕ್ಕೆ ತಮ್ಮ ಸುಂದರವಾದ ಮಾಸಿಕಪತ್ರವೆಂಬ ಸಭಾಪತ್ರದಲ್ಲಿ ಸ್ಥಳ ಕೊಡ ಬೇಕೆಂದು ತಮ್ಮನ್ನು ವಿನಯಪೂರ್ವಕವಾಗಿ ಬೇಡಿ ಕೊಳ್ಳುತ್ತೇನೆ.

೧. ಸಾರಾಯ ಕುಡಿಯುವ ಸಂಗತಿಯ ವಿಷಯ ನಮ್ಮ ಸಭೆಗಳೊಳಗೆ ಹ್ಯಾಗೆ ನಡಿಯುತ್ತದೆ?

೨. ನಮ್ಮ ಸಭೆಗಳೊಳಗೆ ಸಾರಾಯ ಅಗದಿ ಕುಡಿಯ ಬಾರದೆಂತ, ಅಪ್ಪಣೆ ಮಾಡ ಬಹುದೋ ಹ್ಯಾಗೆ? ಮಾಡಲಿಕ್ಕೆ ಆಗದಿದ್ದರೆ, ಸಾರಾಯ ಕುಡಿಯುವದರ ವಿಷಯ ಎಷ್ಟಕ್ಕೆ ಅಪ್ಪಣೆ ಆಗ ಬೇಕು?

ಪ್ರಸ್ತಾವನ.

ಅಯ್ಯಾ, ತಮ್ಮ ಈ ಅವಶ್ಯವಾದ ಪ್ರಶ್ನೆಯ ವಿಷಯ ಯಾವ ರೀತಿ ತೂಕ ಮಾಡಿ ನಿರ್ಣಯ ಬರಿಯ ಬೇಕೆಂಬದು ಒಂದಿಷ್ಟು ಕಷ್ಟದ ಮಾತು. ಆದರೂ, ನನ್ನ ಮಂದಮತಿಗೆ ತಿಳಿದಂತೆ ನಾಲ್ಕು ವಳಿಗಳನ್ನು ಬರೆದು, ತಮ್ಮ ಅಪ್ಪಣೆಯ ಮೇರೆಗೆ ತಮ್ಮ ಸನ್ನಿಧಾನಕ್ಕೆ ಕಳುಹಿಸುತ್ತೇನೆ.

ಅಯ್ಯಾ, ಈ ಮಾದಕ ಪದಾರ್ಥವಾದ ಸಾರಾಯದ ಉತ್ಪತ್ತಿ ಹೊಸದಂತಲ್ಲ, ಎಷ್ಟು ತಲೆಗಳ ಹಿಂದೆ ದಾವ ಮಹಾರಾಯ ಈ ವಿಷವಾದ ಜೇನಸನ್ನು ಬೆಲ್ಲ, ಬ್ಯಾಲದ ವೃಕ್ಷದ ತೋಟೆಯ ಅರಖ, ಭಟ್ಟಿಯಿಂದ ಇಳಿಸುವದಕ್ಕೆ ಆರಂಭ ಮಾಡಿದನೋ ಅದರ ಮಿತಿ ಚನ್ನಾಗಿ ತಿಳಿಯದು. ಆದರೆ ಈ ಹಳೆ ವಿಷವು ಅನೇಕಾನೇಕ ವರುಷಗಳಿಂದ ಈ ನಮ್ಮ ದೇಶದಲ್ಲಿ ಇತ್ತೆಂತಾ ಕಾಣ ಬರುತ್ತದೆ. ಆದರೂ, ಅನೇಕ ಜಾತಿಯ ಜನರಲ್ಲಿ ಇದರ ನಿಷೇಧ ನಡದದೆ. ಏನಿಕೆ ಕಾವ್ಯಪುಸ್ತಕಗಳಲ್ಲಿ ಈ ಮದ್ಯದ ವರ್ತಮಾನ ಶಿಕ್ಕುತ್ತದೆ. ಈ ವಿಷಯ ಅಂದರೆ ಇದರ ಪೂರ್ವೋತ್ತರ ಇಲ್ಲಿ ಗೊತ್ತು ಮಾಡುವದು ನಮ್ಮ ವಿಷಯದ್ದಲ್ಲ. ಆದರೆ ಇದನ್ನು ಮಾತ್ರ ಇಲ್ಲಿ ಹೇಳ ಬೇಕು; ಏನಂದರೆ—ಈ ನಮ್ಮ ದೇಶದೊಳಗೆ ಪೇಶವೆ ಮುಂತಾದ ಸರಕಾರರ ಕಾರಕೀರ್ದಿಯಲ್ಲಿ ಈ ಕೆಟ್ಟ ಪದಾರ್ಥದ ವಿಷಯಕ್ಕೆ ಬಂದೋಬಸ್ತು ಇದ್ದಂತೆ, ಈ ಇಂಗ್ಲಿಷ್ ಅಮಲಿನಲ್ಲಿ ಇಲ್ಲಾ.

ಈ ನಮ್ಮ ದೇಶದಲ್ಲಿ ಪೇಶವಾಯಿ ಹೋಗಿ ಇಂಗ್ಲಿಷ್ ಅಮಲು ಕೂತ ಮೇಲೆ ಎಲ್ಲಾ ಮಾತಿಗೂ ದೇಶಕ್ಕೆ ಶೃಂಗಾರ ಬಂದಂತೆ, ಈ ಸಾರಾಯಿಗೂ ಅದನ್ನು ಮಾರುವವರ ಅಂಗಡಿಗಳಿಗೂ ಅದನ್ನು ಮಾರುವವರಿಗೂ ಶೃಂಗಾರ ಬಂತು. ಮುಂಚೆ ಪೇಶವಾಯಿ

ಯಲ್ಲಿ ಈ ಸಾರಾಯ ಮಾರುವವರು ಸುಮಾರದ ಜನರಾಗಿದ್ದರು; ಮತ್ತು ದೂರ ಒತ್ತಟ್ಟಿಗೆ ಊರ ಹೊರಗೆ ಎಲ್ಲಿಯಾದರೂ ಒಂದು ಗುಡಸಲಿನೊಳಗೆ ಕೊಡಗಳಲ್ಲಿ ಸಾರಾಯ ತುಂಬಿಸಿ ಇಟ್ಟು ಕೊಂಡು, ತೆಂಗಿನ ಚಿಪ್ಪಿನಲ್ಲಿ ಇಲ್ಲವೆ ಕಂಚಿನ ಪಾತ್ರೆಯಲ್ಲಿ ಕುಡಿಯ ಕೊಡುತ್ತಿದ್ದರು. ಆದರೆ ಈಗ, ಈ ಇಂಗ್ಲಿಷ್ ಆದಂದಿನಿಂದ, ಈ ಸಾರಾಯರಾಯನು ಮಧ್ಯ ಊರುಗಳಲ್ಲಿ ಒಳ್ಳೇ ನಾಕೆದಾರ ಸ್ಥಳಗಳಲ್ಲಿ ತನಗೆ ಒಳ್ಳೇ ರೂಪವಾದ ಬಂಗ್ಲೆಗಳಂತಿರುವ ಮನೆಗಳನ್ನು ಮಾಡಿ ಕೊಂಡು, ದೊಡ್ಡ ದೊಡ್ಡ ಬ್ರಾಹ್ಮಣಗೃಹಸ್ಥರ ಮಧ್ಯದಲ್ಲಿ ಒಳ್ಳೇ ಗದ್ದುಗೆಯ ಮೇಲೆ ಕೂತು ಕೊಂಡು, ಉತ್ತಮ ಪಾತ್ರೆ ಗಾಜಿನ ತಮಲರುಗಳಲ್ಲಿ ತನ್ನನ್ನು ಮಾರಾಟ ಮಾಡಿಸಿ ಕೊಳ್ಳುತ್ತಾನೆ. ಈ ಸಾರಾಯ ಮಾರುವವರ ಗಡಂಗಗಳು ಅಥವಾ ಅಂಗಡಿಗಳು ಈ ಒಂದೇ ಹುಬ್ಬಳಿ ಶಹರದಲ್ಲಿ ಒಂದಲ್ಲ, ಎರಡಲ್ಲ, ಹೆಚ್ಚು ಕಡಿಮೆ ಹತ್ತು ಹನ್ನೆರಡು ಅಂಗಡಿಗಳು ಕಾಣಿಸುತ್ತವೆ. ಮತ್ತು ಅವುಗಳು ಮರೆಯಾಗಿರದೆ ಹಾದು ಹೋಗುವವರೆಲ್ಲರಿಗೆ ಅವು ಬೇಗ ಗೊತ್ತು ಆಗುವ ಹಾಗೆ, ಆ ಮನೆಗಳ ಮುಂದೆ ಒಂದೊಂದು ಕಂಭ ನಡಿಸಿ, ಅವುಗಳಿಗೆ ಒಂದು ಬಣ್ಣದ ಹಲಿಗೇ ಮೇಲೆ ಡಾಳವಾದ ಅಕ್ಷರಗಳಿಂದ, "ದಾರೂಚೆ ದುಕಾನ" (ಸಾರಾಯದ ಅಂಗಡಿ) ಎಂತ ಎರಡು ಮೂರು ಭಾಷೆಯ ಅಕ್ಷರಗಳಿಂದ ಬರೆದು ತೂಗ ಹಾಕಿರುತ್ತಾರೆ. ಇವುಗಳ ಹೊರ್ತು ಬಿಂದಿ, ಅಂದರೆ ಈಚಲದ ಅಂಗಡಿಗಳೂ ಹೆಂಡದ ಅಂಗಡಿಗಳೂ ಬೇರೆ ಉಂಟು; ಶಿವಾಯಿ, ಈವಾಗ ನೂತನವಾಗಿ ದ್ವೀಪಾಂತರದಿಂದ ಜಲಮಾರ್ಗವಾಗಿ ನೌಕಾ ಏರಿ ಕೊಂಡು ಬರುವ ಮದ್ಯಪಾನಗಳ ಅಂಗಡಿ ಆರಂಭವಾಗಿದೆ.

ಇದಲ್ಲದೆ ಈ ಸಾರಾಯದ ಅಂಗಡಿಯವರ ಸ್ವಾಧೀನಕ್ಕೆ ಯಾವ ಜೀನಸು ಎತ್ತ ಕಡೆಯಿಂದ ಬಂದರೂ, ಕೇಳುವವರೇ ಇಲ್ಲಾ. ಕಳವಿನ ಪದಾರ್ಥಗಳನ್ನು ಸಹ ಅವರು ಅಡವು ಇಟ್ಟು ಕೊಳ್ಳುತ್ತಾರೆಂತ ಕೇಳಿದ್ದೇನೆ. ಇವರ ಸಾಲಕ್ಕೆ ಕೇವಲ ಘಟಿಂಗರು ಸಹಾ ಹೆದರಿ, ಬೇಡಿದಾಕ್ಷಣವೆ ಕೊಡುತ್ತಾರೆ. ಇವರ ಜರ್ಬು ತಮಗೆ ಸಾಲಾ ಕೊಡ ತಕ್ಕವರ ಮೇಲೆ, ಕೇವಲ ಪೋಲಿಸ್ ಅಮಲದಾರರ ಅಧಿಕಾರ ನಡಿಯುವಂತೆ, ನಡಿಯುತ್ತದೆ. ಇವರಿಗೆ ತಮ್ಮ ಹಣ ಮುಳಿಗೀತೆಂಬ ಭಯ ಎಳ್ಳಷ್ಟಾದರೂ ಇರುವದಿಲ್ಲ.

ಅಯ್ಯೊ, ಇದೇ ನಮ್ಮ ಹುಬ್ಬಳಿ ಶಹರದ ಗುತ್ತೆ. ಮಾಜಿ ಅಮಲಿನಲ್ಲಿ ಒಂದು ವರುಷಕ್ಕೆ ೨೦೦ ಬಹಳವಾದರೆ ೩೦೦ ರೂಪಾಯಗಳಿಗೆ ಗುತ್ತೆ ಕಟ್ಟಿಸಿ ಕೊಳ್ಳುತ್ತಿದ್ದರಂತೆ. ತರುವಾಯ ೬೦—೭೦ ವರುಷಗಳ ಹಿಂದೆ ಸಾಂಗಲಿಯವರ ಅಧಿಕಾರದೊಳಗಿಂದ ಈ ಶಹರ ಇಂಗ್ಲಿಷಿನವರ ಅಧಿಕಾರಕ್ಕೆ ಒಳಗಾದ ಮೇಲೆ, ಸಾರಾಯ ಎಂಬ ಈ ಮಾದಕ ರಾಕ್ಷಸನ ಕ್ರಯ ದಿನಕ್ಕೊಂದು ಚಂದ ಏರುತ್ತ ಬಂತು. ಇವರ ಅಮಲಿನಲ್ಲಿ ಈ ಹುಬ್ಬಳಿ ಶಹರ ತಾಲೂಕು ಸ್ಥಳವಾದಂದಿನಿಂದಂತು ಈ ಹುಬ್ಬಳಿ ತಾಲೂಕಿನ ಗುತ್ತೆ ಯಾವ ವರುಷ ೧೦೦೦, ಯಾವ ವರುಷ ೪೦೦೦, ಯಾವ ವರುಷ ೮೦೦೦, ಯಾವ ವರುಷ ೧೦೦೦೦, ಯಾವ ವರುಷ ೧೯೦೦೦, ಕಡೆಗೆ ೨೨೦೦೦ ಆಗಿ, ಅಲ್ಲಿಂದ ತಾಲೂಕಲ್ಲ, ಬರೆ ಶಹರದ ಪೂರ್ತಿಗೆ ಸನ್ ೧೮೬೩ನೇ ಇಸವಿಯಲ್ಲಿ ೨೫೦೦೦ ರೂಪಾಯಿಗಳಾಗಿ,

ಇಲ್ಲಿಗೆ ನಿಲ್ಲದೆ, ಮುಂದೆ ೨೮೦೦೦, ತರುವಾಯ ೩೩೦೦೦, ಅಲ್ಲಿಂದ ಕಡೆಗೆ ೧೮೯೯ನೆಯ ಲ್ಲಿ ೫೬೦೦೦ ರೂಪಾಯಿಗಳಿಗೆ ಮೊಕ್ತೆ ಮಾಡಿ ಕೊಂಡರು.

ಪ್ರಚಂಡವಾಯುವಿನಿಂದ ಏರಿ ಬರುವ ಕಡಲಿನ ತೆರೆಗಳಂತೆ ಕ್ರಯ ಏರುತ್ತ ನಡೆದ ಈ ಸಾರಾಯದ ಅದೃಷ್ಟ ನೋಡ ಬಾರದೆ? ಇದರ ದೈವ ಏನು ತೆರಿಯಿತು! ರಾಶಿ ರಾಶಿಯಾಗಿ ಏರಿದ ಈ ಹಣದ ರಾಶಿಯ ಮೇಲೆ ಚನ್ನಾಗಿ ದೃಷ್ಟಿ ಇಟ್ಟು ನೋಡಿದರೆ, ಇದರಿಂದ ಈಗ ನಮ್ಮ ದೇಶದಲ್ಲಿ ಸಾರಾಯ ಕುಡಿಯುವದು ಎಷ್ಟು ಪ್ರಬಲವಾಯಿತೆಂಬದನ್ನೂ, ಹಾಂಗು ಅದರ ವಿಷಯ ಹ್ಯಾಗುಂಟೆಂಬದನ್ನೂ ಓದುವವರು ಸ್ವತೇವ ತರ್ಕ ಕಟ್ಟಬಹುದು. ಮತ್ತು ನಾನು ಇಲ್ಲಿ ತೋರಿಸಿದ ಹಣ ಒಂದು ತಾಲೂಕು ಇಲ್ಲವೆ ಒಂದು ಶಹರದ್ದು ಮಾತ್ರವಾಯಿತು. ಅಃ! ಒಟ್ಟಿಗೆ ನಮ್ಮ ಜಂಬುದ್ವೀಪದ್ದು ಕೂಡಿದರೆ, ಎಷ್ಟು ಹಣ! ಏಂಥಾ ರಾಶಿ! ಇದರ ಮೇಲಿಂದ ಕುಡಿಯುವವರ ಸಂಖ್ಯೆ ದೇಶದ ಮೇಲೆ ಎಷ್ಟು ಹೆಚ್ಚಾಯಿತೆಂದು ತಿಳುಕೊಂಡು, ಸುಮ್ಮನೆ ಬಾಯಿ ಮೇಲೆ ಕೈ ಇಡ ಬೇಕಾಗುವದು.

ಇದಕ್ಕೆ ದಾರೊಬ್ಬ ಅಪವಾದವಾಗಿ, ಹೀಗೆ ಆಕ್ಷೇಪಣೆ ಮಾಡ ಬಹುದು. ಏನಂದರೆ—ಮೊದಲು ದೇಶದ ಮೇಲೆ ಇಷ್ಟು ಜನ ಇರಲಿಲ್ಲ; ಈಗ ದೇಶದ ಮೇಲೆ ಜನ ಲಬ್ಧ ಹೆಚ್ಚಾಯಿತು. ಹಾಗೆ ಹುಬ್ಬಳಿ ತಾಲೂಕಿನಲ್ಲಿಯೂ ಹುಬ್ಬಳಿಯಲ್ಲಿಯೂ ಜನರ ಸಂಖ್ಯೆ ಹೆಚ್ಚಾದ ಕಾರಣ ಸಾರಾಯದ ದರಖಾಸ್ತು ಇಷ್ಟು ಏರಿ, ಸಹಸ್ರ ಸಹಸ್ರ ಸಂಖ್ಯೆಯಾಗಿ ಬೆಳಿಯಿತು. ಆದರೆ ಇದೇನು ಸರಿಯಾದ ತರ್ಕ ಕಟ್ಟೋಣವಲ್ಲ. ಜನ ಹೆಚ್ಚಿದರೆ, ಈ ೬೦—೭೦ ವರುಷಗಳೊಳಗೆ ಎಷ್ಟು ಹೆಚ್ಚಿದ್ದಾರು? ಇದೊಂದೆ ಹುಬ್ಬಳಿ ಶಹರದಲ್ಲಿ, ಬಹಳವಾದರೆ, ೩೦—೪೦ ಸಾವಿರ ಜನ ಮುಂಚಿಗಿಂತ ಹೆಚ್ಚಾಗಿದ್ದಾರು. ಹಾಗಾದರೆ ಜನರಲ್ಲಿ ಈವಾಗ ಕುಡಿಯುವದು ಹೆಚ್ಚಾಗದಿದ್ದರೆ, ಅದರ ದರಖಾಸ್ತು ಇನ್ನೂರು ರೂಪಾಯಿಗಳು ಹೋಗಿ ೪೦೦ ರೂಪಾಯಿಗಳಾಗ ಬಹುದಿತ್ತು. ಹೋಗಲಿ, ಕಡೆಗೆ ೬೦೦ ರೂಪಾಯಿಗಳಾದರೂ ಆಗ ಬಹುದಾಗಿತ್ತು. ಆದರೆ ಇದೇನು, ಮೇರೆ ದಪ್ಪಿ ಅಂದರೆ ೫೬ ಸಾವಿರ ರೂಪಾಯಿಗಳ ತನಕ ನಡಿಯಿತು! ಇದರ ಮೇಲಿಂದ ಕೇವಲ ಹೀಗೆ ಶಿದ್ಧಾಂತ ಮಾಡಲಿಕ್ಕೆ ಆಗುತ್ತದಲ್ಲ; ಏನಂದರೆ ಈಗ್ಯೆ ಅಂದರೆ ಇತ್ತಕಡೆ ಈ ಇಂಗ್ಲಿಷ್ ದರಬಾರ ಆದ ಮೇಲೆ ನಾಲ್ಕು ಜನರ ಕೈಯೊಳಗೆ ರೊಖ್ಖವಾಗಿ ಸ್ವತಂತ್ರ ಹೆಚ್ಚಾದ ಕಾರಣ, ಮನೆಮಾರುಗಳೂ ವಸ್ತ್ರಾಲಂಕಾರಗಳೂ ಊಟ ಉಪಚಾರ ಮೊದಲಾದ ಸಂತೋಷ ಪಡ ತಕ್ಕ ವೈಭವವೂ ಹ್ಯಾಗೆ ಹೆಚ್ಚಾಯಿತೋ, ಹಾಗೆ ದುಃಖವನ್ನುಂಟು ಮಾಡುವಂಥ, ಈ ಲಾಹರಿ ಮಾಡುವ ವ್ಯಸನವು ಸಹ ಈ ನಮ್ಮ ದೇಶದಲ್ಲಿ ಹೆಚ್ಚಾಯಿತೆಂಬದಕ್ಕೆ ಏನೇನು ಅನುಮಾನವಿಲ್ಲ. ಇದಲ್ಲದೆ ಈ ಸಾರಾಯ ಎಂಬ ತಾಯಿಯಿಂದ ಹತ್ಯ, ಕೊಲೆ, ಕಳ್ಳತನ, ಜೂಜಾಟವೆಂಬ ಅದರ ಮರಿಗಳ ಪ್ರಬಲ ಸಹ ದೇಶದ ಮೇಲೆ ಹೆಚ್ಚಾಯಿತು. ಹಾಗಾದರೇನು, ಈಗಿನ ಕಾಲದಲ್ಲಿ ಕುಡಿಯುವ ಸಂಗತಿ ಜನರೊಳಗೆ ಅತಿಶಯವಾಯಿತೆಂದು ಮೇಲೆ ಹೇಳಿದ ಸಂಗತಿಯಿಂದ ಅದನ್ನು ಓದುವವರು ಚನ್ನಾಗಿ ತಿಳುಕೊಳ್ಳ ಬಹುದು. ಇನ್ನು ಹೆಚ್ಚಿಗೆ ಬರಿಯುವದು ಅವಶ್ಯವಿಲ್ಲ.

೧. ಸಾರಾಯು ಕುಡಿಯುವದು ನಮ್ಮ ಸಭೆಗಳಲ್ಲಿ ಹ್ಯಾಗೆ ನಡಿಯುತ್ತದೆ?

ಅಯ್ಯಾ, ತಮ್ಮ ಈ ಪ್ರಶ್ನೆಗೆ ಉತ್ತರ ಕೊಡುವದು ಒಂದಿಷ್ಟು ಪ್ರಯಾಸದ ಮಾತು. ಆದಾಗ್ಯೂ ತಿಳಿದದ್ದನ್ನೂ ಕೇಳಿದ್ದನ್ನೂ ಹೇಳ ಬೇಕಾಗುತ್ತದೆ. ಈ ಪ್ರಶ್ನೆ ಮಾಡಲಿಕ್ಕೆ ನಮ್ಮ ಸಭೆಗಳಲ್ಲಿ ಆಸ್ಪದ ಶಿಕ್ಕದೆ ಇದ್ದರೆ, ಎಷ್ಟೊ ಉತ್ತಮವಾಗಿರುತ್ತಿತ್ತು.

ಈ ನಮ್ಮ ದಕ್ಷಿಣ ಮಹಾರಾಷ್ಟ್ರ ದೇಶದಲ್ಲಿರುವ ನಮ್ಮ ನಾಲ್ಕಾರು ಮಿಶನು ಠಾಣ್ಯಗಳಲ್ಲಿ ಅನ್ಯ ಜನರೊಳಗಿಂದ ಹೊರಟು ಬಂದು ಕ್ರೈಸ್ತರಾದವರೆ ಮೂಲಥಾ ಸ್ವಲ್ಪ ಅದರೊಳಗೆ ವಿಶೇಷವಾಗಿ ಪ್ರಥಮಕ್ಕೆ ಕುಡಿಯದ ಜಾತಿಯ ಜನರೆ ಬಹಳ, ಕುಡಿಯೊ ಜಾತಿಯ ಜನರು ಸ್ವಲ್ಪ ಮಾತ್ರ ಇದ್ಧಾರೆ. ಆದರೆ ಅವರೆಲ್ಲರು ನಮ್ಮಲ್ಲಿಗೆ ಬಂದಾರಭ್ಯದಿಂದ ಈ ಹೊತ್ತಿನ ವರೆಗೆ ಕುಡಿಯುತ್ತ ಬಂದರಂತಲ್ಲ; ಅವರಿಗೆ ಪ್ರಥಮಕ್ಕೆ ಸಭೆಗೆ ಬಂದಾಗ್ಯೆ ಕ್ರೈಸ್ತರು ಸಾರಾಯಿ ಕುಡಿಯ ಬಾರದೆಂತ ಇದ್ದ ತಿಳುವಿಕೆ, ಭಯ, ಚಿಂತೆ ಮೊದಲಾದದ್ದು ಈವಾಗ ಇರುವದಿಲ್ಲ. ಬರುತ್ತಾ ಬರುತ್ತಾ ರಾಯನ ಕುದುರೆ ಕತ್ತೆಯಾಯಿತೆಂಬ ಗಾದೆಯ ಮಾತಿನಂತೆ, ಅವರು ಮುಂಚಿನ ತಮ್ಮ ಕ್ರಿಯೆಗಳನ್ನು ಬಿಡುವವರಾಗಿಯೂ ಭಯವಿಲ್ಲದವರಾಗಿಯೂ ನಡಿಯುತ್ತ ಬರುತ್ತಾರೆಂಬದು ಅಂಥವರ ವಿಷಯ ಅನುಭವ ಮಾಡಿದವರೆಲ್ಲರಿಗೂ ತಿಳಿದೆ ಇರುವದು. ಆದರೆ ಇತ್ತ ಕಡೆ ನಾಲ್ಕಾರು ವರುಷಗಳಿಂದ ನಮ್ಮ ಸಭೆಗಳಲ್ಲಿ ಅದು ಪ್ರಬಲವಾಗುವ ಹಾಗೆ ತೋರುತ್ತದೆ. ಅನ್ಯ ಜನರಂತೆ ಪೇಟೆಯಲ್ಲಿ ಕುಡಿದು ಬೀದಿಗಳಲ್ಲಿ ಹೊರಳಾಡದೆ ಇದ್ದರೂ, ಮನೆಗಳೊಳಗೆ ಊಟದ ಸಮಯದಲ್ಲಿ ವಾರಕ್ಕೆ ಒಮ್ಮೆಯಾದರೂ ತಂದು ಕುಡಿಯುತ್ತಾರೆಂತ ಘಾಳಿವಾಹಿನಿ ಉಂಟು. ಇದರ ಹೊರ್ತು ತಮ್ಮ ತಮ್ಮೊಳಗೆ ಏನಾದರೂ ಪ್ರಸ್ತ ಮುಂತಾದದ್ದು ಆದ ಸಮಯದಲ್ಲಿಯೂ, ವಿಶೇಷವಾಗಿ ಆಯಾಸದ ಸಮಯಗಳಲ್ಲಿಯೂ, ಅಸ್ವಸ್ಥದ ಸಮಯಗಳಲ್ಲಿಯೂ, ಅದನ್ನು ತಕ್ಕೊಳ್ಳುವ ಪರಿಪಾಟ ಅದೆ ಅಂತ ವಾರ್ತೆ ಉಂಟು. ಮತ್ತು ತಾವೇ ಅಂಗಡಿಗಳಿಗೆ ಹೋಗಿ ತರುವ, ಹಾಂಗು ಎರಡನೆಯವರ ಕಡೆಯಿಂದ ತರಿಸುವದನ್ನು ಕಾಣಿಸುತ್ತದೆ. ತಾವು ಮಾತ್ರ ಕುಡಿಯುವದು ಅಲ್ಲದೆ, ಬೇರೆ ಎಂದೂ ಕುಡಿಯದ ಜನರಿಗೆ ಸಹ ಕುಡಿಯಲಿಕ್ಕೆ ಕೊಡುತ್ತಾರೆಂಬ ವರ್ತಮಾನ ಉಂಟು. ಇತ್ತ ಕಡೆಯಲ್ಲಿ ಕುಡಿದು ಕಾರಿ ಹುಚ್ಚಾಟ ಮಾಡಿದರೆಂತ ಸಹ ಸುದ್ದಿ ಉಂಟು. ಇವುಗಳ ಹೊರ್ತು ಸಾರಾಯ ಯಾಕೆ ಕುಡಿಯ ಬಾರದೆಂತಲೂ, ಅಮಲು ಮಾತ್ರ ಆಗದಿದ್ದರೆ ಸರಿ ಎಂತಲೂ, ಏನಾದರೂ ಹುಚ್ಚು ಕೆಲಸಗಳನ್ನು ಮಾಡದೆ ಇದ್ದರೆ ಆಯಿತೆಂತಲೂ, ಮತ್ತು ಅದರಲ್ಲಿ ಏನು ದೋಷವದೆ? ಅದು ಒಂದು ರಸವಲ್ಲವೇ? ಎಂತಲೂ ಸಹ ತರ್ಕ ಮಾಡ ತೊಡಗಿದ್ಧಾರೆ. ಹಾಂಗು ಕುಡಿಯುವದರಿಂದ ನಮ್ಮ ಸಭೆಗಳೊಳಗೆ ಅಷ್ಟು ಇಷ್ಟು ಕೇಡುಗಳು ಸಹ ಸಂಭವಿಸಿದವು.

ನಮ್ಮ ಸಭೆಗಳಲ್ಲಿ ಕುಡಿಯುವದರ ವಿಷಯ ನಡಿಯುವ ಸಂಗತಿ ಇಷ್ಟೆ ಸರಿ, ಅಂದರೆ ಇದೇನು ಕಡಿಮೆ ಮಾತು ಆಗಲಿಲ್ಲ. ಯಾಕಂದರೆ ಕ್ರೈಸ್ತರು ಧಿರದಲ್ಲಿ ತೊಳಿಯಲ್ಪಟ್ಟವರೂ ಪರಿಶುದ್ಧರೂ ದೇವರ ಮಕ್ಕಳೂ ಎಂಬ ನಾಮವನ್ನು ಧಾರಣ ಮಾಡಿದವರಿ

ಗೆ ಇದೇನು ಸಣ್ಣ ಕುಂದು, ಸಾಧಾರಣ ಬಟ್ಟಾ ಅಲ್ಲ. ಇದಕ್ಕಿಂತ ಹೆಚ್ಚಿನದಾಗುವದು ಬೇಡವೇ ಬೇಡ, ಇಷ್ಟೇ ನಾಚಿಕೆ ಸಾಕು. ಆದರೂ, ಈವಾಗ ಸಸಿಯುಂತಿರುವ, ಈ ಸಾರಾಯ ಕುಡಿಯುವ ವ್ಯಸನವು ಮುಂದೆ ನಮ್ಮ ಸಭೆಗಳೊಳಗೆ ದೊಡ್ಡ ವೃಕ್ಷದಂತೆ ಬೆಳಿಯ ಬಹುದೆಂದು ತರ್ಕ ಕಟ್ಟಲಿಕ್ಕೆ ಏನೂ ಅನುಮಾನ ಉಳಿಯುವದಿಲ್ಲ. ಮತ್ತು ಅದು ನಮ್ಮ ಸಭೆಗಳೊಳಗೆ ನಿರ್ಭಯವಾಗಿ ಹೆಚ್ಚುತ್ತ ಬರುವದನ್ನು ಕಣ್ಣಾರೆ ನೋಡುತ್ತೇವಲ್ಲ?

ಆದರೆ ಘಟ್ಟದ ಕೆಳಗೆ ನಮ್ಮ ಸಭೆಗಳೊಳಗೆ ತೆಂಗಿನ ಕಳ್ಳು, ತಾಡಿ ಮಾಡಿ ಸಾರಾಯ ಕುಡಿಯುವದರ ವಿಷಯ ಹ್ಯಾಗೆ ನಡದದೋ, ಅದು ನನಗೆ ಚನ್ನಾಗಿ ತಿಳಿಯದು.

ಇದಲ್ಲದೆ ಸಾರಾಯ ಮಾರುವವರು ಸಹ, ಕುಡಿಯುವದನ್ನು ಬಿಟ್ಟವರಾದ ನೀವು ಸಹ ಕುಡಿಯಲಿಕ್ಕೆ ತಿರಿಗಿ ಆರಂಭ ಮಾಡುತ್ತೀರಾ? ಅನ್ನುತ್ತಾರೆಂತ ಕುಡಿಯುವ ವ್ಯಸನದಲ್ಲಿ ಇರುವವರ ಬಾಯಿಯಿಂದ ಕೇಳಿದ್ದೇನೆ. ಇಷ್ಟರ ಮೇಲಿಂದ ಕುಡಿಯುವಂಥ ನಮ್ಮ ಸಭೆಗಳ ಜನಕ್ಕೆ ನಾಚಿಕೆ ಬರ ತಕ್ಕದ್ದು. ಬಿಟ್ಟು ಬಿಡ ತಕ್ಕದ್ದು, ಆದರೆ ಈ ಜನ ಹಾಗೆ ಮಾಡುವದಿಲ್ಲ. ಏನು ಮಾಡ ಬೇಕು?

೨. ನಮ್ಮ ಸಭೆಗಳಲ್ಲಿ ಸಾರಾಯಿ ಅಗದಿ ಕುಡಿಯು ಬಾರದೆಂತ ಅಪ್ಪಣೆ ಮಾಡ ಬಹುದೋ ಹ್ಯಾಗೆ?

ಅಯ್ಯಾ, ಈ ಎರಡನೇ ಭಾಗದಲ್ಲಿರುವ ತಮ್ಮ ಈ ಪ್ರಶ್ನೆಗೆ ನಾನೇನು ಉತ್ತರ ಬರಿಯಲಿ? ಸಾರಾಯ ಅಗದಿ ಕುಡಿಯ ಬಾರದೆಂತ ಅಪ್ಪಣೆ ಮಾಡ ಬಹುದೋ ಹ್ಯಾಗೆ? ಅಂತ ಕೇಳುವದೇನದೆ, ಅಂದರೆ ಅಪ್ಪಣೆ ಸಾವಿರ ಪಾಲಿಗೂ ಕೊಡ ಕೂಡದು. ಯಾಕಂದರೆ, ಮೋಸಗೊಳಿಸುವಂಥ, ಅಮಂಗಲವಾದ, ಮಹಾ ಅನರ್ಥವನ್ನುಂಟು ಮಾಡುವಂಥ ಈ ಪದಾರ್ಥದ ವಿಷಯಕ್ಕೆ ದೇವರ ವಾಕ್ಯದ ಅನೇಕ ಸ್ಥಳಗಳೂ, ಹಿಂದು ಮುಸಲಮಾನರ ಕಾವ್ಯಗಳೂ ನಿರ್ಣಯ ಮಾಡುತ್ತವೆ, ತಾವೆ ಚನ್ನಾಗಿ ಉತ್ತರ ಕೊಡುತ್ತವೆ, ಮತ್ತು ಅದನ್ನು ಪೂರ್ಣವಾಗಿ ನಿಷೇಧಿಸುತ್ತವೆ. ಅವುಗಳನ್ನೆ ಇಲ್ಲಿ ಉದಾಹರಣೆಯಾಗಿ ಹೇಳಿದರೆ, ತೀರಲಿಲ್ಲವೆ? ನನ್ನ ನಿರ್ಣಯ ಯಾತಕ್ಕೆ ಬೇಕು? ಆ ದೇವರ ವಾಕ್ಯದ ಸ್ಥಳಗಳು: ಮತ್ತಾಯ. ೨೪, ೪೮—೫೧. ರೋಮ. ೧೩, ೧೩. ೧ ಕೊರಿಂಥ. ೬, ೧೦. ಗಲಾ. ೫, ೧೯—೨೧. ಈ ಮುಂತಾದ ವಚನಗಳ ಮೇಲಿಂದ ಕುಡಿಯ ಬಾರದೆಂತ ಅಪ್ಪಣೆ ಮಾಡ ಬಹುದೋ ಹ್ಯಾಗೆ? ಮತ್ತು ಕುಡಿಯುವವರು ಎಂಥವರು? ಎಲ್ಲಿಗೆ ಹೋಗುವವರು? ಯಾವ ಭಾವದವರು? ಎಂಬವುಗಳನ್ನೆಲ್ಲ ಈ ವಚನಗಳನ್ನು ಓದಿ ನೋಡುವವರು ಚನ್ನಾಗಿ ತಿಳುಕೊಳ್ಳ ಬಹುದು.

ಮತ್ತು ಅನೇಕ ವಿಷಯಗಳಲ್ಲಿ ಸರಿಯಾದ ಬೋಧನೆ ಕೊಡುವ ಅನುಭವಾಮೃತ ಎಂಬ ಹಿಂದು ಜನರ ಪುಸ್ತಕದಲ್ಲಿ ಇದರ ವಿಷಯವಾಗಿ ಹೇಳಿರುವದೇನಂದರೆ:

"ಮೊದಲೆ ಮರ್ಕಟ ಮೇಲೆ ಮಧ್ಯದ ಮದವು ತಲೆ ಹಿಡಿದಿರಲು—"

ಅಂದರೆ, ಕಾಮ, ಕ್ರೋಧ, ಲೋಭ, ಮೋಹ, ಮದ ಮುಂತಾದ ದುರ್ಗುಣಗಳಿಂದ ತುಂಬಿರುವ ಈ ನರನು ಮದ್ಯ ಕುಡಿಯ ತೊಡಗಿದರೆ ಎಂಥಾ ಅವಸ್ಥೆಯಾಗುವದೆಂಬದನ್ನೂ, ಮತ್ತು ಅದರಿಂದುಂಟಾಗುವ ಭಯಂಕರ ನಾಶನವನ್ನೂ ತಿಳಿದವರಿಗೆ ಇಲ್ಲಿ ವಿವರಿಸುವದೇ ಬೇಡ; ಯಾಕಂದರೆ ಇದರ ಪ್ರಶಂಸೆ ಮೊದಲೆ ಪುಷ್ಕಳವಾಗಿದೆ.

ಇನ್ನೊಂದು, ಕುಡಿಯ ಬಾರದು, ಕುಡಿದರೆ ಅದರಿಂದ ಬಹು ಅನರ್ಥ ಉಂಟೆಂಬದಕ್ಕೆ ನಾನು ಮುಸಲ್ಮಾನರ ಒಂದು ಪುಸ್ತಕದಲ್ಲಿ ಓದಿದ ಒಂದು ಚಿಕ್ಕ ಕಥೆ ಇಲ್ಲಿ ನನ್ನ ನೆನಪಿಗೆ ಬರುತ್ತದೆ. ಮತ್ತು ಅದು ಕುಡಿಯ ಬಾರದೆಂಬದರ ವಿಷಯಕ್ಕೆ ಉತ್ಕೃಷ್ಟ ಬೋಧನೆ ಕೊಡುತ್ತದೆ. ಅದು ಭಾಷಾಂತರ ಮಾಡಿದರೆ ಹೀಗೆ—

ಪೂರ್ವ ಕಾಲದಲ್ಲಿ ಬಹು ವೈರಾಗ್ಯವೂ ನೇಮನಿಷ್ಠೆಯೂ ಉಳ್ಳ ಒಬ್ಬ ಫಕೀರ (ಮುಸಲಮಾನರ ಸನ್ಯಾಸಿ) ಇದ್ದನು. ಅವನು ಒಂದಾನೊಂದು ದಿವಸ ಮಹಾ ಹಶಿವೆ ತೃಷಿಯಿಂದ ಒಂದು ಘೋರಾರಣ್ಯಕ್ಕೆ ಬಂದು, ಅಲ್ಲಿ ಸುತ್ತಲು ದೃಷ್ಟಿಸಿ ನೋಡುವಾಗ ಅವನಿಗೆ ಆಹಾರಕ್ಕೆ ಎಲ್ಲಿಯೂ ಸ್ಥಳ ಕಾಣಲಿಲ್ಲ. ಬಳಿಕ ಆ ಸನ್ಯಾಸಿಯು ಬಹು ಶ್ರಮೆಯಿಂದ ಸ್ವಲ್ಪ ಮುಂದಕ್ಕೆ ಬಂದಾಗ, ಅವನಿಗೆ ಆ ಅರಣ್ಯದಲ್ಲಿ ಒಂದು ಬಹು ಸುಂದರವಾದ ಮಂದಿರವು ದೃಷ್ಟಿಗೆ ಬಿತ್ತು. ಆಗಲಾ ಸನ್ಯಾಸಿಯು ಹೇಳ ಕೂಡದ ಸಂತೋಷದಿಂದ ಆ ಮಂದಿರ ಇರುವ ಸ್ಥಳಕ್ಕೆ ಬಂದು ಮುಟ್ಟಿದನು. ಬಂದಾಕ್ಷಣವೆ ಆ ಮಂದಿರವನ್ನು ಹುಲಿವರಿದು ನೋಡುವಾಗ, ಅದಕ್ಕೆ ನಾಲ್ಕು ದ್ವಾರಗಳಿದ್ದವು. ಅವುಗಳೊಳಗೆ ಮೊದಲನೇ ಬಾಗಿಲಿನ ಬಳಿಯಲ್ಲಿ ನಿಂತಿರುವವರಿಗೆ ಅವನು: ಅಯ್ಯಗಳೆ, ನಾನೀಗ ಹಶಿವೆ ತೃಷಿಗಳಿಂದ ಸಾಯುವ ಹಾಗೆ ಇದ್ಧೇನೆ. ಆದ ಕಾರಣ ದಯ ಮಾಡಿ ನನಗೆ ಏನಾದರೂ ಆಹಾರ ಕೊಡಿಸಿರಿ, ಅಂದಲ್ಲಿ, ಅವರು: ಆದೀತು, ಪರಂತು ನಮ್ಮಲ್ಲಿ ಇದೊಂದು ಎಳೆ ಕೂಸು ಉಂಟು, ಇದನ್ನು ಕೊಂದರೆ ಹೊರ್ತು ನಮ್ಮಲ್ಲಿ ಊಟಕ್ಕೆ ಕೊಡುವ ಸಾಂಪ್ರದಾಯವಿಲ್ಲ, ಅಂಬೋಣ, ಅವನು: ಛೀ! ಇದು ನನ್ನಂಥ ಸನ್ಯಾಸಿಗೆ ಸಲ್ಲುವ ಕೆಲಸವೆ! ಅಂತಾ ಹೇಳಿ, ಅಲ್ಲಿಂದ ಎರಡನೇ ಬಾಗಿಲಿಗೆ ಹೋಗಿ: ದೇಹಿ, ಹಶಿದು ಬಂದಿದ್ಧೇನೆ; ಕರುಣೆ ಮಾಡಿ, ಊಟಕ್ಕೆ ಕೊಡಿರಿ, ಅಂದಲ್ಲಿ, ಅಲ್ಲಿರುವವರು: ಆದೀತು, ಆದರೆ ನಮ್ಮಲ್ಲಿ ಹಂದಿ ಮಾಂಸ ತಿನ್ನುವವರಿಗೆ ಭೋಜನಕ್ಕಿಕ್ಕುವ ಮರ್ಯಾದೆ ಉಂಟು; ಆದ ಕಾರಣ ನೀವು ಮಟ್ಟಮೊದಲು ಅದನ್ನು ತಿಂಬುವದಕ್ಕೆ ಒಪ್ಪಿ ಕೊಂಡರೆ, ತರುವಾಯದಲ್ಲಿ ನಿಮಗೆ ತೃಪ್ತಿ ಆಗುವಷ್ಟು ಬೇರೆ ಮೃಷ್ಟಾಂನ ಶಿಕ್ಕುವದು ಎಂಬೋಣ, ಆ ಫಕೀರನು: ಅಯ್ಯೋ ಕರ್ಮವೆ! ಎಂದು ಉಸರುಗಳೆದು, ನನ್ನ ಪ್ರಾಣ ಈಗಲೆ ಹೋದರೂ ಚಿಂತೆ ಇಲ್ಲ; ಆದರೆ ಇದು ಮುಸಲಮಾನನಾದ ನನ್ನಿಂದ ಸರ್ವಥಾ ಆಗದ ಮಾತು! ಎಂದು ಹೇಳಿ, ಮೂರನೇ ಬಾಗಿಲಿಗೆ ಹೋಗಿ ಅದೇ ಮಾತು ಹೇಳಿ, ಆಹಾರ ಬೇಡಿದನು. ಅಲ್ಲಿಯವರು: ನಮ್ಮಲ್ಲಿ ಮೊದಲಾಗಿ ಸಾರಾಯ ಕುಡಿದರೆ, ಹೊರ್ತು ಊಟಕ್ಕೆ ಕೊಡುವ ಪಾಯವೇ ಇಲ್ಲ, ಅಂಬೋಣ, ಅವನು: ಅಯ್ಯೋ ದೈವವೆ! ಇದೇನು! ಎಂಥೇಳಿ, ಅಲ್ಲಿಯೂ ನಿರಾಶೆಯಾಗಿ, ಉಳಿದಿರುವ ಅದೊಂದು

ನಾಲ್ಕನೇ ಬಾಗಿಲಿಗೆ ಹೋಗಿ: ಸಾಯುತ್ತೇನೆ, ದಯ ಮಾಡಿ ದೇವರ ಹೆಸರಿನಲ್ಲಿ ಆಹಾರ ಕೊಡಿರಿ, ಅಂದಲ್ಲಿ, ಅಲ್ಲಿರುವವರು ಉತ್ತರವಾಗಿ: ನಮ್ಮಲ್ಲಿ ಬಹು ಸುಂದರಿಯಾದ ನರ್ತನಸ್ತ್ರೀ ಇದ್ದಾಳೆ; ಅವಳ ಕೂಡ ಸಂಯೋಗ ಮಾಡದ ವಿನಹ ಆಹಾರ ನೀಡುವ ಪರಿಪಾಟವಿಲ್ಲ, ಅಂದಾಕ್ಷಣವೇ, ಅವನು ದಿಂಗು ಹಿಡಿದು ನೆಲಕ್ಕೆ ಬಿದ್ದು, ಸ್ವಲ್ಪ ಹೊತ್ತು ಏನು ಮಾಡ ಬೇಕೆಂಬ ಬುದ್ಧಿ ಸೂಸದವನಾಗಿ ತರುವಾಯದಲ್ಲಿ ತನ್ನೊಳು ತಾನೆ ಮಾತಾಡಿ ಕೊಂಡು ಅಂದದ್ದು: ಇನ್ನು ಮುಂದೆ ನನ್ನಿಂದಂತು ಹಶಿವೆ ತಾಳುವದು ಆಗದ ಮಾತು. ಆದರೆ ಈ ಚತುರ್ಕರ್ಮಗಳಲ್ಲಿ ಸಾರಾಯ ಕುಡಿಯುವ ಪಾಪ ಅಲ್ಪವಾದದ್ದೆಂತ ಆಲೋಚನೆ ಮಾಡಿ ಕೊಂಡು, ಎದ್ದು, ಆ ಸಾರಾಯ ಇರುವ ಬಾಗಿಲಿನಿಂದ ಮನೆಯೊಳಗೆ ಪ್ರವೇಶಿಸಿ, ಅಲ್ಲಿಯ ಮರ್ಯಾದೆಯ ಪ್ರಕಾರ ಎಥೇಷ್ಟ ಸಾರಾಯ ಕುಡಿದು ಅಮಲೇರಿದ ಬಳಿಕ, ಹಂದಿಯ ಮಾಂಸವನ್ನು ತಿಂದು, ಅದೇ ಅಮಲಿನಲ್ಲಿ ಆ ಕೂಸನ್ನು ಕೊಂದು, ಆ ಸ್ತ್ರೀಯ ಕೂಡ ಜಾರಕರ್ಮವನ್ನೂ ಮಾಡಿ, ವ್ರತಭ್ರಷ್ಟನಾದನಂತೆ. ಸಾರಾಯದ ಮಹತ್ವ ಹೀಗುಂಟು.

ಅಯ್ಯಾ, ಸಾರಾಯ ಅಗದಿ ಕುಡಿಯ ಬಾರದೆಂತ ಅಪ್ಪಣೆ ಮಾಡ ಬಹುದೋ ಹ್ಯಾಗೆಂಬದಕ್ಕೆ ಇಲ್ಲಿ ನನ್ನ ಪದರಿನ ಮಾತುಗಳು ಯಾತಕ್ಕೆ ಬೇಕು? ಅದನ್ನು ಅಗದಿ ಕುಡಿಯ ಕೂಡದು, ಕುಡಿದರೆ ಅದರಿಂದ ಅನಿವಾರ ಪಾಪ ಘಟಿಸುತ್ತದೆಂತ ಮೇಲೆ ಸೂಚಿಸಿದ ದೇವರ ವಾಕ್ಯದ ವಚನಗಳಿಂದಲೂ, ಅನುಭವಾಮೃತದ ಒಂದೇ ಅರ್ಥರುಚಿಯಿಂದಲೂ, ತರುವಾಯದಲ್ಲಿ ಹೇಳಿದ ಈ ಫಕೀರನ ಚಿಕ್ಕ ಕಥೆಯಿಂದಲೂ, ಸಾರಾಯ ಕುಡಿಯ ಬಾರದು, ಕುಡಿದರೆ ಅದರಿಂದ ಇಹ ಪರಗಳ ನಷ್ಟ ಉಂಟಾಗುತ್ತದೆಂಬದು ಸ್ಪಷ್ಟವಾಯಿತು.

ಆದರೆ ಇವುಗಳಿಂದ ಕುಡಿಯಲಿಕ್ಕೆ ನಮ್ಮ ಸಭೆಗಳಲ್ಲಿ ಅಪ್ಪಣೆ ಆಗ ಬಹುದೊ ಬಾರದೋ? ಎಂಬ ಪ್ರಶ್ನೆಗೆ ನನ್ನ ಕಡೆಯಿಂದ ಬಿಚ್ಚಿ ಹೇಳಿದ ಉತ್ತರ ಬರಲಿಲ್ಲವೆಂತ ಇದನ್ನು ಓದುವವರಿಗೆ ಒಂದು ವೇಳೆ ಶಂಕಾ ಉತ್ಪನ್ನವಾಗ ಬಹುದು. ಹಾಗಾದರೆ ಬಿಚ್ಚಿ ಸ್ಪಷ್ಟವಾಗಿ ಹೇಳ ಬೇಕಾದರೆ, ಕುಡಿಯಲಿಕ್ಕೆ ಅಪ್ಪಣೆ ಇರ ಬಾರದೆಂಬದೆ ನನ್ನ ಸ್ಪಷ್ಟವಾದ ಅಭಿಪ್ರಾಯ. ಮತ್ತು ಇದರಂತೆ ನಮ್ಮ ಬಾಸಲ್ ಮಿಶ್ಶನ್ ಸಂಘದವರು ನಮ್ಮ ಸಭಾಕಟ್ಟಳೆಯಲ್ಲಿ ನಿರೂಪ ಕೊಟ್ಟಿದ್ದಾರೆ. ಮತ್ತು ಅದು ಸ್ತುತ್ಯವಾದ ನಿರ್ಣಯವೆ.

ಇನ್ನೂ ದಾರಾದರೂ ಸಾರಾಯ ಯಾಕೆ ಕುಡಿಯ ಬಾರದು? ಎಂಬದಾಗಿ ಹುಚ್ಚುಧೈರ್ಯ ಮಾಡಿ ಪ್ರಶ್ನೆ ಮಾಡಿದರೆ, ಅಂಥವರು ಮೇಲೆ ಹೇಳಿರುವ ಕಾರಣಗಳನ್ನು ಕಣ್ಣು ತೆರೆದು ನೆಟ್ಟಗೆ ನೋಡಿ ಕೊಳ್ಳಲಿ. ಇನ್ನು ಹೆಚ್ಚಿಗೆ ಹೇಳುವದು ಅವಶ್ಯವಿಲ್ಲ.

ಆದರೆ ಕುಡಿಯ ಬಹುದೆಂತ ಅಪ್ಪಣೆ ಮಾಡುವದಕ್ಕೆ ಬದಲಾಗಿ, ಸಾರಾಯವಲ್ಲ, ರೋಗದಲ್ಲಿಯೂ ಸೌಖ್ಯದಲ್ಲಿಯೂ ನೀರು ಮಾತ್ರ ಕುಡಿಯ ಬಹುದೆಂತ ಅಪ್ಪಣೆ ಮಾಡ ಬಹುದು, ಮತ್ತು ಸಹೋದರರಿಗೆ ಪ್ರೀತಿಯಿಂದ ಬುದ್ಧಿ ಹೇಳ ಬಹುದು. ಅದು ಹ್ಯಾಗಂದರೆ—ನಮ್ಮ ಕರ್ತನೂ ಅತಿ ಪ್ರಿಯ ಉಳ್ಳ ಗುರುವೂ ಆಗಿರುವ ಯೇಸು ಕ್ರಿಸ್ತನು ದಾಹ

ಗೊಂಡವರಿಗೆ ಏನು ಹೇಳುತ್ತಾನೆ? ಜೀವದ ನೀರಿನ ಬುಗ್ಗೆಯಿಂದ ಉಚಿತವಾಗಿ ಕುಡಿಯ ಕೊಡುವೆನೆಂತಲ್ಲವೋ? (ಪ್ರಕಟ. ೨೧, ೬.) ಮತ್ತು ಆತನು ಅದೇ ಪ್ರಕಟಣೆಯ ೨೨, ೧೭ನೇ ವಚನದಲ್ಲಿ ಮತ್ತೇನು ಹೇಳುತ್ತಾನೆ? ದಾಹ ಉಳ್ಳವನು ಬರಲಿ, ಬೇಕಾದವನು ಜೀವದ ನೀರನ್ನು ಉಚಿತವಾಗಿ ತಕ್ಕೊಳ್ಳಲಿ ಅಂತಲ್ಲವೋ? ನಮ್ಮೆಲ್ಲರಿಗೂ ತಿಳಿದಿರುವ ಪ್ರಕಾರ ಈ ವಚನಗಳು ಬೇರೆ ಅಭಿಪ್ರಾಯವನ್ನು ಹೇಳುತ್ತವೆ, ಸರಿ. ಆದಾಗ್ಯೂ ಈ ನಮ್ಮ ವಿಚಾರಣೆಯಲ್ಲಿ ಈ ಮಾತುಗಳನ್ನು ತಕ್ಕ ಪೂರ್ತಿಗೆ ನಮ್ಮ ಆಧಾರಕ್ಕಾಗಿ ತಕ್ಕೊಳ್ಳುವದಕ್ಕೆ ಏನು ಬಾಧಾ ಇರುವದಿಲ್ಲ. ಯಾಕಂದರೆ ಈ ವಚನಗಳಲ್ಲಿ ಕರ್ತನು, ದಾಹ ಉಳ್ಳವನು ಬಂದು ಸಾರಾಯ ಕುಡಿಯಲಿ ಎಂತಾದರೂ, ಇಲ್ಲವೆ ಬೇಕಾದವನು ಜೀವದ ಸಾರಾಯ ಉಚಿತವಾಗಿ ತಕ್ಕೊಳ್ಳಲಿ ಎಂತಾದರೂ ಬೇರೆ ಸಾಮ್ಯ ಮಾಡುವದಿಲ್ಲವಲ್ಲ? ಹಾಗಾದರೆ ಕರ್ತನ ಮಾತುಗಳಿಂದ ಜಲವೇ ಶ್ರೇಷ್ಠ ಪಾನವೆಂತ ತಿಳು ಕೊಳ್ಳ ಬಹುದು. ಅದಕ್ಕೇನೂ ಅಡ್ಡಿ ಇರುವದಿಲ್ಲ.

ಇದಲ್ಲದೆ ಪಾನಗಳಲ್ಲಿ ಜಲಪಾನವೇ ಶ್ರೇಷ್ಠವೆಂತ ಹೇಳಿ, ಇತರ ಅಮಲುಪಾನಗಳನ್ನು ತುಚ್ಛ ಮಾಡಿ ಹೇಳುವ ಒಬ್ಬ ಬುದ್ಧಿವಂತನಾದ ಅನುಭವಿಯು ತನ್ನ ಸುಭಾಷಿತ ಗ್ರಂಥದಲ್ಲಿ ಹೇಳಿರುವದೇನಂದರೆ—

ಸರ್ವೌಷಧೀನಾಮಶನಂ ಪ್ರಧಾನಂ |
ಸರ್ವೇಷು ಪಾನೇಷು ಜಲಂ ಪ್ರಧಾನಂ ||
ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ |
ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ ||

ಇವುಗಳ ಹೊರ್ತು ಈಗಿನ ಕಾಲದಲ್ಲಿರುವ ಮಹಾ ಮಹಾ ಪಂಡಿತ ಡಾಕ್ತರಗಳು ನಾನಾ ರೋಗಗಳನ್ನು ಹೊಡಿಯುವದಕ್ಕೂ, ಮನುಷ್ಯನ ಸೌಖ್ಯವನ್ನು ಹೆಚ್ಚಿಸುವದಕ್ಕೂ ಸಾರಾಯಿ ಅಲ್ಲ, ಜಲವೇ ಶ್ರೇಷ್ಠ ವೈದ್ಯವೆಂತ ತಮ್ಮ ಸ್ವಾನುಭಾವದಿಂದ ಅನುಮತೆ ಕೊಟ್ಟಿದ್ದಾರೆ. ಆದ ಕಾರಣ ಕುಡಿಯುವ ವೆಸನದಲ್ಲಿರುವ ಸಹೋದರರು ರೋಗ ರುಜೆ ಬಂದರೆ ಹ್ಯಾಗೆಂತ ಪ್ರಶ್ನೆ ಮಾಡಿದರೆ, ಅದಕ್ಕೆ ನನ್ನ ಉತ್ತರ: ನಿನ್ನ ರೋಗ ಹೋಗಿ ನೀನು ಸ್ವಸ್ಥ ಉಳ್ಳವನಾಗುವ ಹಾಗೆಯೂ ಬಲಿಷ್ಠನಾಗುವ ಹಾಗೆಯೂ, ಅರುಣೋದಯಕ್ಕೆ ಮುಂಚೆ ಎದ್ದು ತಣ್ಣೀರು ಸಾಧಿಸು, ಹಾಂಗು ತಣ್ಣೀರಿನಲ್ಲಿ ಜಳಕ ಮಾಡು; ಆವಾಗ ನಿನ್ನ ರೋಗ ಎಲ್ಲಿ ನಿಲ್ಲುತ್ತದೊ ನೋಡೋಣ ಎಂಬುವದೇ.

ಇವುಗಳಿಗೆ ಅಪವಾದವಾಗಿ ಒಬ್ಬನು, ಪೌಲ ಅಪೊಸ್ತಲನು ತಿಮೊಥೆಯನಿಗೆ ಹೊಟ್ಟೇ ನೋವಿಗೋಸ್ಕರ ಸ್ವಲ್ಪ ದ್ರಾಕ್ಷೆರಸ ತಕ್ಕೋ ಎಂಬದಾಗಿ ಹೇಳುವದಿಲ್ಲವೋ? ಅನ್ನುವನು. ಆದರೆ ಆ ದ್ರಾಕ್ಷೆರಸಕ್ಕೂ ಈ ಸಾರಾಯಿಗೂ ಏನೂ ಸಮ್ಮಂಧವಿಲ್ಲ. ಇದಕ್ಕೆ ಉತ್ತರ, ಕರ್ತನು ಕಾನಾ ಊರಿನಲ್ಲಿ ಆದ ಆ ಮದುವೆಯೊಳಗೆ ದ್ರಾಕ್ಷೆರಸಕ್ಕೆ ಕೊಟ್ಟ ಅನುಮತೆಯಲ್ಲಿ ನೋಡಿ ಕೊಳ್ಳಲಿ. ಯೋಹಾನ. ೨, ೧—೧೨.

ಇದಕ್ಕೆ ದಾರೊಬ್ಬನು ಶಿಟ್ಟನಿಂದ, ಇದೇನು ನಿರ್ಣಯ! ಹೀಗೆ ಕಠಿಣವಾಗಿ ಅಗದಿ ಕು ಡಿಯ ಬಾರದೆಂತ ಅಪ್ಪಣೆ ಮಾಡುವದು ವಿಹಿತವಲ್ಲ, ಹೀಗೆ ಮಾಡಿದರೆ ಹ್ಯಾಗಾದೀತು? ಆ ದೇಶದಲ್ಲಿ ದ್ರಾಕ್ಷೆರಸ, ಈ ನಮ್ಮ ದೇಶದಲ್ಲಿ ಸಾರಾಯ, ಹಣವಿಲ್ಲದ ಬಡವರು ಎರಡೆ ರಡು, ಮೂರುಮೂರು ರೂಪಾಯ ಕೊಟ್ಟು, ಒಂದು ಬಾಟ್ಲಿ ವೈನ್ ಎಲ್ಲಿಂದ ತಂದಾರು? ಅನ್ನುವನು. ಬಿಡಲಿ, ಅದು ಸಹ ಅವಶ್ಯವಿಲ್ಲ, ಹಾಂಗು ಅದು ನಮ್ಮ ದೇಶದ್ದೂ ಅಲ್ಲ, ಅ ದು ಆ ದೇಶದಲ್ಲಿ ಬೆಳೆಯುವ ಕಾರಣ ಸಾಧಾರಣವಾಗಿ ಎಲ್ಲರು ಮಾವಿನ ಹಣ್ಣಿನ ರಸ ದಂತೆ ಅದನ್ನು ಕುಡಿಯುತ್ತಿದ್ದದರಿಂದ ಪೌಲ ಅಪೊಸ್ತಲನು ತಿಮೊಥೆಯನಿಗೆ ಸ್ವಲ್ಪ ತ ಕ್ಕೊಳ್ಳುವದಕ್ಕೆ ಹೇಳಿದನು. ಇದಕ್ಕೆ, ಹಾಗಾದರೆ ಇದರಲ್ಲಿ ಬೇರೆ ಏನು ದೋಷವಿಲ್ಲವ ಲ್ಲ? ರೋಗಕ್ಕೋಸ್ಕರವಾಗಲಿ, ಸಂತೋಷಕ್ಕೋಸ್ಕರವಾಗಲಿ ಸ್ವಲ್ಪ ದ್ರಾಕ್ಷೆರಸ ತಕ್ಕೊಳ್ಳ ಬಹುದಲ್ಲ? ಅನ್ನುವನು. ಸಹೋದರನೇ, ಇಲ್ಲಿಲ್ಲದ ಹೊಸ ಅಭ್ಯಾಸ ಮಾಡುವದು ಯಾ ಕೆ? ಅದನ್ನು ಕುಡಿಯದೆ ಇದ್ದರೇನು? ಸಾಯುವದಿಲ್ಲ; ಸತ್ತರೆ, ನಿನ್ನ ಜೀವಕ್ಕೆ ನಾ ಹೊ ಣೆ ಇದ್ದೇನೆ. ಯಾಕಂದರೆ ಈ ನಮ್ಮ ದೇಶದಲ್ಲಿ ಅದನ್ನು ಕುಡಿಯದೆ ಕೋಟ್ಯಾವಧಿ ಮಂ ದಿ ಸುಖವಾಗಿ ಬಾಳುತ್ತಾರೆ.

ಹಾಗಾದರೆ ಸಾರಾಯ ನಮ್ಮ ದೇಶದ್ದು, ಹಾಂಗು ಅಗ್ಗವಾಗಿ ಶಿಕ್ಕುವಂಥಾದ್ದು, ಅ ದನ್ನು ರೋಗ ಮುಂತಾದ ನಿರ್ವಾಹ ಇಲ್ಲದ ಸಮಯಗಳಲ್ಲ್ಯಾದರೂ ಸ್ವಲ್ಪ ತಕ್ಕೊಳ್ಳ ಕೂಡದೋ? ಅಂತಾ ಬೆನ್ನು ಹತ್ತಿದರೆ, ಎಲ್ಲಿ ತನಕ ತರ್ಕ ಮಾಡ ಬಹುದು? ಹೋಗಲಿ. ಮೂರ್ಖ ಸಮಾಧಾನಕ್ಕಾಗಿ ಬುದ್ಧಿವಂತ ಡಾಕ್ತರರು ಫಲಾಣೆ ರೋಗಕ್ಕೆ ಸ್ವಲ್ಪ ತಕ್ಕೊ ಳ್ಳ ಬಹುದೆಂತ ಅನುಮತಿ ಕೊಟ್ಟರೆ, ನಿರ್ವಾಹ ಇಲ್ಲದ ಪಕ್ಷಕ್ಕೆ ಅಮಲಾಗದ ಹಾಗೆ ಕೊಂ ಚ ತಕ್ಕೊಳ್ಳಲಿ ಅಂತ ಅಪ್ಪಣೆ ಕೊಡ ಬಹುದು. ಆದರೆ ಸಾವಿರ ಪಾಲಿಗೂ ಅವರು ಈ ವಿಷಯಕ್ಕೆ ಅನುಮತಿ ಕೊಡುವದೇ ಇಲ್ಲ. ಇದು ನಿಶ್ಚಯ.

ಸಹೋದರನೇ, ಹೀಗೆ ಮಾಡುವ ನಿರ್ಣಯವು ಬಹು ಕಠಿಣವಾದ ನಿರ್ಣಯವೆಂತ ನೆನಸ ಬೇಡ, ಮತ್ತು ಮನದೊಳಗೆ ಗುಣಗುಟ್ಟ ಬೇಡ, ಇಲ್ಲಿಲ್ಲದ ತರ್ಕ, ವಿರೋಧೋಕ್ತಿ ಗಳನ್ನು ತೆಗಿಯ ಬೇಡ; ಇದಲ್ಲದೆ ಎಲ್ಲಾ ವಿಷಯಗಳಲ್ಲಿ ಸಯುಕ್ತವಾದದ್ದನ್ನು ಗ್ರಹಣ ಮಾಡಿ ಕೊಳ್ಳದೆ ಎಲ್ಲದಕ್ಕೂ ವಾದ ಮಾಡ ಬೇಕೆಂಬ ಮನುಷ್ಯನೊಳಗಿರುವ ಈ ಸ್ವಭಾವಿ ಕವಾದ ದುರ್ಗುಣವನ್ನು ಇಲ್ಲಿ ಪ್ರಯೋಗಿಸುವದಕ್ಕೆ ಮನಸ್ಸು ಮಾಡ ಬೇಡ. ಯಾಕಂ ದರೆ ನಾನು ಈ ವರೆಗೆ ಹೇಳಿದ ಮಾತುಗಳಿಂದ ನಿನಗೆ ದುಃಖ ಕೊಡ ಬೇಕೆಂದಲ್ಲ, ನಿನ್ನ ನ್ನು ಆ ದುಷ್ಟ ಅಭ್ಯಾಸದಿಂದ ಬಿಡಿಸ ಬೇಕೆಂದು ಪ್ರೀತಿಯಿಂದ ಪ್ರಯತ್ನ ಮಾಡಿ ಇದನ್ನೆಲ್ಲ ಬರೆದಿದ್ದೇನೆ. ಯಾಕಂದರೆ ಸಾರಾಯ ಕುಡಿಯುವದರಲ್ಲಿ ಯಾವ ಉತ್ತಮ ಫಲವೂ ಇಲ್ಲ, ಜನರೊಳಗೆ ಅದಕ್ಕೆ ಯಾವ ಮಾನವೂ ಇಲ್ಲ. ಕ್ರೈಸ್ತರಾದ ಮೇಲೆ ಅದನ್ನು ಕುಡಿಯು ವದಕ್ಕೆ ಏನು ಚಿಂತೆ? ಅಂತ ಸಹ ಅನ್ನ ಬೇಡ. ಕ್ರೈಸ್ತರಂದರೇನು? ಹೊಲೆಯರಲ್ಲ, ದೇ ವರ ಮಕ್ಕಳೇ, ಪರಿಶುದ್ಧ ಪ್ರಜೆಯೇ. ದೇವರ ಮಕ್ಕಳಿಗೆ ತಕ್ಕ ಹಾಗೆ ಸಕಲ ಸದಾಚಾರ ದಲ್ಲಿಯೂ ಸುಕ್ರಿಯೆಗಳಲ್ಲಿಯೂ ಸಂಪೂರ್ಣರಾಗಿದ್ದು, ಜನಾಂಗಗಳವರ ಮುಂದೆ ಕುಡಿ

ಯುವ ಹಲಕಿ ಜನರಂತಿರದೆ, ಘನವಾಗಿಯೂ ಮರ್ಯಾದೆಯಿಂದಲೂ ನಡೆದು, ನಮ್ಮ ತಂದೆಯಾದ ದೇವರನ್ನು ಮಹಿಮೆ ಪಡಿಸ ಬೇಕಲ್ಲವೇ? ಹೌದು, ಪ್ರಿಯನೇ, ಹಾಗೆ ಮಾಡುವ ಹಂಗು ನಮಗುಂಟು.

೭ನೆ ಪ್ರಶ್ನೆ. ಇದರಲ್ಲಿ ಮನಸು ಬಂದಷ್ಟು ಕುಡಿಯಲಿಕ್ಕೆ ಅಪ್ಪಣೆ ಕೊಡುವದು ಆಗದ ಪಕ್ಷದಲ್ಲಿ ಎಷ್ಟಕ್ಕೆ ಕುಡಿಯ ಬಹುದೆಂತ ಅಪ್ಪಣೆ ಕೊಡ ಬಹುದು? ಮತ್ತು ಎಷ್ಟಕ್ಕೆ ಕೊಡ ಕೂಡದು? ಅಂತ, ಕೇಳೋಣವಾಗುತ್ತದೆ.

ಅಯ್ಯಾ, ರೋಗಕ್ಕಾಗಿ ಅಲ್ಲ, ಆಯಾಸಕ್ಕಾಗಿ ಇಲ್ಲವೆ, ಸಂತೋಷಕ್ಕಾಗಿ ಅಷ್ಟು ಇಷ್ಟು ಕುಡಿಯ ಬಹುದೆಂತ ನಾವು ನಾಲ್ವರು ಕೂಡಿ ನಿರ್ಣಯ ಮಾಡುವದು ನನಗೇನು ಸಮ ಕಾಣಿಸುವದಿಲ್ಲ. ಎಷ್ಟು ತುಸಕ್ಕಾದರೂ ನಮ್ಮಿಂದ ಅಪ್ಪಣೆ ಆಗ ಬಾರದು. ಅಪ್ಪಣೆ ಕೊಟ್ಟು ಅದರಲ್ಲಿ ಪಾಲುಗಾರರಾಗುವದಕ್ಕಿಂತ, ಸುಮ್ಮಗಿದ್ದು ಅಂಥಾ ಕೆಲಸ ಮಾಡುವವರಿಗೆ ಬುದ್ಧಿ ಹೇಳುವದು ಉತ್ತಮ. ತಾಳಿ ಕೊಳ್ಳಲಿಕ್ಕೆ ಅಸಾಧ್ಯವಾದರೆ, ಅಂಥಾ ಪಕ್ಷದಲ್ಲಿ ಮಿತಿ ಮೀರಿ ಕುಡಿದು ಹುಚ್ಚಾಟ ಮಾಡುವ ಕುಡಕರನ್ನು ಸಭೆಗಳೊಳಗಿಂದ ಭಹಿಷ್ಕಾರ ಮಾಡುವದೆ ವಾಶಿ. ಇದರೊಳಗೆ ನಿರ್ಣಯ ಮಾಡಲಿಕ್ಕೆ ಇದು ಆಭರಣ ಮುಂತಾದ ಸಂಗತಿಗಳ ಹಾಗಲ್ಲ. ಯಾಕಂದರೆ ಸಾರಾಯ ಎಂಬ ನಿಪುಣ ಕಳ್ಳನಾದ ಮಹಾ ಮೋಸಗಾರನು ಇಂದಿಗೆ ಕೋಟ್ಯಾವಧಿ ಮನುಷ್ಯರನ್ನು ಅನರ್ಥಕ್ಕೆ ಕೂಡಿಸಿದ್ದಾನೆ. ಇವನೇನು ಸಾಮಾನ್ಯ ಕಳ್ಳನೋ? ಇವನು ಅನೇಕ ಬಣ್ಣವಾಗುವ ಮಹಾ ವೇಷಗಾರನೇ. ಅನೇಕರ ಮನೆಗಳನ್ನು ಮೆಲ್ಲಗೆ ಈ ನೆವ ಆ ನೆವ ಮಾಡಿ, ಯುಕ್ತಿ ಕುಯುಕ್ತಿಗಳಿಂದ ಶೇರಿ, ಅವರ ಮನೆಗಳನ್ನು ನೆಲ ಸಮ ಮಾಡಿದ ಶುದ್ಧ ಸಂಹಾರಿಯಾಗಿರುವದರಿಂದ, ಇವನ ಪ್ರವೇಶಕ್ಕೆ ನಾಲ್ವರು ಕೂಡಿ ಹ್ಯಾಗೆ ಅಪ್ಪಣೆ ಮಾಡ ಬಹುದು? ಇದಲ್ಲದೆ ಈ ಸಾರಾಯವನ್ನು ಒಂದು ಸರ್ಪಕ್ಕೆ ಸಮಾನ ಮಾಡ ಬಹುದು. ಹ್ಯಾಗೆ ಸರ್ಪದ ಸಂಗಡ ಸರಸವಾಡಿದರೆ, ಅದು ಕಚ್ಚುವದನ್ನು ಬಿಡುವದಿಲ್ಲವೊ, ಅದರಂತೆ ಈ ಸಾರಾಯದ ಆಟ. ಇನ್ನೊಂದು, ಅದನ್ನು ಬೆಂಕಿಗೆ ಸಮಾನ ಮಾಡಲಿಕ್ಕೂ ಆದೀತು. ಬೆಂಕಿಯ ಸಂಗಡ ಅದು ಸುಡದಂತೆ ಆಟ ಮಾಡುತ್ತೇನಂದರೆ, ಅದು ಒಮ್ಮೆ ಇಲ್ಲದಿದ್ದರೆ ಒಮ್ಮೆ ಸುಡದೆ ಬಿಟ್ಟೀತೋ? ಮತ್ತೊಂದು, ಯಾವನಿಗೆ ಮಾನ ಸಾಕಾಗೆದೆಯೊ ಅಂಥವನು ಸಾರಾಯ ಕುಡಿಯಲಿ. ಯಾವನಿಗೆ ತನ್ನ ಶರೀರವನ್ನು ಒಣಗಿದ ಕಡ್ಡಿಗೆ ಸಮಾನ ಮಾಡ ಬೇಕೆಂಬ ಅಪೇಕ್ಷೆ ಉಂಟೋ ಅಂಥವನು ಸಾರಾಯ ಕುಡಿಯ ತಕ್ಕದ್ದು. ಯಾವನಿಗೆ ಖೂಳು ಖೂಳು, ನೀರು ನೀರು ಅಂತ ಮನೆ ಮನೆ ತಿರುಗಲಿಕ್ಕೆ ಮನಸ್ಸುಂಟೋ ಅಂಥವನು ಸಾರಾಯ ಕುಡಿಯಲಿ. ಮತ್ತು ಯಾವನಿಗೆ ಮನೆಮಾರು ಹಾಳು ಮಾಡಿ, ಅದಕ್ಕೆ ಬೆಂಕಿ ಹಚ್ಚಿ ತಾನೂ ತನ್ನ ಹೆಂಡತಿ ಮಕ್ಕಳೂ ಕೂಡ ನರಕಕ್ಕೆ ಹೋಗ ಬೇಕೆಂಬ ಅಪೇಕ್ಷೆ ಉಂಟೊ ಅಂಥವನು ತನ್ನ ಮನಸ್ಸು ಬಂದಷ್ಟು ಸಾರಾಯ ಎಂಬ ಆಗೋತ ಕುಡಿಯ ತಕ್ಕದ್ದು. ಹಾಗಾದರೆ ಸಾರಾಯ ಕುಡಿಯುವದು ಅಗದಿ ಹುಚ್ಚಾಟಗಳ ಕೆಲಸವೆಂಬುವದು ನಿಶ್ಚಯವೆ. ಒಂದು ವೇಳೆ

ಇಷ್ಟಕ್ಕೆ ಅಷ್ಟಕ್ಕೆ ಅಪ್ಪಣೆ ಮಾಡಿದರೆ, ಆ ಅಪ್ಪಣೆಯನ್ನು ಕೈಕೊಳ್ಳುವವರೆಲ್ಲಿ? ಮಿತಿಯಾಗಿ ಹೇಳಿದಷ್ಟೆ ಕುಡಿದರೊ, ಇಲ್ಲವೊ? ಎಂತ ಅದನ್ನು ವಿಚಾರಿಸುವವರ್ಯಾರು? ಮತ್ತು ವಿಚಾರಿಸಲಿಕ್ಕೆ ಹತ್ತಿದರೆ, ಅದರಿಂದ ಎಂಥಾ ಪರಿಣಾಮ ಹುಟ್ಟುವದು? ಯಾವದೊಂದು ಭೋಗದಲ್ಲಿ ಮನುಷ್ಯನು ತನ್ನ ಮನಸ್ಸಿಗೆ ಸಾಕಾಗುವ ತನಕ ಹ್ಯಾಗೆ ಉಪಭೋಗ ಮಾಡುವನೊ, ತದ್ವತ್ ಕುಡಿಯುವವರ ವೆಸನ ಅಂದರೆ ಅವರು ಮನಸ್ಸಿಗೆ ಬಂದಷ್ಟು ಕುಡಿದು ವಾಂತಿ ಮಾಡಿ ಎಚ್ಚರದಪ್ಪಿ ಹುಚ್ಚಾಟ ಮಾಡಿದರೆ ಹೊರ್ತು ಅವರ ಜೀವಕ್ಕೆ ಸಮಾಧಾನವಾಗುವದಿಲ್ಲ. ಹಾಗಾದರೆ ಇವರಿಗೇನು? ದಂಡಿನಲ್ಲಿ ಸೋಲ್ಜರುಗಳಿಗೆ ಹಂಚಿ ಕೊಡುವಂತೆ ಹಂಚಿ ಕೊಡ ಬೇಕೋ? ಅದನ್ನು ಹಂಚಿ ಕೊಡುವವರ್ಯಾರು? ಕೊಡ ಬೇಕಾದರೆ ಮಿಶನೆರಿಗಳೆ ಹಂಚಿ ಕೊಡ ಬೇಕಾದೀತು. ಯಾಕಂದರೆ ಸಭೆಗಳೆಂಬ ದಂಡಿನ ನಾಯಕರು ಅವರೇ ಅಲ್ಲವೋ? ಅವರು ಈ ಕೆಲಸಕ್ಕೆ ತಮ್ಮ ಕಿರಿಬೆರಳಾದರೂ ಹಚ್ಚಲಿಕ್ಕಿಲ್ಲವೆಂತ ನೆನಸುತ್ತೇನೆ. ಹಾಗಾದರೆ ಈ ಮಹಾ ನಷ್ಟವನ್ನುಂಟು ಮಾಡುವಂಥ ಕಳ್ಳನಿಗೂ ಕಚ್ಚುವ ಸರ್ಪಕ್ಕೂ ಸುಡುವ ಬೆಂಕಿಗೂ ಕೇವಲ ಹುಚ್ಚು ಮನುಷ್ಯನಿಗೂ ಸಮಾನವಾಗಿರುವ ಈ ಮಾದಕ ಪದಾರ್ಥದ ವಿಷಯ ಒಂದು ಪಾವಾಣೆ ಎಷ್ಟಾದರೂ ನಮ್ಮ ಅನುಮತೆ ಇರ ಬಾರದೆಂಬದೇ ಚಂದವೆಂತ ನನ್ನ ನಿರ್ಣಯಕ್ಕೆ ಬರುತ್ತದೆ.

ಹಾಂಗು ಈಗಿನ ಕಾಲದಲ್ಲಿ ನಮ್ಮ ಸಭೆಗಳೊಳಗೆ ಅಂಥಾ ಅಭ್ಯಾಟ ಕುಡಕರು ಇನ್ನು ಯಾರೂ ಇಲ್ಲ. ಇನ್ನೂ ಅವರು ಅದಕ್ಕೆ ಕೇವಲ ದಾಸರಾಗಿ ಹೋಗಲಿಲ್ಲ; ಪ್ರೀತಿಯಿಂದ ಬುದ್ಧಿ ಹೇಳಿದರೆ ಕುಡಿಯುವದನ್ನು ಬಿಟ್ಟಾರೆಂದು ನೆನಸುತ್ತೇನೆ. ಹೀಗಿರಲಾಗಿ, ಅಷ್ಟು ಇಷ್ಟು ಕುಡಿಯಲಿ ಅಂತ ಹೇಳಿದರೆ, ಕುಡಿಯಲಿಕ್ಕೆ ನಾವೇ ಅವರ ಕೈಯಲ್ಲಿ ಒಂದು ಶಾಸನ ಬರೆದು ಕೊಟ್ಟ ಹಾಗಾಯಿತು. ಮತ್ತು ಅದನ್ನು ನಮ್ಮ ಸಭೆಗಳಲ್ಲಿ ಸ್ಥಿರ ಪಡಿಸಿದ ಹಾಗಾಯಿತು. ಹಾಗೆ ಮಾಡುವದು ನಮಗೆ ದೂರ ಇರಲಿ.

ಹುಬ್ಬಳಿಯಿಂದ ೧೩ನೇ ಅಕ್ಟೋಬರ್ ೧೮೭೦.	ಹೀಗೆ ತಮ್ಮ ಪತ್ರಿಕೆ ಓದುವ ಒಬ್ಬನು.

ದ್ರವ್ಯಾಶೆಯ ಫಲ.

ಹಿಟ್ಟುಗಾರನಾದ ವಂಗನೆಂಬವನು ಹುಟ್ಟುಗುಣದಿಂದಲೇ ಲೋಭಿಯಾಗಿದ್ದನು. ಅವನ ಹಾಗೆ ಹಣವನ್ನು ಹೆಚ್ಚಾಗಿ ಪ್ರೀತಿ ಮಾಡುವವನೂ, ಇದಲ್ಲದೆ ಹಣ ಉಳ್ಳವರನ್ನು ಹೆಚ್ಚಾಗಿ ಸನ್ಮಾನಿಸುವವನೂ ಯಾವನೂ ಇರಲಿಲ್ಲ. ಸಮೂಹದಲ್ಲಿ ಯಾರೊಬ್ಬನು ಒಬ್ಬ ಐಶ್ವರ್ಯವಂತನ ವಿಷಯವಾಗಿ ಒಂದು ಮಾತು ಹೇಳಿದರೆ, ವಂಗನು ಅವನ ಪರಿಚರ್ಯ ಪೂರ್ಣವಾಗಿ ನನಗೆ ಅದೆ, ಅವನೂ ನಾನೂ ಬಹು ದಿವಸದಿಂದ ಗೆಳೆಯರಾಗಿದ್ದೆವು, ಅ

ವನೂ ನಾನೂ ಒಡನಾಡಿಗಳು ಎಂದು ಹೇಳುವನು. ಆದರೆ ಯಾರಾದರೂ ಒಬ್ಬ ಬಡವ
ನ ಹೆಸರು ಹೇಳಿದರೆ, ವಂಗನು ಅವನನ್ನು ಎಷ್ಟು ಮಾತ್ರವೂ ತಿಳಿಯದವನಾಗಿರುವನು.
ಆ ಮನುಷ್ಯನು ಸಜ್ಜನನೋ ಏನೋ ನನಗೆ ಗೊತ್ತು ಸಾಲದು. ಬಹಳ ಜನರ ಪರಿಚ
ರ್ಯವು ಅಪೇಕ್ಷಿಸದೆ, ಹೆಕ್ಕಿ ನೋಡಿದವರ ಸಂಗಡ ಸ್ನೇಹವಾಗಿರುವದು ತನಗೆ ಹಿತವಾದ
ದ್ದೆಂದು ಹೇಳುವನು. ಆದರೆ ವಂಗನಿಗೆ ಐಶ್ವರ್ಯದ ಆಶೆ ಬಹಳವಾಗಿದ್ದರೂ, ಸ್ವಾಸ್ಥ್ಯವು
ಕಡಿಮೆಯಾಗಿತ್ತು; ಯಾಕಂದರೆ ಬೀಸುವ ಉದ್ಯೋಗದಿಂದ ಶಿಕ್ಕುವ ಆದಾಯದ ಹೊ
ರ್ತು ಬೇರೆ ಜೀವನವೇನೂ ಅವನಿಗೆ ಇರಲಿಲ್ಲ. ಈ ಆದಾಯವು ಸ್ವಲ್ಪವಾಗಿದ್ದರೂ, ನಿತ್ಯ
ವಾಗಿ ನಡಿಯುತ್ತಿತ್ತು. ಬೀಸುವ ಮನೆ ಇರುವ ತನಕವೂ ಅದರ ಕೆಲಸ ನಡೆಯುವ ವರೆ
ಗೂ ಅವನಿಗೆ ಊಟಕ್ಕೆ ಕಡಿಮೆ ಇದ್ದಿಲ್ಲ. ಅವನು ಬಹಳ ಮಟ್ಟಾಗಿ ಜೀವಿಸುವದರಿಂದ
ದಿನದಿನದ ಹಣ ಸ್ವಲ್ಪವಿಟ್ಟು ಕೊಂಡು, ಬಹಳ ಸಂತೋಷದಿಂದ ಆಗಾಗ್ಯೆ ದೃಷ್ಟಿಸಿ ನೋ
ಡುತ್ತಾ ಇದ್ದನು. ಆದರೆ ಅವನ ಸಂಪತ್ತಿನಿಂದ ಅವನ ಆಶೆಗೆ ಪೂರ್ತಿಯಾಗಲಿಲ್ಲ. ಯಾ
ಕಂದರೆ ಐಶ್ವರ್ಯವನ್ನು ಹೊಂದ ಬೇಕೆಂದು ಅಪೇಕ್ಷಿಸುವದರಿಂದ, ಕೊರತೆ ಇಲ್ಲದೆ ಇರು
ವದು ಮಾತ್ರ ಅವನಿಗೆ ಸಾಲಲಿಲ್ಲ. ಒಂದು ದಿವಸ ಈ ಅಪೇಕ್ಷೆಗಳನ್ನು ಅವನು ಧ್ಯಾನಿ
ಸುತ್ತಾ ಇರುವ ವೇಳೆಯಲ್ಲಿ, ನೆರೆಯವರಲ್ಲಿ ಒಬ್ಬನು ಬಿಡದೇ ಮೂರು ರಾತ್ರಿ ಸ್ವಪ್ನ ಕಂ
ಡು, ಒಂದು ಸ್ಥಳದಲ್ಲಿ ಹೂಳಿಟ್ಟ ಹಣದ ಕೊಪ್ಪರಿಗೆ ಕಂಡು ಕೊಂಡನೆಂಬ ಸಮಾಚಾರವ
ನ್ನು ಕೇಳಿದನು. ಈ ವರ್ತಮಾನವು ಬಡ ವಂಗನ ಹೃದಯಕ್ಕೆ ಕಠಾರಿಯಾಯಿತು. ಆ
ದದರಿಂದ ಅವನು ಅತಿ ವ್ಯಥೆಯಿಂದ ತನ್ನಲ್ಲಿ ಅಂದು ಕೊಂಡದ್ದೇನಂದರೆ: ಇಗೋ, ನಾನು
ಮುಂಜಾನೆಯಿಂದ ಸಂಜೆಯ ತನಕ ಹೀನವಾದ ಕೆಲವು ಕಾಸುಗಳನ್ನು ಪಡೆಯ ಬೇಕೆಂ
ದು ಕಷ್ಟಗಿಷ್ಟ ಮಾಡುತ್ತೇನೆ. ಆದರೆ ನೆರೆಯವನಾದ ಕೃತಜ್ಞಯ್ಯನು ಸುಮ್ಮನೇ ಮಲಗಿ
ಕೊಂಡಲ್ಲಿ ಸ್ವಪ್ನ ಕಂಡು, ಬೆಳಗಾಗುವದಕ್ಕಿಂತ ಮುಂಚೆ ಸಾವಿರಾರು ವರಹ ಸಂಪಾದಿಸು
ವನು. ನಾನು ಅವನ ಹಾಗೆ ಸ್ವಪ್ನ ಕಾಣ ಬಲ್ಲೆನಾದರೆ ಎಷ್ಟೋ ಒಳ್ಳೇದು! ಎಷ್ಟೋ ಸಂ
ತೋಷದಿಂದ ಕೊಪ್ಪರಿಗೆಯ ಸುತ್ತಲೂ ಅಗಿಯುವೆನು. ಎಷ್ಟೋ ಗುಪ್ತವಾಗಿ ಅದನ್ನು
ಮನೆಗೆ ತೆಗದು ಕೊಂಡು ಹೋಗುವೆನು. ಅದನ್ನು ನನ್ನ ಹೆಂಡತಿ ಸಹ ನೋಡಲಾರಳು.
ಆಗ ಮೊಳಕೈ ತನಕ ಹೊನ್ನಿನ ರಾಶಿಯಲ್ಲಿ ಕೈ ಮುಳುಗಿಸುವದು ಎಷ್ಟೋ ಸಂಭ್ರಮವು!
ಈ ವಿಧವಾದ ಆಲೋಚನೆಗಳಿಂದ ವಂಗನ ಮನಸ್ಸು ಕರಗಿತು. ಆದದರಿಂದ ಅವನು ಮುಂ
ಚಿನ ಜಾಗ್ರತೆಯನ್ನು ಬಿಟ್ಟು, ಸ್ವಲ್ಪ ಆದಾಯಕ್ಕೆ ಅಸಹ್ಯ ಪಟ್ಟನು. ಮತ್ತು ವಿಕ್ರಯಿಕರು
ಅವನ ಅಂಗಡಿಯನ್ನು ಬಿಡಲಾರಂಭಿಸಿದರು. ದಿನ ದಿನವು ಅವನು ಅದೇ ಆಶೆ ಮಾಡಿ ರಾ
ತ್ರಿರಾತ್ರಿಗೆ ಕನಸು ಕಾಣ ಬೇಕೆಂದು ಮಲಗಿ ಕೊಳ್ಳುತ್ತಾ ಇದ್ದನು. ಬಹಳ ಕಾಲದ ವ
ರೆಗೆ ಅವನ ಇಷ್ಟವು ಅವನಿಗೆ ದೊರಕಲಿಲ್ಲ. ಕಡೇಲಿ ಅವನ ದುರ್ದಶೆ ತೊಲಗಲು, ಅವ
ನು ಅಪೇಕ್ಷಿಸಿದ ಕನಸನ್ನು ಕಂಡನು. ಏನಂದರೆ: ಸ್ವಪ್ನದಲ್ಲಿ ಭಂಗಾರ ವಜ್ರಾದಿಗಳು ತುಂ
ಬಿದ ಬ್ರಹ್ಮಾಂಡದಷ್ಟು ದೊಡ್ಡ ಕೊಪ್ಪರಿಗೆ ಕಾಣ ಬಂತು. ಅದು ಬೀಸುವ ಮನೆಯ ಬು
ನಾದಿಯ ಅಡಿಯಲ್ಲಿ ಆಳವಾದ ನೆಲದಲ್ಲಿ ಹೂಳಿ ದೊಡ್ಡ ಹಾಸಗಲ್ಲಿನಿಂದ ಮುಚ್ಚಿ ಇತ್ತು.

ವಂಗನು ಹಣದ ಕನಸು ಕಾಣುವದರ ಹಾಗೆ, ಮೂರನೆ ಎರಡು ರಾತ್ರಿಗಳಲ್ಲಿ ಅದೇ ಕನಸು ಕಂಡು, ಅದರ ನಿಶ್ಚಯವನ್ನು ತಿಳಿಯ ಬೇಕೆಂದು, ತನಗೆ ಶಿಕ್ಕಿದ ದ್ರವ್ಯದ ಮಾತು ಯಾರ ಸಂಗಡಲೂ ಉಸುರಲಿಲ್ಲ. ಈ ವಿಷಯದಲ್ಲಿಯೂ ಅವನ ಇಛ್ಛಾಭಿಷ್ಟ ಸಿದ್ಧವಾಯಿತು. ಹ್ಯಾಗಂದರೆ ಇನ್ನು ಎರಡು ಸಾರಿ ಅದೇ ಹಣದ ಕೊಪ್ಪರಿಗೆಯನ್ನು ಅದೇ ಸ್ಥಳದಲ್ಲಿ ಕಂಡನು.

ಆದದರಿಂದ ಅವನು ಸಂಶಯವೆಲ್ಲಾ ಬಿಟ್ಟು ಮೂರನೆ ಮುಂಜಾನೆ ಎದ್ದು ಏಕಾಂತವಾಗಿ ಗುದ್ದಲಿ ತೆಗದು ಕೊಂಡು, ಬೀಸುವ ಮನೆಗೆ ಹೋಗಿ, ಸ್ವಪ್ನದಲ್ಲಿ ಕಂಡ ಸ್ಥಳದ ಮೇಲಿರುವ ಗೋಡೆಯ ಅಡಿಯನ್ನು ಅಗಿಯಲಾರಂಭಿಸಿದನು. ಮೊದಲು ಸುಶಕುನವಾಗಿ ಉಂಗರದ ಮುರುಕು ಕಂಡನು. ಇನ್ನು ಆಳಕ್ಕೆ ಅಗಿದ ಮೇಲೆ, ಅವನಿಗೆ ಪೂರ್ಣವಾದ ಹೊಸ ಹಂಚು ಶಿಕ್ಕಿತು; ಕಡೇಲಿ ಬಹಳ ಅಗಿದ ಮೇಲೆ, ಅಗಲವಾದ ಹಾಸುಗಲ್ಲು ಕಂಡನು. ಆದರೆ ಅದು ಒಬ್ಬನಿಂದ ಎತ್ತ ಕೂಡದಷ್ಟು ದೊಡ್ಡದಾಗಿತ್ತು. ಆಗ ವಂಗನು ಆನಂದದಿಂದ ಬುದ್ಧಿಭ್ರಮಿತನಾಗಿ ಕೂಗಿ—"ಇಗೋ, ಇಗೋ, ಇಲ್ಲಿ ಅದೆ, ಈ ಕಲ್ಲಿನ ಬುಡದಲ್ಲಿ ಬಹಳ ದೊಡ್ಡ ವಜ್ರಗಳ ಕೊಪ್ಪರಿಗೆಗೆ ಸಾಕಾದ ಸ್ಥಳ ಉಂಟು. ಈಗ ಮನೆಗೆ ಹೋಗಿ, ನನ್ನ ಹೆಂಡತಿಗೆ ಎಲ್ಲಾ ಹೇಳಿ, ಈ ಕಲ್ಲು ಮಗುಚುವದಕ್ಕೆ ಅವಳನ್ನು ಕರಕೊಂಡು ಬರುತ್ತೇನೆ" ಎಂದು ಹೇಳಿ, ಮನೆಗೆ ಹೋಗಿ ಪ್ರಾಪ್ತಿಸಿದ ಮಂಗಳದ ವಿವರವನ್ನೆಲ್ಲಾ ತನ್ನ ಹೆಂಡತಿಗೆ ತಿಳಿಸಿದನು. ಅವಳು ಸಂತೋಷದಿಂದ ಮತಿ ತಪ್ಪಿ, ಗಂಡನ ಕೊರಳು ಕಟ್ಟಿ, ಆನಂದದ ಸಂಭ್ರಮದಿಂದ ಅವನನ್ನು ಅಪ್ಪಿ ಕೊಂಡಳು. ಆದಾಗ್ಯೂ ಆನಂದದ ಭ್ರಮೆಯಿಂದ ಅವರು ಸಿಕ್ಕಿದ ದ್ರವ್ಯದ ಮಿತವನ್ನು ತಿಳುಕೊಳ್ಳುವ ಅಪೇಕ್ಷೆ ಮರೆಯದೆ, ಇಬ್ಬರೂ ವಂಗನು ಅಗಿದ ಸ್ಥಳಕ್ಕೆ ಹೋಗ ತ್ವರೆ ಪಟ್ಟರು. ಅಲ್ಲಿಗೆ ಬಂದು ಇಷ್ಟವಾದ ದ್ರವ್ಯಕ್ಕೆ ಬದಲಾಗಿ ಜೀವನಕ್ಕೆ ಆಧಾರವಾಗಿದ್ದ ಬೀಸುವ ಮನೆ ಕೆಡವಿ ಬಿದ್ದದ್ದನ್ನು ಕಂಡರು.

ಸುಳ್ಳು ಹೇಳುವ ಗುಣವು ಪ್ರೀತಿಸಿ,
ಕಳ್ಳರನು ಸ್ನೇಹಿತರು ಅನ್ನಿಸಿ
ಕೊಳ್ಳುವಾತನು ಇಹಪರದಿ ಮಾನ್ಯವನು ಹೊಂದಿರನು. ||

ದಾನವನು ಪರರಿಂಗೆ ಈಯುವ
ಮಾನವನು ತಾಂ ರೊಖ್ಖಕಿಂತಲು
ಜ್ಞಾನಜಾತಕ ಬೋಧ ಪೇಳ್ವುದು ಶ್ರೇಷ್ಠವಾಗಿಹುದು. ||

ವಿದ್ಯೆಯೆಂಬುದ ಸಾಧಿಸಿದ ಸು-
ಬುದ್ಧಿಯದು ಕರಿಕಲ್ಲಿನಲಿ ಬಿಡಿ-
ಸಿದ್ದ ನೂತನ ಸೂಕ್ಷ್ಮ ಶಿಲ್ಪಾಚಿತ್ರದಂತೆರದಿ. ||

B. S.

Auf den Bergen, auf den Heiden.

೧. ಅದ್ರಿ ಮೇಲೆ, ಕಾಡಿನಲ್ಲೆ
ದಣಿದ,
ಹಶಿವ
ಲಕ್ಷ ಕುರಿ ಬಲ್ಲೆ.
ಅಯ್ಯೊ! ತಪ್ಪಿ ಹೋಗಿದ್ದಾವೆ;
ಸಾಕುವ
ಕುರುಬ
ಇಲ್ಲದಿರುತಾವೆ.

೨. ಯೇಸು ಕ್ರಿಸ್ತನ್ ಅಹೋರಾತ್ರ
ಕಾಯಿಯೋ,
ನಡಿಸೋ
ಮಂದೆ ಒಂದು ಮಾತ್ರ.
ಒಂದನ್ ಆದು ಕೊಂಡಿದ್ದಾನೆ;
ಅದನೆ,
ಮುಂದಕೆ
ಹೋಗಿ, ಮೇಯ್ಸುತಾನೆ.

೩. ನಮ್ಮ ನಾಮ ಸಹ ಬಲ್ಲ;
ನಮ್ಮನು
ನಿತ್ಯಕು
ಸಾಕುತಾನೆ ಅಲ್ಲ?
ಆತ ನಮ್ಮ ಕರಿಯೋಣ,
ಕ್ಷೇಮವು
ಹುಟ್ಟಿತು
ನಂಗೆ; ಸ್ತುತಿಸೋಣ!

೪. ಓ ಸಂಪೂರ್ಣ ದಾನ ದಾತ,
ನಮಗೆ
ಬಿಡದೆ
ಕೊಡು ಆತ್ಮಶಾತ!
ಅಂತ್ಯದಲ್ಲಿ ನಿನ್ನ ಪ್ರಭೆ
ತೋಚುವ
ತನಕ
ಕಾಯಿ ನಿನ್ನ ಸಭೆ!

J. M.

ಇಸ್ತಿಹಾರು.

ಸಭೆಯ ಪ್ರಯೋಜನಾರ್ಥವಾಗಿ ಪ್ರಕಟಿಸಿದ್ದೇನಂದರೆ:

೧. ಕ್ರೈಸ್ತಸಭಾಚರಿತ್ರೆ, ಕಟ್ಟಿದ್ದು . . . . ೧ ರೂ. ೮ ಆ.

ಕ್ರೈಸ್ತತ್ವ ಎಂಬ ಮರವು ಸಣ್ಣ ಬೀಜದಿಂದ ಹ್ಯಾಗೆ ಬೆಳಿಯುತ್ತಾ ಬಂತೆಂಬದು ಈ ಗ್ರಂಥದಲ್ಲಿ ತೋರಿಸಿಯದೆ. ಈ ಮರದ ಫಲ ತಿನ್ನುವವರು ಅದರ ವೃತ್ತಾಂತ ವಿಚಾರಿಸಿ ಮನಸ್ಸಿಗೆ ತರುವದು ಯುಕ್ತವೇ.

೨. ಕುಟುಂಬದಿನಚರ್ಯವು . . . . ೬ ಆ.

ಇದು ಕುಟುಂಬದ ಸಂಗತಿಗಳ ಸಮಾಚಾರ, ಅಂದರೆ ಮನೇ ಯಜಮಾನ ಯಜಮಾನಿಯು, ಅವರ ಪೂರ್ವಜರ, ಸಹೋದರ ಸಹೋದರಿಗಳ ಹೆಸರುಗಳನ್ನೂ ಮಕ್ಕಳ ಹೆಸರುಗಳನ್ನೂ, ಆದ ಮರಣಗಳನ್ನೂ, ಕುಟುಂಬದಲ್ಲಿ ನಡದ ಬೇರೆ ವಿಶೇಷ ಸಂಗತಿಗಳನ್ನೂ ಬರೆದಿಡುವ ಒಂದು ಪುಸ್ತಕ.

೩. ಕಾಲಗಣನೆಯ ಪಠವು . . . . ೬ ಆ.

ಇದು ಸಮುವೇಲನಿಂದ ಮಲಕೀಯನ ವರೆಗೆ ಇದ್ದ ಪ್ರವಾದಿಗಳ ಮತ್ತು ಇಸ್ರಯೇಲ್, ಅಷೂರ್, ಬಾಬೆಲ್, ಫರ್ಸಿಯ ಇವುಗಳ ರಾಜರ ಹೆಸರುಗಳನ್ನೂ, ಅವರು ಬದುಕಿದ ಕಾಲವನ್ನೂ ತೋರಿಸುವಂಥ, ಹಳೆ ಒಡಂಬಡಿಕೆ ಓದುವವರಿಗೆ ಬಹು ಪ್ರಯೋಜನಕ್ಕೆ ಬರುವಂಥ ಒಂದು ಪಟ್ಟಿ.

ಈ ಅಂಕೆಯ ಸಂಗಡ ಬಾಲಪತ್ರದೊಂದು ಪ್ರಕಟಿಸಲಿಕ್ಕಾಗಲಿಲ್ಲ; ಆದರೂ ಅದು ಜನವರಿ ತಿಂಗಳಲ್ಲಿ ಕಾಣಿಸುವದು.

Printed by Stolz & Reuther, Basel Mission Press, Mangalore.

ಪತ್ರ

ನಾರಿ ಪ್ರಕಟಿಸಲ್ಪಡುವದು.

LY 1870. ಅಂಕೆ ೧.

ತಿನಾಮವು.

ರಾಗಲಿ, ಚೀನ ದೇಶದವರಾಗಲಿ, ಹಬಿಷಿಯವ
ದರೂ ಸಹ, ಸಮಸ್ತವುಗಳ ಸೃಷ್ಟಿಕರ್ತನೂ ಒಡೆ
ಣ ಮಹತ್ವ ದಯ ಪ್ರೀತಿ ಇತ್ಯಾದಿ ಗುಣಲಕ್ಷಣ
ಮಾಡದೆ, ಮನೋರಾಜಿ ಕಳ ಕೊಳ್ಳದೆ, ಸಂತೋ
ವಿನ ಹೆಸರು ಉಚ್ಚಾರಣೆಯಾಗಿ ಕೇಳಿಸುತ್ತಲೇ,
ಹಗೆಯೂ ಹುಟ್ಟುವದುಂಟಲ್ಲಾ? ಇದೇ ಪ್ರಕಾರ
ಜವಾದ ಸ್ವಭಾವ ಗುಣ ಮನಸ್ಸುಗಳನ್ನು ಇನ್ನು
ಶ್ವಾಸದಲ್ಲಿ ಶೇರಿ ಸತ್‌ಕ್ರೈಸ್ತರಾಗದೆ ಇರುವಂಥವರ
ತಂದೆಯಾದ ದೇವರನ್ನೂ ಧರ್ಮನೀತಿಗಳನ್ನೂ
ಕ್ಕೆ ಅಡ್ಡಿ ಮಾಡದೆ, ಒಂದು ವೇಳೆ ಸಮ್ಮತಿಸಿ, ಸಂ
ಆದರೆ ಯೇಸುನಾಥನ ಸುದ್ದಿಯನ್ನು ತೆಗದರೆ,
ಾಗೆ ಆಗುತ್ತದೆ. ಸದ್ವೇಶದ ಸಾರಾಂಶವೂ ಮಧ್ಯ
ಕ್ಯವೆಂಬ ಜೋತಿರ್ಮಂಡಲದಲ್ಲಿ ಸೂರ್ಯನಂತೆ ಪ್ರ
ರಕ್ಷಾತ್ರಾಣಭರಿತವಾಗಿಯೂ, ನಿತ್ಯ ರಕ್ಷಣೆಯನ್ನು
ಕಲ ಮಧುರ ರಸಾದಿಗಳಿಗಿಂತ ಇಷ್ಟವಾಗಿಯೂ
ತದಂಥಾ ಮನುಷ್ಯನ ಹೃದಯಕ್ಕೆ, ಕಣ್ಣಿಗೆ ಮೆಣ
ಹ್ಯಾಗೋ, ಹಾಗೆಯೇ; ಮನುಷ್ಯನ ಸ್ವಾಭಾವಿಕ
ಚ್ಚುತನವಾಗಿಯೂ ಶಂಕಾಟಂಕವಾಗಿಯೂ ಕಾ
ದ ಮನುಷ್ಯನಿಗೆ ಈ ಹೆಸರಿಗಿಂತ ಅರೋಚಿಕೆಯಾ